ಸೆಪ್ಟೆಂಬರ್ 2017, ಸಂಚಿಕೆ 3

*Magazine on Low External Input Sustainable Agriculture*
*Compilation of selected translated articles into Kannada*

ಬಾಹ್ಯ ಪರಿಕರಗಳ ಮಿತ ಬಳಕೆಯ ಸುಸ್ಥಿರ ಕೃಷಿ ಕುರಿತ ಮ್ಯಾಗಜಿನ್.
ಕನ್ನಡಕ್ಕೆ ಅನುವಾದಿಸಿದ ಆಯ್ದ ಲೇಖನಗಳ ಸಂಕಲನ

# LEISA INDIA

# ಲೀಸಾ ಇಂಡಿಯ

## ವಿಶೇಷ ಕನ್ನಡ ಸಂಚಿಕೆ



# ಲೀಸಾ ಇಂಡಿಯ

**ವಿಶೇಷ ಕನ್ನಡ ಸಂಚಿಕೆ**

**ಸೆಪ್ಟೆಂಬರ್ 2017, ಸಂಚಿಕೆ 3**

ಈ ಸಂಚಿಕೆಯು 'ಲೀಸಾ ಇಂಡಿಯ' ಆಂಗ್ಲ ಆವೃತ್ತಿಯಲ್ಲಿ ಪ್ರಕಟವಾದ ಆಯ್ದ ಲೇಖನಗಳ ಅನುವಾದಗಳನ್ನು ಒಳಗೊಂಡಿದೆ.



**ವಿಳಾಸ:** ಎ.ಎಂ.ಇ. ಪ್ರತಿಷ್ಠಾನ
ನಂ.204, 100 ಫೀಟ್ ರಿಂಗ್‌ರೋಡ್
ಮೂರನೇ ಫೇಸ್
ಬನಶಂಕರಿ ಎರಡನೇ ಬ್ಲಾಕ್
ಮೂರನೇ ಸ್ಟೇಜ್
ಬೆಂಗಳೂರು 560085
ದೂರವಾಣಿ+91–080–26699512/ 26699522
ಫ್ಯಾಕ್ಸ್ +91–080–26699410
ಈಮೈಲ್: leisaindia@yahoo.co.in



**ಲೀಸಾ ಇಂಡಿಯ**
'ಲೀಸಾ ಇಂಡಿಯ' ಆಂಗ್ಲ ಆವೃತ್ತಿಯನ್ನು ಎ.ಎಂ.ಇ. ಪ್ರತಿಷ್ಠಾನ ಹಾಗೂ ಇಳೆಯ (ILEIA) ಸಂಸ್ಥೆ ಸಹಯೋಗದೊಂದಿಗೆ ತ್ರೈಮಾಸಿಕವಾಗಿ ಪ್ರಕಟಿಸುತ್ತಿದೆ.

**ಸಂಪಾದಕೀಯ ಮಂಡಳಿ**
**ಮುಖ್ಯ ಸಂಪಾದಕ :** ಕೆ.ವಿ.ಎಸ್.ಪ್ರಸಾದ್
**ವ್ಯವಸ್ಥಾಪಕ ಸಂಪಾದಕಿ :** ಟಿ.ಎಂ.ರಾಧ
**ಕನ್ನಡ ಅನುವಾದ**
ಮಿತ್ರಮಾಧ್ಯಮ, ಬೆಂಗಳೂರು
**ಕನ್ನಡ ಅನುವಾದಗಳ ಸಮನ್ವಯ**
ಪೂರ್ಣಿಮಾ
**ಕಾರ್ಯ ನಿರ್ವಹಣೆ**
ರುಕ್ಮಿಣಿ ಜಿ.ಜಿ.
**ಪುಟ ವಿನ್ಯಾಸ**
ಬೇಳೂರು ಸುದರ್ಶನ
**ಮುದ್ರಣ**
ಸ್ವಾನ್ ಪ್ರಿಂಟ್, ಬೆಂಗಳೂರು
**ಮುಖಪುಟ ಚಿತ್ರ**
ಟಿಬಿಎಫ್‌ಎಸ್‌ನೊಂದಿಗೆ ಕುಟುಂಬ ಕೃಷಿ
**ಚಿತ್ರ ಸೌಜನ್ಯ:** ಎ.ಎಂ.ಇ.ಎಫ್


## ಲೀಸಾ ಮ್ಯಾಗಜೀನ್

**ವಿವಿಧ ಆವೃತ್ತಿಗಳು**

ಲ್ಯಾಟಿನ್ ಅಮೇರಿಕನ್, ಪಶ್ಚಿಮ ಆಫ್ರಿಕನ್ ಮತ್ತು ಬ್ರೆಜಿಲಿಯನ್ ಆವೃತ್ತಿಗಳು

## ಲೀಸಾ ಇಂಡಿಯ ಮ್ಯಾಗಜೀನ್

**ಇತರೆ ಪ್ರಾದೇಶಿಕ ಆವೃತ್ತಿಗಳು**

ಹಿಂದಿ, ಒರಿಯಾ, ಮರಾಠಿ, ಪಂಜಾಬಿ, ತಮಿಳು ಮತ್ತು ತೆಲುಗು

---


**ಈ ಸಂಚಿಕೆಯಲ್ಲಿ ಪ್ರಕಟವಾದ ವಿಷಯಗಳನ್ನು ಎಲ್ಲಾ ರೀತಿಯ ಎಚ್ಚರಿಕೆಯಿಂದ ಪರಿಶೀಲಿಸಿ ಸಾಧ್ಯವಾದಷ್ಟು ಸರಿಯಾಗಿ ನೀಡಲು ಪ್ರಯತ್ನಿಸಲಾಗಿದೆ. ಹೀಗಿದ್ದೂ, ಅಂತಿಮವಾಗಿ ಇಲ್ಲಿ ಪ್ರಕಟವಾದ ಲೇಖನಗಳಲ್ಲಿರುವ ವಿಷಯಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಇಲ್ಲಿ ಪ್ರಕಟವಾದ ಲೇಖನಗಳ ಪಡಿಯಚ್ಚನ್ನು ಮಾಡಿ ಇತರ ಓದುಗರಿಗೆ ಹಂಚಲು ಸಂಪಾದಕೀಯ ಮಂಡಳಿಯ ಒಪ್ಪಿಗೆಯಿದೆ.**


---


**ಮಿಸೆರಿಯೊರ್ ನೆರವಿನೊಂದಿಗೆ ಎ.ಎಂ.ಇ. ಪ್ರತಿಷ್ಠಾನದಿಂದ ಪ್ರಕಟಿತ.**


## ಪ್ರಿಯ ಓದುಗರೇ.

ಸೆಪ್ಟೆಂಬರ್ 2017ರ ಈ ಸಂಚಿಕೆಯನ್ನು ನಿಮ್ಮೊಂದಿಗೆ ಹಂಚಿಕೊಳ್ಳುವುದಕ್ಕೆ ನಮಗೆ ಸಂತೋಷವಾಗುತ್ತಿದೆ. ಸ್ಥಳೀಯ ಅರಿವನ್ನು ಹೇಗೆ ದಾಖಲೀಕರಣ ಮಾಡಲಾಗಿದೆ, ಹೇಗೆ ಸ್ಥಳೀಯ ಆಹಾರಗಳು ಆಹಾರ ವೈವಿಧ್ಯವನ್ನು ಒದಗಿಸುತ್ತವೆ, ಹೇಗೆ ಮಿಶ್ರ ಕೃಷಿ ಮತ್ತು ಮರ ಆಧಾರಿತ ಕೃಷಿಯು ಸಹಿಷ್ಣುತೆಯನ್ನು ಹೆಚ್ಚಿಸಿ ರೈತರ ವೈವಿಧ್ಯಮಯ ಬೇಡಿಕೆಗಳನ್ನು ಪೂರೈಸಬಲ್ಲದು ಎಂಬ ಹಲವು ವಿಷಯಗಳ ಮೇಲೆ ಬೆಳಕು ಚೆಲ್ಲುವ ಲೇಖನಗಳು ಈ ಸಂಚಿಕೆಯಲ್ಲಿದೆ.

ಹೇಗೆ ಅಂತ್ರ ಸಂಸ್ಥೆಯು ಸ್ಥಳೀಯ ಅರಿವು ಮತ್ತು ಜಾನುವಾರು ಸಾಕಣೆ ದಾಖಲೀಕರಣವನ್ನು ನಡೆಸಿತು ಎಂಬುದನ್ನು ಜ್ಞಾನದ ಸಹಸೃಷ್ಟಿ ಕುರಿತ ಲೇಖನವು ವಿವರಿಸುತ್ತದೆ. ಜಾರ್ಖಂಡ್‌ನ ಪಹಾಡಿಯಾ ಗುಡ್ಡಗಾಡು ಸಮುದಾಯವು ಹೇಗೆ ಸ್ಥಳೀಯ ಜೀವವೈವಿಧ್ಯದ ದಾಖಲೀಕರಣ, ಸಂರಕ್ಷಣೆಯ ಮೂಲಕ ತಮ್ಮ ಆಹಾರ ಪದ್ಧತಿಯಲ್ಲಿದ್ದ ವೈವಿಧ್ಯವನ್ನು ಮರಳಿ ಗಳಿಸಿಕೊಂಡರು ಎಂಬುದು ತುಂಬಾ ಕುತೂಹಲಕರವಾಗಿದೆ. ಮಿಶ್ರ ಬೆಳೆ ಮತ್ತು ಸಮುದಾಯ ನಿರ್ವಹಣೆಯ ಬಿತ್ತನೆ ಬೀಜ ಬ್ಯಾಂಕುಗಳು ಕೃಷಿ ಸಹಿಷ್ಣುತೆ ಮತ್ತು ಸುಸ್ಥಿಯ ಜೀವನೋಪಾಯವನ್ನು ರೂಪಿಸಿದ ಬಗ್ಗೆ ಇಡಿಐ ಆಲಿವರ್ ಕಿಂಗ್ ಲೇಖನವು ಬೆಳಕು ಚೆಲ್ಲಿದೆ. ಸಣ್ಣ ರೈತರ ಬಹು ಬಗೆಯ ಬೇಡಿಕೆಗಳನ್ನು ಪೂರೈಸುವ ಕುರಿತ ಲೇಖನವು ಹೇಗೆ ಮರ ಆಧಾರಿತ ಕೃಷಿ ವ್ಯವಸ್ಥೆಯು ಬಹುಬಗೆಯ ಲಾಭಗಳನ್ನು ನೀಡುವ ಬಗ್ಗೆ ಚರ್ಚಿಸಿದೆ. ಭಾಗೀದಾರಿ ಖಾತ್ರಿ ವ್ಯವಸ್ಥೆಯ ಕುರಿತಾದ ಲೇಖನವು ಹೇಗೆ ರೈತರು ಪಿಜಿಎಸ್ ಜಾಲಗಳ ಮೂಲಕ ರೈತ–ರೈತರ ನಡುವೆ ಜ್ಞಾನದ ಮತ್ತು ನಾವೀನ್ಯದ ವಿನಿಮಯವನ್ನು ಉತ್ತೇಜಿಸಿದೆ ಎಂಬುದನ್ನು ವಿವರಿಸಿದೆ.

ನಿಮ್ಮ ಪ್ರತಿಕ್ರಿಯೆಯನ್ನು ನಾವು ನಿರೀಕ್ಷಿಸಿದ್ದೇವೆ. ಈ ಸಂಚಿಕೆಯನ್ನು ನಿಮ್ಮ ಯಾವುದೇ ಕೃಷಿ ಮಿತ್ರರು ಓದಬೇಕು ಎಂದು ನೀವು ಬಯಸಿದರೆ, ಅವರ ಸಂಪೂರ್ಣ ಅಂಚೆ ವಿಳಾಸವನ್ನು ನಮಗೆ ಕಳಿಸಿಕೊಡಿ. ಅವರಿಗೆ ಸಂಚಿಕೆಯನ್ನು ಕಳಿಸಿಕೊಡಲು ನಮಗೆ ಸಂತಸವಾಗುತ್ತದೆ.

– ಸಂಪಾದಕರು

## ಲೀಸಾ LEISA www.leisaindia.org

ಲೀಸಾ (LEISA)ವು ಬಾಹ್ಯ ಪರಿಕರಗಳ ಮಿತ ಬಳಕೆಯ ಸುಸ್ಥಿರ ಕೃಷಿಯ ಕುರಿತಾಗಿದೆ. ಇದು ಪಾರಿಸರಿಕವಾಗಿ ಯೋಗ್ಯವಾದ ವಿಧಾನದಲ್ಲಿ ತಮ್ಮ ಉತ್ಪಾದಕತೆ ಮತ್ತು ವರಮಾನವನ್ನು ಹೆಚ್ಚಿಸಿಕೊಳ್ಳಲು ಬಯಸುವ ರೈತರಿಗೆ ಇರುವ ತಾಂತ್ರಿಕ ಮತ್ತು ಸಾಮಾಜಿಕ ಆಯ್ಕೆಗಳ ಕುರಿತಾಗಿದೆ. ಲೀಸಾವು ಸ್ಥಳೀಯ ಸಂಪನ್ಮೂಲ ಮತ್ತು ನೈಸರ್ಗಿಕ ವಿಧಾನಗಳ ಹಿತ ಬಳಕೆಯ – ಒಂದೊಮ್ಮೆ ಅಗತ್ಯವೆನಿಸಿದರೆ ಬಾಹ್ಯ ಒಳಸುರಿಗಳ ಸುರಕ್ಷಿತ ಮತ್ತು ದಕ್ಷ ಬಳಕೆಯ – ಕುರಿತಾಗಿದೆ. ಇದು ತಮ್ಮ ಸ್ವಂತ ಜ್ಞಾನ, ಕೌಶಲ್ಯ, ಮೌಲ್ಯ, ಸಂಸ್ಕೃತಿ ಮತ್ತು ಸಂಸ್ಥೆಗಳನ್ನು ಮೂಲವಾಗಿಸಿಕೊಂಡು ಭವಿಷ್ಯವನ್ನು ಕಟ್ಟಿಕೊಳ್ಳಲು ಬಯಸುವ ಪುರುಷ ಮತ್ತು ಮಹಿಳಾ ರೈತರನ್ನು ಸಬಲರನ್ನಾಗಿಸುವುದು ಮತ್ತು ಸಮುದಾಯಗಳ ಕುರಿತಾಗಿದೆ. ಲೀಸಾವು ಕೃಷಿಯನ್ನು ಸುಧಾರಿಸುವ ಮತ್ತು ಅದನ್ನು ಬದಲಾಗುತ್ತಿರುವ ಅಗತ್ಯ ಮತ್ತು ಸನ್ನಿವೇಶಗಳಿಗೆ ತಕ್ಕಂತೆ ಹೊಂದಿಸುವ ಕೃಷಿಕರು ಮತ್ತು ಇತರೆ ಪಾತ್ರಧಾರಿಗಳ ಸಾಮರ್ಥ್ಯವನ್ನು ಬಲಪಡಿಸುವ ಭಾಗೇದಾರಿ ವಿಧಾನಗಳ ಕುರಿತಾಗಿದೆ. ಲೀಸಾವು ದೇಸಿ ಮತ್ತು ವೈಜ್ಞಾನಿಕ ಜ್ಞಾನವನ್ನು ಮಿಳಿತಗೊಳಿಸಲು ಬಯಸುತ್ತದೆ ಮತ್ತು ಈ ಕುರಿತ ಹೆಚ್ಚಿನ ಬೆಳವಣಿಗೆಗೆ ಅನುಕೂಲಕರ ವಾತಾವರಣವನ್ನು ಸೃಜಿಸಲು ನೀತಿ ನಿರೂಪಣೆಯ ಮೇಲೆ ಪ್ರಭಾವ ಬೀರಬಯಸುತ್ತದೆ. ಲೀಸಾವು ಒಂದು ಪರಿಕಲ್ಪನೆಯಾಗಿದೆ; ಒಂದು ಮಾರ್ಗ ಮತ್ತು ಒಂದು ರಾಜಕೀಯ ಸಂದೇಶವಾಗಿದೆ.

## ಎ ಎಂ ಇ ಪ್ರತಿಷ್ಠಾನ www.amefound.org

ಎ ಎಂ ಇ ಪ್ರತಿಷ್ಠಾನವು ಬೇಸಾಯದ ಪರ್ಯಾಯಗಳನ್ನು ರೂಪಿಸುವ, ಕೃಷಿಕರ ಅರಿವನ್ನು ಸಿರಿವಂತಗೊಳಿಸುವ, ಅಭ್ಯುದಯ ಸಂಸ್ಥೆಗಳನ್ನು ಒಗ್ಗೂಡಿಸುವ ಮತ್ತು ಅನುಭವಗಳನ್ನು ಹಂಚಿಕೊಳ್ಳುವ ಮೂಲಕ ದಕ್ಷಿಣ ಪ್ರಸ್ತಭೂಮಿಯ ಅರೆ ಒಣ ಪ್ರದೇಶಗಳ ಸಣ್ಣ ಮತ್ತು ಮಧ್ಯಮ ಕೃಷಿಕರಲ್ಲಿ ಪಾರಿಸರಿಕ ಕೃಷಿಯನ್ನು ಉತ್ತೇಜಿಸುತ್ತಿದೆ.


**ವಿಶ್ವಸ್ಥರು**

| | | |
|---|---|---|
| **ಚೇರ್ಮನ್** | : | ಶ್ರೀ ಚಿರಂಜೀವಿ ಸಿಂಗ್, ಐ.ಎ.ಎಸ್. (ನಿ.,) |
| **ಖಜಾಂಚಿ** | : | ಶ್ರೀ ಬಿ.ಕೆ. ಶಿವರಾಂ |
| **ಸದಸ್ಯರು** | : | ಡಾ.ವಿಠಲ ರಾಜನ್, ಡಾ.ಎಂ.ಮಹಾದೇವಪ್ಪ, ಡಾ.ಎನ್.ಜಿ.ಹೆಗಡೆ, ಡಾ.ಟಿ.ಎಂ. ತ್ಯಾಗರಾಜನ್, ಪ್ರೊ.ವಿ.ವೀರಭದ್ರಯ್ಯ, ಡಾ.ಎ.ರಾಜಣ್ಣ, ಡಾ.ವೆಂಕಟೇಶ್ ತಗತ್, ಡಾ.ಸ್ಮಿತಾ ಪ್ರೇಮಚಂದರ್ |

**ಕಾರ್ಯಕಾರಿ ನಿರ್ದೇಶಕರು:** ಶ್ರೀ ಕೆ.ವಿ.ಎಸ್. ಪ್ರಸಾದ್


## ಮಿಸೆರಿಯೊರ್ MISEREOR www.misereor.org

ಅಭಿವೃದ್ಧಿ ಸಹಕಾರ ಸಂಘಟನೆ ಮಿಸೆರಿಯೊರ್‌ನ್ನು ಜರ್ಮನ್ ಕ್ಯಾಥೋಲಿಕ್ ಬಿಶಪ್‌ರು ಇಸವಿ 1958ರಲ್ಲಿ ಸ್ಥಾಪಿಸಿದರು. ಕಳೆದ 50 ವರ್ಷಗಳಿಂದ ಮಿಸೆರಿಯೊರ್ ಆಫ್ರಿಕ, ಏಷಿಯಾ, ಹಾಗೂ ಲ್ಯಾಟಿನ್ ಅಮೇರಿಕಾಗಳಲ್ಲಿ ಬಡತನದ ವಿರುದ್ಧದ ಹೋರಾಟಕ್ಕೆ ವಚನಬದ್ಧವಾಗಿದೆ. ಧರ್ಮ, ಪರಂಪರೆ ಅಥವಾ ಲಿಂಗವನ್ನು ಪರಿಗಣಿಸದೆ ಅಗತ್ಯವಿರುವ ಯಾವುದೇ ಮಾನವ ಜೀವಿಗೂ ಮಿಸೆರಿಯೊರ್‌ನ ಸಹಕಾರ ಲಭ್ಯವಿದೆ.

ಬಡವರು ಮತ್ತು ಅನುಕೂಲರಹಿತರು ನಡೆಸುವ ಮತ್ತು ಮಾಲೀಕತ್ವದ ಯೋಜನೆಗಳಿಗೆ ಮಿಸೆರಿಯೊರ್ ಬೆಂಬಲ ಲಭ್ಯವಿದೆ. ಇದು ಸ್ಥಳೀಯ ಪಾಲುಗಾರರ ಜೊತೆ ಕೆಲಸ ಮಾಡಲು ಮೊದಲ ಆದ್ಯತೆ ನೀಡುತ್ತದೆ. ಅವುಗಳೆಂದರೆ ಚರ್ಚ್–ಆಧಾರಿತ ಸಂಸ್ಥೆಗಳು, ಸರಕಾರೇತರ ಸಂಸ್ಥೆಗಳು, ಸಾಮಾಜಿಕ ಚಳುವಳಿಗಳು ಮತ್ತು ಸಂಶೋಧನ ಸಂಸ್ಥೆಗಳು. ಯೋಜನೆಗಳ ಅನುಷ್ಠಾನ ಮತ್ತು ಸ್ಥಳೀಯ ಅಭಿವೃದ್ಧಿ ಪ್ರಕ್ರಿಯೆಯನ್ನು ರಚಿಸುವಲ್ಲಿ ಫಲಾನುಭವಿಗಳ ಜೊತೆಗೂಡಿ ಪಾಲುಗಾರರು ಸಹಾಯಮಾಡುವಲ್ಲಿ ತೊಡಗಿಸಿಕೊಂಡಿದ್ದಾರೆ. ಈ ರೀತಿಯಾಗಿ ಮಿಸೆರಿಯೊರ್ ತನ್ನ ಪಾಲುಗಾರರೊಡಗೂಡಿ ನಿರಂತರವಾಗಿ ಬದಲಾಗುತ್ತಿರುವ ಸವಾಲುಗಳಿಗೆ ಪ್ರತಿಸ್ಪಂದಿಸುತ್ತದೆ.

# ವಿಷಯಸೂಚಿ


## ಜ್ಞಾನದ ಸಾಮುದಾಯಿಕ ಸಹಸೃಷ್ಟಿ

■ ನಿತ್ಯಾ ಸಾಂಬಮೂರ್ತಿ ಘೋಟ್ಗೆ

ಜಾನುವಾರು ಸಾಕಣೆ ವಿಧಾನಗಳು ಕಳೆದ 25 ವರ್ಷಗಳಿಂದ ಸಾಕಷ್ಟು ಬದಲಾವಣೆಯಾಗಿವೆ. ಆಂಧ್ರಪ್ರದೇಶದ 'ಅಂತ್ರ' (ANTHRA)ವು ಗುಡ್ಡಗಾಡು ಜನರ, ಜಾನುವಾರುಗಾಹಿಗಳ ಮತ್ತು ಸಮುದಾಯಗಳಲ್ಲಿರುವ ಮಹಿಳೆಯರ ಜ್ಞಾನ ಮತ್ತು ವಿಧಾನಗಳನ್ನು ದಾಖಲಿಸುವ ಮೂಲಕ ಸ್ಥಳೀಯ ಜಾನುವಾರು ಜ್ಞಾನವನ್ನು ಸಂರಕ್ಷಿಸಲು ಉಪಕ್ರಮಿಸಿದೆ. ಸನ್ನಿವೇಶಗಳು ಸುಧಾರಿಸಿದಾಗ ಈ ಜ್ಞಾನವನ್ನು ಮತ್ತೆ ಬಳಕೆಗೆ ತರಬಹುದು ಎಂಬುದೇ ಇಲ್ಲಿರುವ ನಿರೀಕ್ಷೆಯಾಗಿದೆ. **4**

## ಸಾಗುವಳಿ ಮಾಡದ ಆಹಾರಗಳು : ರಹಸ್ಯ ಐಸಿರಿ

■ ಅಂಶುಮನ್ ದಾಸ್

ಝಾರ್ಖಂಡ್‌ನ ಪಹಾಡಿಯಾ ಗುಡ್ಡಗಾಡು ಜನರಲ್ಲಿ ಕಾಡಿನಿಂದ ಸಂಗ್ರಹಿಸುವ ಸಾಗುವಳಿಯಾಗದ ಆಹಾರದ ಪ್ರಮಾಣ ಕ್ರಮೇಣವಾಗಿ ಕಡಮೆಯಾಗುತ್ತಿದೆ. ಸಂರಕ್ಷಣೆ, ಕಾಪಿಟ್ಟುಕೊಳ್ಳುವಿಕೆ, ಸಾಗುವಳಿಯಾಗದ ಆಹಾರದ ಸಂಸ್ಕರಣೆ – ಈ ಕ್ರಮಗಳಿಂದಾಗಿ ಅವು ಮತ್ತೊಮ್ಮೆ ತಮ್ಮ ಸ್ಥಾನವನ್ನು ಮರುಗಳಿಸಿಕೊಂಡು ಸಮುದಾಯದ ಆಹಾರ ವ್ಯವಸ್ಥೆಯ ವೈವಿಧ್ಯವನ್ನು ವಿಸ್ತರಿಸುವಲ್ಲಿ ಮತ್ತು ಹಸಿವು – ಅಪೌಷ್ಟಿಕತೆಯ ಸಮಸ್ಯೆಗಳನ್ನು ನಿವಾರಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ. **7**

## ಬೆಳೆ ವೈವಿಧ್ಯದ ಹೆಚ್ಚಳದಿಂದ ಕೃಷಿಗೆ ಚೇತನ

■ ಇಡಿಐ ಆಲಿವರ್ ಕಿಂಗ್, ಎಸ್ ಅಬೂಬಕರ್ ಸಿದ್ದಿಕ್, ಗಿರಿಗನ್ ಗೋಪಿ ಮತ್ತು ನಟ್ ಕವ್

ವರಮಾನವನ್ನು ಹೆಚ್ಚಿಸಲು ಹಣದ ಬೆಳೆಗಳಿಗಾಗಿ ಏಕಬೆಳೆ ಕೃಷಿ ಮಾಡುವ ವಿಧಾನವು ಮಿಶ್ರಬೆಳೆ ವ್ಯವಸ್ಥೆಯನ್ನು ಮತ್ತು ಅದಕ್ಕೆ ಸಂಬಂಧಿಸಿದ ಸ್ಥಳೀಯ ಆಹಾರ ವೈವಿಧ್ಯವನ್ನು ಸ್ಥಳಾಂತರಿಸಿದೆ. ಭಾಗೀದಾರಿ ವೈವಿಧ್ಯದ ತಳಿ ಆಯ್ಕೆ, ಬೇಳೆಕಾಳುಗಳೊಂದಿಗೆ ಅಂತರಬೆಳೆ ಪ್ರಯೋಗಗಳು ಮತ್ತು ಸ್ಥಳೀಯ ಸಿರಿಧಾನ್ಯಗಳ, ಬೇಳೆಕಾಳುಗಳ ಉತ್ತೇಜನ, ಸಮುದಾಯ ಬೀಜ ಬ್ಯಾಂಕುಗಳ ಮೂಲಕ ಸ್ಥಳೀಯ ಸಿರಿಧಾನ್ಯ ಬೀಜ ಉತ್ಪಾದನೆ ಇವುಗಳು ಈಗ ಕೃಷಿಗೆ ಚೇತನ ನೀಡಿ, ವರಮಾನವನ್ನೂ ಹೆಚ್ಚಿಸಿವೆ. **10**

## ಸಣ್ಣ ರೈತರ ಬಹುಬೇಡಿಕೆಗಳ ಪೂರೈಕೆ

■ ಎಂ ಎನ್ ಕುಲಕರ್ಣಿ ಮತ್ತು ಎಸ್ ಎಂ ಹಿರೇಮಠ

ಕೃಷಿಪರಿಸರ ವಿಜ್ಞಾನವನ್ನು ಉತ್ತೇಜಿಸುವಲ್ಲಿ ಸರ್ಕಾರೇತರ ಸ್ವಯಂಸೇವಾ ಸಂಸ್ಥೆಗಳು ಮುಂಚೂಣಿಯಲ್ಲಿವೆ. ರೈತರನ್ನೇ ಅಭ್ಯುದಯದ ಭಾಗೀದಾರರನ್ನಾಗಿ ಮಾಡಿದ ಬೈಫ್ ಕರ್ನಾಟಕದ 505 ಹಳ್ಳಿಗಳಲ್ಲಿನ 21 ಸಾವಿರ ರೈತರ ಜೀವನೋಪಾಯದ ಭದ್ರತೆಯನ್ನು ಹೆಚ್ಚಿಸಿದೆ. ಬೀಜಗಳು, ನಾಟಿಗೆ ಬೇಕಾದ ವಸ್ತುಗಳು, ಜ್ಞಾನ ಮತ್ತು ಉತ್ತೇಜನ ಇದ್ದರೆ ಈಗಿನ ಅಸ್ಥಿರ ಕೃಷಿಯನ್ನು ಸುಸ್ಥಿರ ಕೃಷಿಯೆಡೆಗೆ ಕರೆದೊಯ್ಯಬಹುದು ಎಂಬುದನ್ನು ಇದು ಸಾಬೀತುಪಡಿಸಿದೆ. **13**

## ಸಹಭಾಗಿತ್ವದ ಖಾತರಿ ಪದ್ಧತಿಗಳು: ಜ್ಞಾನ ವಿನಿಮಯಕ್ಕೆ ಒಂದು ವೇದಿಕೆ

■ ಕಾರ್ನೇಲಿಯಾ ಕಿಶ್ನರ್

ಕೃಷಿ ವಿಧಾನಗಳನ್ನು ಅಭಿವೃದ್ಧಿಗೊಳಿಸುವಲ್ಲಿ ಸ್ಥಳೀಯ ರೈತರ ಜ್ಞಾನದ ಮೌಲ್ಯ ದಿನದಿಂದ ದಿನಕ್ಕೆ ಹೆಚ್ಚು ಮನ್ನಣೆ ಪಡೆಯುತ್ತಿದೆ. ಸಹಭಾಗಿತ್ವದ ಖಾತರಿ ಪದ್ಧತಿಗಳು ಅಪಾರ ಸಾಮರ್ಥ್ಯ ಹೊಂದಿದ್ದು, ರೈತರಲ್ಲಿ ಪರಸ್ಪರ ಜ್ಞಾನ ವಿನಿಮಯಕ್ಕೆ ಪ್ರೋತ್ಸಾಹ ನೀಡಿ, ಆ ಮೂಲಕ ರೈತರ ಜ್ಞಾನ ವಿಕಾಸಕ್ಕೆ ಕೊಡುಗೆ ನೀಡುತ್ತಿದೆ. **16**

# ಜ್ಞಾನದ ಸಾಮುದಾಯಿಕ ಸಹಸೃಷ್ಟಿ

■ ನಿತ್ಯಾ ಸಾಂಬಮೂರ್ತಿ ಘೋಟ್ಗೆ

**ಜಾನುವಾರು ಸಾಕಣೆ ವಿಧಾನಗಳು ಕಳೆದ 25 ವರ್ಷಗಳಿಂದ ಸಾಕಷ್ಟು ಬದಲಾವಣೆಯಾಗಿವೆ. ಆಂಧ್ರಪ್ರದೇಶದ 'ಅಂತ್ರ' (ANTHRA)ವು ಗುಡ್ಡಗಾಡು ಜನರ, ಜಾನುವಾರುಗಾಹಿಗಳ ಮತ್ತು ಸಮುದಾಯಗಳಲ್ಲಿರುವ ಮಹಿಳೆಯರ ಜ್ಞಾನ ಮತ್ತು ವಿಧಾನಗಳನ್ನು ದಾಖಲಿಸುವ ಮೂಲಕ ಸ್ಥಳೀಯ ಜಾನುವಾರು ಜ್ಞಾನವನ್ನು ಸಂರಕ್ಷಿಸಲು ಉಪಕ್ರಮಿಸಿದೆ. ಸನ್ನಿವೇಶಗಳು ಸುಧಾರಿಸಿದಾಗ ಈ ಜ್ಞಾನವನ್ನು ಮತ್ತೆ ಬಳಕೆಗೆ ತರಬಹುದು ಎಂಬುದೇ ಇಲ್ಲಿರುವ ನಿರೀಕ್ಷೆಯಾಗಿದೆ.**



ಚಿತ್ರ: ಲೇಖಕರು

ಕೆಲವು ರೋಗಗಳನ್ನು ವಾಸಿ ಮಾಡಬಲ್ಲೆ ಎಂಬ ವಿಶ್ವಾಸ ಹೊಂದಿರುವ ವೈದ್ಯ.

ಇಪ್ಪತ್ತೈದು ವರ್ಷಗಳ ಹಿಂದೆ, 1990ರ ವರ್ಷಗಳಲ್ಲಿ ಕೃಷಿ ಮತ್ತು ಜಾನುವಾರು ಸಾಕಣೆಯು ಭಾರತದ ಶೇಕಡಾ 70ಕ್ಕೂ ಹೆಚ್ಚು ಜನಸಂಖ್ಯೆಯನ್ನು ನಿರ್ವಹಿಸಿತ್ತು. ದೇಶದಾದ್ಯಂತ ವ್ಯಾಪಿಸಿರುವ ಲಕ್ಷಗಟ್ಟಲೆ ಸಣ್ಣ ಹಿಡುವಳಿದಾರರು ಭಾರೀ ಪ್ರಮಾಣದ ಜಾನುವಾರುಗಳನ್ನು ಹೊಂದಿದ್ದರು. ಔಪಚಾರಿಕ ಪ್ರಾಣಿ ಸ್ವಾಸ್ಥ್ಯ ನಿರ್ವಹಣಾ ವ್ಯವಸ್ಥೆಯು ತುಂಬಾ ಸೀಮಿತವಾಗಿತ್ತು; ಅದು ಹೆಚ್ಚು ಸಂಖ್ಯೆಯ ಜಾನುವಾರು ಸಾಕಣೆದಾರರನ್ನು ತಲುಪುತ್ತಿರಲಿಲ್ಲ. ಅದರಲ್ಲೂ ರಸ್ತೆಗಳೇ ಇಲ್ಲದ, ಕೇವಲ ದೋಣಿ ಅಥವಾ ಹಲವು ಗಂಟೆಗಳ ನಡಿಗೆಯ ಮೂಲಕವೇ ತಲುಪಬೇಕಾದ, ಅತ್ಯವಶ್ಯವಾದ ಲಸಿಕೆಗಳನ್ನು ಸಂಗ್ರಹಿಸಿ ಇಡಲು ಬೇಕಾದ ರೆಫ್ರಿಜರೇಟರ್‌ಗಳನ್ನು ನಿರ್ವಹಿಸಲು ಬೇಕಾದ ವಿದ್ಯುಚ್ಛಕ್ತಿಯೇ ಇಲ್ಲದ, ಔಷಧಗಳ ಹೊಸ ದಾಸ್ತಾನನ್ನು ಖರೀದಿಸಲು ಹಲವು ಕಿಲೋಮೀಟರ್‌ಗಳ ದೂರದವರೆಗೆ ಯಾವುದೇ ಔಷಧದ ಅಂಗಡಿಗಳೂ ಇಲ್ಲದ, ತೀವ್ರ ನೀರಿನ ಕೊರತೆಯಿಂದಾಗಿ ಸಾಧನಗಳನ್ನು ಕ್ರಿಮಿಶುದ್ಧಗೊಳಿಸಲು ಸಮಸ್ಯೆಗಳಿರುವ ಈ ಹಳ್ಳಿಗಳಲ್ಲಿ ಇದಾವ ಅನುಕೂಲಗಳೇ ಇರಲಿಲ್ಲ.

ಈ ಎಲ್ಲಾ ಮಿತಿಗಳ ನಡುವೆಯೂ ನಾವು ನಿರೀಕ್ಷಿಸಿದಂತೆ ದೊಡ್ಡ ಪ್ರಮಾಣದಲ್ಲಿ ಪ್ರಾಣಿಗಳು ಸಾಯಲಿಲ್ಲ ಎಂಬುದನ್ನು ನಾವು ಗಮನಿಸಿದೆವು. ರಿಂಡರ್‌ಪೆಸ್ಟ್ ಮತ್ತು ಪಾಕ್ಸ್ ಸಾಂಕ್ರಾಮಿಕ ರೋಗಗಳಿಂದ ಭಾರೀ ಪ್ರಮಾಣದಲ್ಲಿ ಪ್ರಾಣಿಗಳು ಸತ್ತವು ಎಂಬುದು ವಾಸ್ತವ. ಆದರೆ ಒಟ್ಟಾರೆಯಾಗಿ ನೋಡಿದರೆ, ಹಲವು ಹಳ್ಳಿಗಳಲ್ಲಿ ಪ್ರಾಣಿಗಳು ಚಟುವಟಿಕೆಯಿಂದ ಕೂಡಿದ್ದವು; ಆರೋಗ್ಯಕರವಾಗಿದ್ದವು ಮತ್ತು ಜೀವನ ನಿರ್ವಹಣೆಗೆ ಕೊಡುಗೆ ನೀಡುತ್ತಿದ್ದವು. ಇದನ್ನೇ ಇನ್ನೂ ಶೋಧಿಸಿ ನೋಡಿದಾಗ, ಈ ಪ್ರದೇಶದಲ್ಲಿ ಹಲವು ಬಗೆಯ ಚಿಕಿತ್ಸಾ ವಿಧಾನಗಳ ಜ್ಞಾನವು ಹರಡಿದ್ದನ್ನು ನಾವು ಕಂಡೆವು. ಆಯುರ್ವೇದ, ಯುನಾನಿ ಮತ್ತು ಸಿದ್ಧ ವೈದ್ಯಪದ್ಧತಿಯಿಂದ ಹಿಡಿದು ರೋಗಶಮನ ಮಾಡುವವರ ವಿಶೇಷ ಜ್ಞಾನದವರೆಗೆ, ಲಿಖಿತ ಮತ್ತು ಪಟ್ಟೀಕರಿಸಿದ ವೈದ್ಯಕೀಯ ಮಾಹಿತಿಗಳು, ಗುಡ್ಡಗಾಡು ಮತ್ತು ಜಾನುವಾರುಗಾಹಿ ಸಮುದಾಯಗಳ ಮಹಿಳೆಯರ ದೈನಂದಿನ ಆಚರಣೆಗಳು – ಹೀಗೆ ಸಾರ್ವಜನಿಕ ಹಾಗೂ ಖಾಸಗಿ ಜ್ಞಾನವು ಪಸರಿಸಿದ್ದನ್ನು ನಾವು ಕಂಡೆವು. ಇವರೆಲ್ಲರೂ ತಮ್ಮ ಪ್ರಾಣಿಗಳನ್ನು ಅತ್ಯಂತ ಕಾಳಜಿಯಿಂದ ಮತ್ತು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ಜಾನುವಾರುಗಳ ಬಗ್ಗೆ ಕಾಳಜಿ ವಹಿಸುವ ಭಾರೀ ಪ್ರಮಾಣದ ಜ್ಞಾನವು ಕೇವಲ ಹವಾನಿಯಂತ್ರಿತ ಗ್ರಂಥಾಲಯಗಳ ದಪ್ಪ ದಪ್ಪ ಪುಸ್ತಕಗಳಲ್ಲಿ ಮಾತ್ರ ಇರುವುದಿಲ್ಲ; ಈ ಜಾನುವಾರು ಸಾಕಣೆ ಸಮುದಾಯಗಳ ಪ್ರತಿನಿತ್ಯದ ಆಚರಣೆಗಳಲ್ಲಿಯೇ ಹೆಚ್ಚಾಗಿರುತ್ತದೆ.

ಪ್ರಮುಖ ಜಾಣುವಾರು ತಳಿಗಳ ಬಗ್ಗೆ ಮತ್ತು ಉತ್ತಮ ಪ್ರಾಣಿಗಳನ್ನು ಹೇಗೆ ಆಯ್ಕೆ ಮಾಡಬೇಕು ಎಂಬುದರ ಬಗ್ಗೆ ಇಲ್ಲಿ ಹಲವು ವಿಧಾನಗಳಿವೆ. ಅನುಭವೀ ರೈತರು ಮತ್ತು ದನಗಾಹಿಗಳು ಹಲವು ಬಗೆಯ ತಳಿಗಳಲ್ಲಿ ಉತ್ತಮ ಪ್ರಾಣಿಗಳನ್ನು ಗುರುತಿಸಬಲ್ಲರು. ರಾಸು ಆಹಾರದ ಬಗೆಗಳು, ಮೇಯುವ ಪ್ರದೇಶಗಳು ಮತ್ತು ಮೇಯಿಸುವ ಕಾರ್ಯತಂತ್ರಗಳು ಇವರಲ್ಲಿ ಅಪಾರವಾಗಿದ್ದವು. ಪ್ರಾಣಿಗಳ ಆರೋಗ್ಯವನ್ನು ಮುಂಚಿತವಾಗಿಯೇ ಕಾಪಾಡಿಕೊಳ್ಳುವ ಮತ್ತು ಅನಾರೋಗ್ಯವನ್ನು ನಿವಾರಿಸುವ ಜ್ಞಾನಭಂಡಾರವೇ ಅವರಲ್ಲಿದೆ. ಸಸ್ಯಗಳ ಕಟಾವು ಮತ್ತು ಸಂಸ್ಕರಣೆಯ ಬಗ್ಗೆ ಈ ರೋಗತಜ್ಞರಲ್ಲಿ ಅತ್ಯಂತ ಚಿಕ್ಕ ವಿವರಗಳೂ ಇದ್ದವು. ಪ್ರದೇಶದಿಂದ ಪ್ರದೇಶಕ್ಕೆ ಮತ್ತು ವಿವಿಧ ತಳಿಗಳ ನಡುವೆ ಪ್ರಾಣಿ ಸಾಕಣೆ ವಿಧಾನಗಳಲ್ಲಿ ವಿಭಿನ್ನತೆಗಳಿದ್ದವು. ಎಕ್ಟೋಪ್ಯಾರಾಸೈಟ್ ಮತ್ತು ಕಟು ವಾತಾವರಣದ ಸನ್ನಿವೇಶಗಳಲ್ಲಿ, ತೀವ್ರ ತಾಪಮಾನದ ಅಲೆಗಳು ಮತ್ತು ಚಂಡಮಾರುತಗಳ ಸಮಯದಲ್ಲಿ ವಿವಿಧ ಸಮುದಾಯಗಳು ಹೇಗೆ ದೇಸಿ ಮತ್ತು ಸೂಕ್ಷ್ಮ ಕ್ರಮಗಳನ್ನು ತೆಗೆದುಕೊಳ್ಳುತ್ತವೆ ಎಂಬುದನ್ನು ನಾವು ಗಮನಿಸಿದೆವು. ಚಾವಣಿಗಳ, ಗೋಡೆಗಳ ಮತ್ತು ನೆಲದ ವಸ್ತುಗಳ ಆಯ್ಕೆಯನ್ನು ಸ್ಥಳೀಯ ಸನ್ನಿವೇಶಗಳು ಮತ್ತು ಸಮಸ್ಯೆಗಳನ್ನು ಎಚ್ಚರಿಕೆಯಿಂದ ಪರಿಗಣಿಸಿಯೇ ಮಾಡಲಾಗಿತ್ತು. ಜಾನುವಾರು ಮಾರುಕಟ್ಟೆಗಳು ಚಟುವಟಿಕೆಗಳಿಂದ ತುಂಬಿದ್ದವು; ಹಲವು ಬಗೆಯ ಸಾಂಪ್ರದಾಯಿಕ ಉತ್ಪನ್ನಗಳಿಂದ ಕೂಡಿದ್ದವು.

ವಿಶ್ವವಿದ್ಯಾಲಯಗಳಲ್ಲಿ ಕಲಿಸುವ ಜ್ಞಾನ ಮತ್ತು ಸಮುದಾಯಗಳಲ್ಲಿ ಇರುವ ಜ್ಞಾನದ ನಡುವೆ ಇರುವ ಈ ಕಂದಕಕ್ಕೆ ಪ್ರತಿಕ್ರಿಯೆಯಾಗಿಯೇ ಇಂಡಿಜೀನಸ್ ನಾಲೆಜ್ ಆನ್ ಅನಿಮಲ್ ಹೆಲ್ತ್ (IKAH) ಹುಟ್ಟಿಕೊಂಡಿತು. ಈ ಯೋಜನೆಯು ಹಲವು ವರ್ಷಗಳ ಕಾಲ ಜನರ ಜ್ಞಾನ ಮತ್ತು ಆಚರಣೆಗಳನ್ನು ದಾಖಲು ಮಾಡಿಕೊಳ್ಳುವ ಇತರೆ ಸಮಾನ ಯೋಜನೆಗಳ ಜೊತೆಗೇ ಪ್ರಾಣಿ ಆರೋಗ್ಯ ರಕ್ಷಣೆ ಕುರಿತ ಜ್ಞಾನದ ದಾಖಲೀಕರಣ, ದೃಢೀಕರಣ ಮತ್ತು ಪ್ರಚಾರ – ಇವುಗಳನ್ನು ನಡೆಸಿತು. ಇದು ಸಿಬಿಡಿ (ಕನ್‌ವೆನ್ಷನ್ ಆನ್ ಬಯಾಲಾಜಿಕಲ್ ಡೈವರ್ಸಿಟಿ)

ಯ ಹುಟ್ಟಿನೊಂದಿಗೇ ಆರಂಭವಾಯಿತು; ಹಲವು ಗುಂಪುಗಳು ವಿವಿಧ ಪ್ರದೇಶಗಳ ಜೈವಿಕ ವೈವಿಧ್ಯವನ್ನು ದಾಖಲಿಸಲು ಆಸಕ್ತಿ ಹೊಂದಿದ್ದವು.

### ತಳಮಟ್ಟದ ವಾಸ್ತವ

ಹೊಸ ಪಶುವೈದ್ಯಕೀಯ ಪದವೀಧರರಾಗಿದ್ದ ನಾವು ಜಾನುವಾರು, ಜೈವಿಕ ವೈವಿಧ್ಯ ಮತ್ತು ಜನರ ಜೀವನನಿರ್ವಹಣೆಗಳ ವಿಷಯದಲ್ಲಿ ಬೆಂಬಲ ನೀಡುವ ಸಂಪನ್ಮೂಲ ಕೇಂದ್ರವಾಗಿದ್ದ ಅಂತ್ರದಲ್ಲಿ ಈ ಕಂದಕವನ್ನು ಕೊನೆಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಲು ಮತ್ತು ಅರೆ ವೃತ್ತಿಪರರಿಗೆ ತರಬೇತಿ ನೀಡಲು ಬಯಸಿದ್ದೆವು. ನಾವು ಗುಡ್ಡಗಾಡು ಮತ್ತು ಜಾನುವಾರುಗಾಹಿಗಳನ್ನು, ಭೂರಹಿತ ಸಮುದಾಯಗಳನ್ನು ಮತ್ತು ಅಣೆಕಟ್ಟು ಸಂತ್ರಸ್ತರನ್ನು ತಲುಪಲು ಬಯಸಿದ್ದೆವು. ಅದರಲ್ಲೂ ಮುಖ್ಯವಾಗಿ ನಾವು ನಮ್ಮ ಹೊಸ ಜ್ಞಾನ ಮತ್ತು ಕೌಶಲ್ಯಗಳ ಮೂಲಕ ಈ ಸಮುದಾಯಗಳಲ್ಲಿದ್ದ ಮಹಿಳೆಯರನ್ನು ತಲುಪಬಯಸಿದ್ದೆವು.

ಆದರೆ ತರಗತಿಗಳಲ್ಲಿ ಮತ್ತು ಕಾಲೇಜುಗಳ ಪ್ರಯೋಗಾಲಯಗಳಲ್ಲಿ ಮತ್ತು ವಿಶ್ವವಿದ್ಯಾಲಯಗಳಲ್ಲಿ ಕಲಿತ ಜ್ಞಾನವನ್ನು ಕ್ಷೇತ್ರದಲ್ಲಿ ಜಾರಿಗೊಳಿಸುವ ಯಾವುದೇ ಪ್ರಸ್ತುತತೆಯೂ, ಕ್ರಿಯಾನ್ವಯನ ಗುಣವೂ ಇಲ್ಲ ಎಂಬುದನ್ನು ತಂಡದ ಸದಸ್ಯರು ಅರಿತುಕೊಂಡರು. ಕೆಲಸವನ್ನು ಆರಂಭಿಸಿದ ಕೆಲವೇ ವಾರಗಳಲ್ಲಿ ಈ ರೀತಿ ಎದೆಗುಂದುವುದು ಪದವಿಯನ್ನು ಪಡೆದ ಹೊಸ ವೈದ್ಯನಿಗೆ ಹೊಸತೇನೂ ಅಲ್ಲ. ಗ್ರಾಮೀಣ ಭಾರತದ ಜಾನುವಾರು ಸಾಕಣೆ ಸಮುದಾಯಗಳ ಜೊತೆಗೆ ಮೊದಲು ಕೆಲಸ ಆರಂಭಿಸಿದಾಗ ನಮಗೆ ಆದ ಅನುಭವವು ಇದೇ ಆಗಿತ್ತು.
ಆರಂಭದಲ್ಲಿ, ಆಧುನಿಕ ಜ್ಞಾನ ವ್ಯವಸ್ಥೆಯಿಂದ ಬಂದಿದ್ದ ನಮಗೆ ಸಾಂಪ್ರದಾಯಿಕ ವ್ಯವಸ್ಥೆಗಳು ಕೇವಲ ಮೂಢನಂಬಿಕೆಗಳಾಗಿ ಮತ್ತು ಯಾವುದೇ ದೃಢೀಕರಣವಿಲ್ಲದ ಸಂಗತಿಗಳಾಗಿ ಕಂಡವು. ಆದರೆ ನಾವು ಜಾಗರೂಕತೆಯಿಂದ ಈ ವ್ಯವಸ್ಥೆಗಳನ್ನು ಅರಿತುಕೊಳ್ಳಲು ಯತ್ನಿಸಿದಾಗ ನಮಗೆ ಇವು ಏಕೆ ಅಸ್ತಿತ್ವದಲ್ಲಿವೆ ಮತ್ತು ಇವುಗಳ ಸಕಾಲಿಕತೆ ಏನು ಎಂಬುದು ಗೊತ್ತಾಯಿತು.

ಆರಂಭದಲ್ಲಿ, ಆರು ಜಿಲ್ಲೆಗಳಿಂದ ತಲಾ ಮೂರರಂತೆ ಆರಿಸಿದ 18 ಗ್ರಾಮೀಣ ಯುವಕರನ್ನು ಪ್ರಾಣಿ ಆರೋಗ್ಯ ಕಾರ್ಯಕರ್ತರೆಂದು ನೇಮಕ ಮಾಡಿ ಅವರಿಗೆ ವಿವಿಧ ವಿಷಯಗಳ ಮೇಲೆ ಇರುವ ವಿವಿಧ ವಿಧಾನಗಳನ್ನು ದಾಖಲಿಸಲು ತರಬೇತಿ ನೀಡಲಾಯಿತು. ಪ್ರತೀ ತಿಂಗಳೂ ಅವರಿಗೆ ಅಂತ್ರದ ಮೂಲಕ ದಾಖಲೀಕರಣ ತಂತ್ರಗಳು ಮತ್ತು ಆಚರಣೆಗಳ ಬಗ್ಗೆ ಕೇಳಬೇಕಾದ ಪ್ರಶ್ನೆಗಳ ಬಗ್ಗೆ ತರಬೇತಿ ನೀಡಲಾಗುತ್ತಿತ್ತು. ಅವರಿಗೆ ದಾಖಲೀಕರಣ ಮಾಡುವುದು ಯಾವಾಗಲೂ ಸುಲಭವಾದ ಕೆಲಸವೇನಾಗಿರಲಿಲ್ಲ. ಹೀಗಿದ್ದೂ, ತಂಡದ ಇತರೆ ಸದಸ್ಯರ ನಿರಂತರ ಭೇಟಿಗಳು ಮತ್ತು ರೋಗಶಮನಕಾರರ ನಿರಂತರ ಸಭೆಗಳು ಮತ್ತು ಗುಂಪು ಚರ್ಚೆಗಳು ಇಲ್ಲಿ ಸಹಕಾರಿಯಾದವು.

*ಸಾಂಪ್ರದಾಯಿಕ ವೈದ್ಯರು ಸ್ಥಳೀಯ ಜ್ಞಾನದ ಭಂಡಾರವಾಗಿದ್ದಾರೆ.*



ಚಿತ್ರ: ಲೇಖಕರು

ನಮ್ಮ ತಂಡವು ಎಲ್ಲ ಮಾಹಿತಿಗಳನ್ನೂ ಎಚ್ಚರಿಕೆಯಿಂದ ಗಮನಿಸಿ ವಿವರವಾಗಿ ಮತ್ತು ಜಾಗರೂಕತೆಯಿಂದ ದಾಖಲಿಸಲು ಕಲಿಯಿತು. ಆಧುನಿಕ ಜ್ಞಾನ ಪದ್ಧತಿಯ ಬಗ್ಗೆ ಇದ್ದ ವಿಧಾಯಕ ಒಲವನ್ನು ಅವರೂ ಕ್ರಮೇಣವಾಗಿ ತ್ಯಜಿಸತೊಡಗಿದರು; ಇತರೆ ವ್ಯವಸ್ಥೆಗಳನ್ನು ಒಪ್ಪಿಕೊಳ್ಳಲು ಮುಂದಾದರು.

### ದೇಸಿ ಅರಿವಿನ ದಾಖಲೀಕರಣ

ಭಾರೀ ಪ್ರಮಾಣದ ಪಠ್ಯದ ರೂಪದಲ್ಲಿ ಇರದ, ಆದರೆ ಆಚರಣೆಗಳಲ್ಲಿ ಮಾತ್ರವೇ ಅಸ್ತಿತ್ವದಲ್ಲಿದ್ದ ಈ ಜ್ಞಾನವನ್ನು ಅರಿತು ಉಳಿಸಿಕೊಳ್ಳಬೇಕಾಗಿತ್ತು. ನಾವು ಅರಿವಿನ ಹಂಚಿಕೆಗಾಗಿ ರೋಗಶಮನಕಾರರ ಸಭೆಗಳನ್ನು ಸಂಘಟಿಸಿದೆವು. ಸಾಮಾನ್ಯವಾಗಿ ಇರುವ ಪರಿಕಲ್ಪನೆಯ ಬದಲಿಗೆ, ಈ ರೋಗಶಮನಕಾರರು ತಮ್ಮ ಜ್ಞಾನವನ್ನು ಈ ವೇದಿಕೆಗಳಲ್ಲಿ ಹಂಚಿಕೊಳ್ಳುವುದಕ್ಕೆ ತುಂಬಾ ಸಂತಸದಿಂದ ಮುಂದೆ ಬಂದರು; ಏಕೆಂದರೆ ಅವರಿಗೆ ಹೊಸ ವಿಷಯಗಳನ್ನು ಮತ್ತು ವಿಧಾನಗಳನ್ನು ಇತರರಿಂದ ಕಲಿಯವುದಕ್ಕೆ ಇದು ಒಂದು ವೇದಿಕೆಯಾಗಿ ಒದಗಿಬಂತು. ತಮ್ಮ ಜ್ಞಾನಕ್ಕೆ ಹಿಂದೆ ಇದ್ದ ಬೆಲೆ ಮತ್ತು ಗೌರವ ಈಗ ಇಲ್ಲ ಎಂಬುದು ಅವರೆಲ್ಲರ ಸಾಮಾನ್ಯ ಕಾಳಜಿಯಾಗಿತ್ತು. ತಾವು ತೀರಿಕೊಂಡರೆ ತಮ್ಮಲ್ಲಿ ಇರುವ ಜ್ಞಾನವೆಲ್ಲವೂ ಕಳೆದುಹೋಗುತ್ತವೆ ಎಂಬ ಕಳವಳವನ್ನು ಹೊಂದಿದ್ದ ಅವರು ಈ ಜ್ಞಾನವನ್ನು ಇತರರೊಂದಿಗೆ ಹಂಚಿಕೊಳ್ಳಲು ಕಾತರದಿಂದ ಮುಂದೆ ಬಂದರು. ತಮ್ಮ ಜ್ಞಾನವನ್ನು ಯಾವುದೇ ಸಂದರ್ಭದಲ್ಲೂ ದುರ್ಬಳಕೆ ಮಾಡಿಕೊಳ್ಳಬಾರದು ಮತ್ತು ಕೇವಲ ತಾವು ವಿಶ್ವಾಸ ಇಡುವ ಗುಂಪುಗಳಲ್ಲಿ ಮಾತ್ರವೇ ಅದನ್ನು ಹಂಚಿಕೊಳ್ಳಬೇಕು ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು. ಆದ್ದರಿಂದ ಈ ಎಲ್ಲಾ ಹಂತಗಳಲ್ಲಿ ನಾವು ಈ ರೋಗಶಮನಕಾರ ವೈದ್ಯರಿಂದ ಮಾಹಿತಿಗಳನ್ನು ದಾಖಲೀಕರಿಸುವುದು ಯಾವುದೇ ವೈಯಕ್ತಿಕ ಲಾಭಕ್ಕೆ ಅಲ್ಲವೆಂದೂ, ದೊಡ್ಡ ಸಮುದಾಯದ ಅನುಕೂಲಕ್ಕಾಗಿ ಎಂದೂ ಅವರಿಗೆ ಮನವರಿಕೆ ಮಾಡಿಕೊಟ್ಟೆವು. ಈ ವಿಧಾನಗಳನ್ನು ಜಾಗ್ರತೆಯಿಂದ ಗಮನಿಸುವ ಉದ್ದೇಶದಿಂದ ಗ್ರಾಮದ ಯುವಕರು ಈ ವೈದ್ಯರಲ್ಲಿ ವಿದ್ಯಾರ್ಥಿಗಳಾಗುವಂತೆ ಉತ್ತೇಜನ ನೀಡಲಾಯಿತು.

ಜಾನುವಾರು ತಳಿಗಳನ್ನು ಜಾಗ್ರತೆಯಿಂದ ಪಟ್ಟೀಕರಿಸಲಾಯಿತು; ಬಹುಮುಖ್ಯ ಅಂಶಗಳನ್ನು ದಾಖಲಿಸಲಾಯಿತು. ರಾಸು ಆಹಾರದ ವೈವಿಧ್ಯಗಳು, ಅವುಗಳ ಬಳಕೆ, ಮೇಯಿಸುವ ಕಾರ್ಯತಂತ್ರಗಳನ್ನು ದಾಖಲಿಸಲಾಯಿತು. ನಾವು 500ಕ್ಕೂ ಹೆಚ್ಚು ವೈದ್ಯಕೀಯ ಸಸ್ಯಗಳನ್ನು, ಅವುಗಳು ಪ್ರಾಣಿಗಳ ಮೇಲೆ 100ಕ್ಕೂ ಹೆಚ್ಚು ವಿಧಗಳಲ್ಲಿ ಉಂಟು ಮಾಡುವ ಪರಿಣಾಮಗಳನ್ನು ದಾಖಲಿಸಿದೆವು. ಸಮುದಾಯಗಳಲ್ಲಿ ಅಪಾರವಾದ ಗೌರವವನ್ನು ಹೊಂದಿದ್ದ ಈ ರೋಗಶಮನಕಾರ ವೈದ್ಯರು ಕೆಲವು ರೋಗಗಳನ್ನು ಖಾತ್ರಿಯಾಗಿ ಗುಣಪಡಿಸುವ ಬಗ್ಗೆ ತುಂಬಾ ವಿಶ್ವಾಸ ಹೊಂದಿದ್ದರು. ಆದರೆ ಕೆಲವು ರೋಗಗಳ ಬಗ್ಗೆ ಅಷ್ಟು ಖಾತ್ರಿಯಾಗಿ ಹೇಳಲಾಗುವುದಿಲ್ಲ ಎಂದು ಅವರು ಪ್ರಾಮಾಣಿಕವಾಗಿಯೇ ಒಪ್ಪಿಕೊಂಡರು. ಅವರಿಗೆ ಲಸಿಕೆ ಮತ್ತು ಪ್ರತಿರಕ್ಷಣೆ ವೇಳಾಪಟ್ಟಿಯ ಬಗ್ಗೆ ಯಾವುದೇ ಜ್ಞಾನ ಇರಲಿಲ್ಲ. ಆದರೆ ಇದನ್ನು ನಮ್ಮ ತಂಡದಿಂದ ಕಲಿಯಲು ಅವರು ತುಂಬಾ ಸಂತೋಷಪಟ್ಟರು.

ತುಂಬಾ ಸೂಕ್ತವಾದ ವಿಧಾನಗಳನ್ನು ಅತ್ಯಂತ ಎಚ್ಚರಿಕೆಯಿಂದ,

ಪಶುವೈದ್ಯ ವಿಜ್ಞಾನಿಗಳು, ಸಸ್ಯವಿಜ್ಞಾನಿಗಳು, ಆಯುರ್ವೇದ ಚಿಕಿತ್ಸಕರು, ಮಾನವವಿಜ್ಞಾನಿಗಳು ಮತ್ತು ಸಮಾಜವಿಜ್ಞಾನಿಗಳನ್ನು ಒಳಗೊಂಡ ಬಹುರಂಗ ತಾಂತ್ರಿಕ ಸಮಿತಿಯ ಅನುಮೋದನೆಯ ಮೂಲಕ ಆಯ್ಕೆ ಮಾಡಿಕೊಳ್ಳಲಾಯಿತು. ಇವುಗಳನ್ನು ಅಧ್ಯಯನಕ್ಕೆಂದೇ ವಿಶೇಷವಾಗಿ ರೂಪಿಸಿದ ಕಾರ್ಯವಿಧಾನದ ಮೂಲಕ ದೃಢೀಕರಿಸಲಾಯಿತು. ಪ್ರಾಣಿ ವಸತಿಗಳ ಬಗ್ಗೆ ಛಾಯಾಚಿತ್ರಗಳ ಮೂಲಕ ದಾಖಲೀಕರಣ ಮಾಡಿ ವಿಶ್ಲೇಷಿಸಲಾಯಿತು. ನಾವು ಜಾನುವಾರು ಮಾರುಕಟ್ಟೆಗಳಿಗೂ ಭೇಟಿ ನೀಡಿ ಅಲ್ಲಿನ ಚಟುವಟಿಕೆಗಳನ್ನೂ ದಾಖಲೀಕರಿಸಿದೆವು.

ನಾವು ಸಂಗ್ರಹಿಸಿ ದಾಖಲೀಕರಿಸಿದ ಜ್ಞಾನದ ಬಹ್ವಂಶವು ಈ ಮುನ್ನ ಯಾವುದೇ ಲಿಖಿತ ಅಥವಾ ಇನ್ನಾವುದೇ ರೂಪದಲ್ಲಿ ದಾಖಲಾಗಿರಲಿಲ್ಲ. ಇದನ್ನು ಪೀಳಿಗೆಯಿಂದ ಪೀಳಿಗೆಗೆ, ಯುವ ಸಮುದಾಯಕ್ಕೆ ವರ್ಗಾಯಿಸುತ್ತ ಬರಲಾಗಿತ್ತು; ಹಿರಿಯರು ಯಾವ ರೀತಿ ಇವನ್ನೆಲ್ಲ ನಿರ್ವಹಿಸುತ್ತಾರೆ ಎಂಬುದನ್ನು ಯುವ ಪೀಳಿಗೆಯ ಜನರು ಸಾವಧಾನವಾಗಿ ಕಲಿಯುತ್ತಿದ್ದರು.

ನಾವು ಈ ಜ್ಞಾನದ ದಾಖಲೀಕರಣ ನಡೆಸುತ್ತಿದ್ದಂತೆ, ನಗರೀಕರಣ ಮತ್ತು ಉದ್ಯಮೀಕರಣದಿಂದಾಗಿ ಭೂಪ್ರದೇಶಗಳ ಗುಣಗಳೇ ಬದಲಾಗಿ ಹಲವು ಮೌಲ್ಯಯುತವಾದ ಸಸ್ಯಸಂಕುಲಗಳ ಸಂಖ್ಯೆ ಕ್ಷೀಣಿಸುತ್ತ ಬಂದಿತು. ಪರಿಸರದಲ್ಲಿ, ನೀತಿ ನಿಯಮಗಳಲ್ಲಿ ಮತ್ತು ಜಾನುವಾರು ಸಾಕಣೆ ವಿಧಾನಗಳಲ್ಲಿ ಬದಲಾವಣೆಗಳು ಆದಂತೆಲ್ಲ ಸಾಂಪ್ರದಾಯಿಕ ವೈದ್ಯರ ಜ್ಞಾನದ ಅಂಶಗಳು ಕ್ರಮೇಣವಾಗಿ ನಶಿಸಿಹೋಗುತ್ತವೆ ಎಂಬುದನ್ನು ನಾವು ಅರಿತೆವು. ಮುಕ್ತ ಮತ್ತು ಸುಲಭ ಲಭ್ಯತೆಗಾಗಿ ಈ ಜ್ಞಾನವನ್ನೆಲ್ಲ ಸಂಚಯಿಸಿ ಒಂದು ಸಾರ್ವಜನಿಕ ವೇದಿಕೆಯಲ್ಲಿ ಇಡುವ ತುರ್ತು ನಮಗೆ ಕಂಡುಬಂದಿತು. ಸಾಂಪ್ರದಾಯಿಕ ಜ್ಞಾನವ್ಯವಸ್ಥೆಯ ಅತ್ಯುತ್ತಮ ಅಂಶಗಳನ್ನು ಆಧುನಿಕ ವಿಜ್ಞಾನದೊಂದಿಗೆ ಮೇಳಯಿಸಿ ಸರಳ, ಸುರಕ್ಷಿತ ಮತ್ತು ಸುಲಭ ಆಚರಣೆಗಳನ್ನು ರೂಪಿಸಬೇಕಾಗಿತ್ತು. ಪಶುವೈದ್ಯ ವಿಜ್ಞಾನಿಗಳು, ರೈತರು, ವೈದ್ಯರು, ಸಸ್ಯವಿಜ್ಞಾನಿಗಳು, ಇತರೆ ವಿಜ್ಞಾನಿಗಳು, ಸಮಾಜಶಾಸ್ತ್ರಜ್ಞರು, ಕಂಪ್ಯೂಟರ್ ಪ್ರೋಗ್ರಾಮರ್‌ಗಳು ಮತ್ತು ಅಭ್ಯುದಯ ವೃತ್ತಿಪರರನ್ನು ಒಳಗೊಂಡಿದ್ದ ಅಂತ್ರ ತಂಡವು ಪ್ರಾಣಿಗಳ ಆರೋಗ್ಯ, ಆಹಾರ ನೀಡಿಕೆ, ಪೌಷ್ಟಿಕತೆ, ವಸತಿ, ನಿರ್ವಹಣೆ ಮತ್ತು ಸಂತಾನೋತ್ಪತ್ತಿ – ಹೀಗೆ ಹಲವು ವಿಷಯಗಳ ಮೇಲೆ ಈ ಜ್ಞಾನಭಂಡಾರವನ್ನು ರೂಪಿಸುವ ಕಾರ್ಯದಲ್ಲಿ ತೊಡಗಿತು.

ಹೀಗಿದ್ದೂ, ಹಕ್ಕುಸ್ವಾಮ್ಯಗಳ ಜಟಿಲ ವ್ಯವಸ್ಥೆಯನ್ನು ಹೊಂದಿರುವ, ಶೋಷಕ ಸಂಸ್ಥೆಗಳು ತುಂಬಿರುವ ಈ ಜಗತ್ತಿನಲ್ಲಿ ಈ ಜ್ಞಾನವನ್ನು ಕೆಲವೇ ಪರಭಾವಿ ಗುಂಪುಗಳು ಪಡೆದುಕೊಳ್ಳದಂತೆ ಎಚ್ಚರ ವಹಿಸಬೇಕಿದೆ. ಇದಕ್ಕಾಗಿ ನಾವು ಸ್ಥಳೀಯ ಭಾಷೆಗಳಲ್ಲಿ ಗ್ರಾಮೀಣ ಸಮುದಾಯಗಳಿಗೆ ಸುಲಭವಾಗಿ ದಕ್ಕುವಂತೆ ಪ್ರಕಟಣೆಗಳನ್ನು ಮಾಡುವ ಮೂಲಕ ಈ ಸಮಸ್ಯೆಯನ್ನು ನಿರ್ವಹಿಸಲು ಪ್ರಯತ್ನಿಸಿದ್ದೇವೆ.ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ; ಸಮುದಾಯ ಆಧಾರಿತ ಸಂಘಟನೆಗಳೊಂದಿಗೆ ಈ ತರಬೇತಿಯನ್ನು ಮುಂದುವರಿಸಲಾಗಿದೆ; ಇಲ್ಲಿ ಜ್ಞಾನವನ್ನು ನಿಯಮಿತವಾಗಿ ಹಂಚಿಕೊಳ್ಳಲಾಗುತ್ತಿದೆ. ಈ ಎಲ್ಲಾ ಜ್ಞಾನವನ್ನು ಅಂತರಜಾಲಕ್ಕೆ ಸೇರಿಸುವ ಒಂದು ಡಿಜಿಟಲ್ ಪೋರ್ಟಲ್ ಮಾಡುವ ಪ್ರಕ್ರಿಯೆಯಲ್ಲಿ ನಾವಿದ್ದೇವೆ.

ಕಳೆದ 25 ವರ್ಷಗಳಲ್ಲಿ ಜಾನುವಾರು ಸಾಕಣೆ ವಿಧಾನಗಳು ಭಾರೀ ಪ್ರಮಾಣದಲ್ಲಿ ಬದಲಾಗಿವೆ. ಜಾನುವಾರು ಸಾಕಣೆಯ ಉದ್ಯಮೀಕೃತ ವ್ಯವಸ್ಥೆಗಳ ಪ್ರವೇಶವಾಗಿ ಸಣ್ಣರೈತರು ಮತ್ತು ಹಿತ್ತಿಲು ವ್ಯವಸ್ಥೆಯನ್ನೇ ಸಂಪೂರ್ಣ ನಾಶಮಾಡುವ ಬೆದರಿಕೆಯನ್ನು ಒಡ್ಡುತ್ತಿವೆ. ಜಾನುವಾರು ಉತ್ಪಾದನಾ ವ್ಯವಸ್ಥೆಗಳು, ಈ ವ್ಯವಸ್ಥೆಗಳೊಂದಿಗೆ ನಿಕಟವಾಗಿ ಬೆಸೆದುಕೊಂಡಿರುವ ಜೀವವೈವಿಧ್ಯ, ರಾಸು ಉತ್ಪನ್ನಗಳು ಮತ್ತು ಅವುಗಳ ಉಪ ಉತ್ಪನ್ನಗಳು, ವೈದ್ಯಕೀಯ ಸಸ್ಯಗಳು ಮತ್ತು ರಾಸು ಆಹಾರ ವೈವಿಧ್ಯಗಳು ನಿಧಾನವಾಗಿ, ಸದ್ದಿಲ್ಲದೆ ಕಣ್ಮರೆಯಾಗುತ್ತಿವೆ. ವೈದ್ಯರು ತಮ್ಮಲ್ಲಿ ಇರುವ ಜ್ಞಾನವನ್ನೆಲ್ಲ ವರ್ಗಾವಣೆ ಮಾಡಿದ್ದಾರೆ. ಗೋಮಾಳಗಳು ಮತ್ತು ಮೇವಿನ ಪ್ರದೇಶಗಳಲ್ಲಿ ಸೂಪರ್ ಎಕ್ಸ್‌ಪ್ರೆಸ್ ಹೆದ್ದಾರಿಗಳು ಮತ್ತು ಉದ್ಯಮಗಳು ಬಂದಿವೆ.

**ಒಂದು ತಡರಾತ್ರಿ ಪ್ರಾಣಿ ವೈದ್ಯರಾದ ನಾಥು ವಲ್ಗುದೆಯವರ ದನವು ಕಾಯಿಲೆ ಬಿತ್ತು. ಅದರ ಹೊಟ್ಟೆ ಉಬ್ಬಿಕೊಂಡಿತ್ತು. ಇದು ಸಾಮಾನ್ಯವಾಗಿ ರೂಮಿನೆಂಟ್‌ಗಳಲ್ಲಿ ಕಾಣುವ ಸ್ಥಿತಿ. ಆಗ ಪ್ರಾಣಿವೈದ್ಯರನ್ನು ಕರೆಯುವುದಕ್ಕೆ ಸಮಯವೂ ಇರಲಿಲ್ಲ; ತಡವಾಗಿತ್ತು. ದನವನ್ನು ಆಗಲೇ ಪುನಶ್ಚೇತನಗೊಳಿಸದೇ ಇದ್ದರೆ ಅದು ಬೆಳಗ್ಗೆ ಹಾಲು ಕೊಡುವುದೂ ಕಷ್ಟವಾಗಿತ್ತು. ವೈದ್ಯಕೀಯ ಸಸ್ಯಗಳನ್ನು ಆರಿಸಿ ತರಲೂ ಆಗದಂತೆ ಕತ್ತಲು ಆವರಿಸಿತ್ತು. ಅದೃಷ್ಟವಶಾತ್ ನಾಥು ಅವರು ಹಲವು ಕಾಯಿಲೆಗಳಿಗೆ ಒಣ ಸಸ್ಯಪುಡಿಗಳನ್ನು ಬಳಸಿ ಪ್ರಯೋಗ ಮಾಡುತ್ತಿದ್ದ ತಂಡದ ಸದಸ್ಯರಾಗಿದ್ದರು. ಅವರು ಒಣ ಎಲೆಗಳು ಮತ್ತು ಕಪ್ಪುಜೇನು ಗಿಡದ (Phyllanthus reticulatus) ಪುಡಿಯನ್ನು ತನ್ನ ದನದ ಮೇಲೆ ಪ್ರಯೋಗಿಸಲು ನಿರ್ಧರಿಸಿದರು. ಅದು ಬಹುಬೇಗ ಚೇತರಿಸಿಕೊಳ್ಳುತ್ತಿರುವುದನ್ನು ನೋಡಿ ಅವರಿಗೆ ತುಂಬಾ ಸಂತೋಷವಾಯಿತು. ಬೆಳಗ್ಗೆಯ ಹೊತ್ತಿಗೆ ಅದರಿಂದ ಹಾಲು ಕರೆಯುವುದಕ್ಕೂ ಸಾಧ್ಯವಾಯಿತು. ಅವರ ಅನುಭವೀ ತಂದೆಯವರಿಗೂ ಈ ಫಲಿತಾಂಶವು ಖುಷಿ ಕೊಟ್ಟಿತು; ಈ ರೋಗದಿಂದ ಹಲವು ದನಗಳು ಹಲವು ಗಂಟೆಗಳವರೆಗೆ ಯಾತನೆ ಪಡುತ್ತಿದ್ದುದನ್ನು ಅವರು ನೋಡಿದವರು.**

ಪುಸ್ತಕಗಳು, ಛಾಯಾಚಿತ್ರಗಳು, ಪ್ರಕಟಣೆಗಳು ಮತ್ತು ತರಬೇತಿ ಕಾರ್ಯಕ್ರಮಗಳ ಮೂಲಕ ನಾವು ರೂಪಿಸಿದ ಸಾಮುದಾಯಿಕ ಜ್ಞಾನವು ಹಿಂದೊಮ್ಮೆ ಹೇಗಿತ್ತು ಎಂಬುದಕ್ಕೆ ಒಂದು ಸ್ಮರಣಿಕೆಯಾಗಿದೆ ಎಂದು ನಾವು ಭಾವಿಸಿದ್ದೇವೆ; ಜೊತೆಗೇ ವಾತಾವರಣವು ಅನುಕೂಲಕರವಾದಾಗ ದಕ್ಕಿಸಿಕೊಳ್ಳಲಾಗದ ಹಾಗೆ ಕಳೆದೇಹೋಗಿರುವ ವ್ಯವಸ್ಥೆಗಳನ್ನು ಮತ್ತೆ ನಾವು ಸಮಾಜ ಮತ್ತು ಪರಿಸರಕ್ಕಾಗಿ ಬಳಸಿಕೊಳ್ಳಬಹುದು ಎಂಬ ನಿರೀಕ್ಷೆಯನ್ನು ನಾವು ಹೊಂದಿದ್ದೇವೆ.


**References**

Ghotge N.S., Ramdas S.R et al., **"A Social Approach to the Validation of Traditional Veterinary Remedies –The Anthra Project"**, 2002, Tropical Animal Health and Production 34 ( 2002), p. 121-143

ANTHRA, **"Indigenous Knowledge Applications for livestock care"**, 2004, Proceedings of a National Workshop, 14-17 Sep 2004.



**ಆಂಗ್ಲ ಮೂಲ**

ಲೀಸಾ ಇಂಡಿಯಾ, ಸಂಪುಟ 18, ಸಂಚಿಕೆ 1, ಮಾರ್ಚ್ 2016

# ಸಾಗುವಳಿ ಮಾಡದ ಆಹಾರಗಳು

## ರಹಸ್ಯ ಐಸಿರಿ

■ **ಅಂಶುಮನ್ ದಾಸ್**



ಚಿತ್ರ: ಲೇಖಕರು

*ಕಾಡಿನಿಂದ ಸಂಗ್ರಹಿಸಿದ ಹಣ್ಣುಗಳು*

**ಝಾರ್ಖಂಡ್‌ನ ಪಹಾಡಿಯಾ ಗುಡ್ಡಗಾಡು ಜನರಲ್ಲಿ ಕಾಡಿನಿಂದ ಸಂಗ್ರಹಿಸುವ ಸಾಗುವಳಿಯಾಗದ ಆಹಾರದ ಪ್ರಮಾಣ ಕ್ರಮೇಣವಾಗಿ ಕಡಮೆಯಾಗುತ್ತಿದೆ. ಸಂರಕ್ಷಣೆ, ಕಾಪಿಟ್ಟುಕೊಳ್ಳುವಿಕೆ, ಸಾಗುವಳಿಯಾಗದ ಆಹಾರದ ಸಂಸ್ಕರಣೆ – ಈ ಕ್ರಮಗಳಿಂದಾಗಿ ಅವು ಮತ್ತೊಮ್ಮೆ ತಮ್ಮ ಸ್ಥಾನವನ್ನು ಮರುಗಳಿಸಿಕೊಂಡು ಸಮುದಾಯದ ಆಹಾರ ವ್ಯವಸ್ಥೆಯ ವೈವಿಧ್ಯವನ್ನು ವಿಸ್ತರಿಸುವಲ್ಲಿ ಮತ್ತು ಹಸಿವು – ಅಪೌಷ್ಟಿಕತೆಯ ಸಮಸ್ಯೆಗಳನ್ನು ನಿವಾರಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ.**

ಅದು ಜನವರಿ ತಿಂಗಳಿನ ಒಂದು ಮುಂಜಾನೆ. ಸೂರ್ಯನ ಭಾವನೆಗಳು ಬದಲಾಗುತ್ತಿದ್ದಂತೆ ಮಂಜಿನಿಂದ ಆವರಿಸಿದ ಗುಡ್ಡಗಳು ನಿಧಾನವಾಗಿ ದಿಗಂತದಲ್ಲಿ ಗೋಚರಿಸುತ್ತಿದ್ದವು. ಈ ಗುಡ್ಡಗಳ ತಪ್ಪಲಿನ ಹಾದಿಯಲ್ಲಿ ನಾನು ಒಂದು ಸಂಥಾಲ್ ಹಳ್ಳಿಯನ್ನು ಹಾದು, ಝಾರ್ಖಂಡ್‌ನ ಪಾಕುರ್ ಜಿಲ್ಲೆಯಲ್ಲಿರುವ ಲಿತಿಪ್ರಾ ಬ್ಲಾಕ್‌ನ ಗುಡ್ಡದ ಮೇಲೆ ಇರುವ ಕುತ್ಲೋ ಪಹಾರ್ ಎಂಬ ಪಹಾಡಿಯಾ ಗ್ರಾಮವನ್ನು ತಲುಪಿದೆ. ಪಹಾಡಿಯಾಗಳೇ ಇಲ್ಲಿನ ಪ್ರಮುಖ ಗುಡ್ಡಗಾಡು ಸಮುದಾಯವಾಗಿದ್ದಾರೆ. ಹೆಸರೇ ಹೇಳುವಂತೆ, ಪಹಾಡಿಯಾಗಳು (ಪಹಾಡ್) ರಾಜಮಹಲ್ ಗುಡ್ಡಗಳಲ್ಲಿ ನೆಲೆಸಿರುವ ಗುಡ್ಡಗಾಡು ಸಮುದಾಯವಾಗಿದ್ದಾರೆ. ಪಹಾಡಿಯಾಗಳು ಅಲೆಮಾರಿ ಸಾಗುವಳಿ (ಶಿಫ್ಟಿಂಗ್ ಕಲ್ಟಿವೇಶನ್) ಮತ್ತು ಸಾಂಪ್ರದಾಯಿಕ ಕಾಡು ಆಧಾರಿತ ಆರ್ಥಿಕತೆಯನ್ನು ಅವಲಂಬಿಸಿ ಜೀವಿಸುತ್ತಿದ್ದಾರೆ.

ಒಂದು ತಾಸಿನವರೆಗೆ ನಡೆದ ಮೇಲೆ ನಾನು ಹಳ್ಳಿಯನ್ನು ತಲುಪಿದೆ. ಅಲ್ಲಿರುವ ಆಚರಣೆಗಳ ಬಗ್ಗೆ ಅಲ್ಲಿನ ಗ್ರಾಮಸ್ಥರು ನನಗೆ ಮಾಹಿತಿ ನೀಡಿದರು. ಪಹಾಡಿಯಾಗಳು ಗುಡ್ಡಗಳ ಮೇಲಿರುವ ಕಂಟಿಗಳನ್ನು ಸುಟ್ಟು ಅಲ್ಲಿ ನೆಲವನ್ನು ಹಸನು ಮಾಡಿ ಬವಡೆ ಕಾಳನ್ನು(ಕೌಪೀ) ಬೆಳೆಯುತ್ತಾರೆ. ಅಲ್ಲದೆ ಅವರು ಅಲ್ಲಿ ತೊಗರಿ ಮತ್ತು ಮೆಕ್ಕೆಜೋಳದ ಮಿಶ್ರ ಕೃಷಿಯನ್ನೂ ಮಾಡುತ್ತಾರೆ. ಬಿತ್ತನೆ ಬೀಜಗಳಿಗಾಗಿ ಮತ್ತು ಮಾರುಕಟ್ಟೆಗಾಗಿ ಪಹಾಡಿಯಾಗಳು ಅಲ್ಲಿನ ಮಹಾಜನ್ ಎಂಬ ಲೇವಾದೇವಿಗಳನ್ನು ಆಶ್ರಯಿಸಿದ್ದಾರೆ. ಮಹಾಜನ್ ಜನರು ಅಕ್ಕಿ, ಆಲೂಗೆಡ್ಡೆ, ಈರುಳ್ಳಿ, ಮೆಣಸಿನಕಾಯಿ ಇತ್ಯಾದಿ ಅತ್ಯವಶ್ಯದ ಪದಾರ್ಥಗಳನ್ನೂ ಬದಲಿಯಾಗಿ ನೀಡುವ ವ್ಯವಹಾರವನ್ನೂ ಮಾಡುತ್ತಾರೆ. ಆದರೆ ಮಹಾಜನರನ್ನು ಅಲ್ಲಿ ಒಂದು ಬೆದರಿಕೆ ಎಂದು ಭಾವಿಸಿಲ್ಲ; ಏಕೆಂದರೆ ಹೊರಜಗತ್ತಿಗೆ ಈ ಮಹಾಜನರೇ ಏಕೈಕ ಕೊಂಡಿಯಾಗಿದ್ದಾರೆ.

ತಾವು ತಮ್ಮ ಕಾಡುಗಳನ್ನು ಮತ್ತು ಕಾಡು ಆಧಾರಿತ ಆಹಾರ ಮತ್ತು ಸಂಪ್ರದಾಯಗಳನ್ನು ಹೇಗೆ ಕಳೆದುಕೊಂಡೆವು ಎಂದು ಅವರು ಮಾಹಿತಿ ಹಂಚಿಕೊಂಡರು. ಅದರಲ್ಲೂ ಮುಖ್ಯವಾಗಿ ಜನಸಂಖ್ಯೆಯ ಹೆಚ್ಚಳದಿಂದ ಕಾಡಿನ ಮೇಲೆ ಆದ ಅತೀವ ಒತ್ತಡದಿಂದಲೇ ಇವೆಲ್ಲವೂ ಆಯಿತೆಂಬುದನ್ನು ಅವರು ವಿವರಿಸಿದರು.

### ಆಹಾರ ವಿಧಾನದಲ್ಲಿ ಕೊರತೆ

ವೆಲ್‌ಥುಂಗರ್‌ಲೈಫ್‌ನ 'ಫೈಟ್ ಹಂಗರ್ ಫಸ್ಟ್ ಇನಿಶಿಯೇಟಿವ್' ಎಂಬ ಮೂಲ ಅಧ್ಯಯನದ ಭಾಗವಾಗಿ ಪಹಾಡಿಯಾ ಗುಡ್ಡಗಾಡು ಸಮುದಾಯದ ಹಳ್ಳಿಗಳಲ್ಲಿ ಪೌಷ್ಟಿಕ ಸಮೀಕ್ಷೆಯನ್ನು ಕೈಗೊಳ್ಳಲಾಯಿತು. ಶೇಕಡಾ 33ರಷ್ಟು ಮಕ್ಕಳು ತೀವ್ರವಾಗಿ ಮತ್ತು ಶೇಕಡಾ 40ರಷ್ಟು ಮಕ್ಕಳು ಮಧ್ಯಮ ಪ್ರಮಾಣದಲ್ಲಿ ಕೆಳತೂಕದ ಸಮಸ್ಯೆಯನ್ನು ಹೊಂದಿದ್ದಾರೆ ಎಂದು ಸಮೀಕ್ಷೆಯು ಬೆಳಕು ಚೆಲ್ಲಿತು. ಶೇಕಡಾ 56ರಷ್ಟು ಮಕ್ಕಳ ಬೆಳವಣಿಗೆಯೇ ಕುಂಠಿತವಾಗಿತ್ತು. ಆಹಾರ ಕೊರತೆಯ ಕಾಲಾವಧಿಗಳಲ್ಲಿ ಅವರ ದಿನವಹಿ ಕ್ಯಾಲೋರಿ ಸೇವನೆ ಪ್ರಮಾಣವು 1500 ಕಿಲೋ ಕ್ಯಾಲೊರಿಗಳಿಗೆ ಇಳಿದಿತ್ತು. ಆದರೆ ವರ್ಷಪೂರ್ತಿ ಪುಷ್ಟಿಕರ ಆಹಾರದ ಮೂಲವಾದ ಕಾಡುಗಳಿರುವ ನಿಯಮಗಿರಿ ಗುಡ್ಡಗಳ ಪ್ರದೇಶದ ಡೊಂಗಾರಿಯಾ ಕೊಂಧ್ ಸಮುದಾಯದಲ್ಲಿ ಬೇಸಗೆ, ಮಳೆಗಾಲ ಮತ್ತು ಚಳಿಗಾಲದ ಮೂರೂ ಋತುಮಾನಗಳಲ್ಲಿ ಗುಡ್ಡಗಾಡು ಸಮುದಾಯದ ಒಟ್ಟು ಆಹಾರದ ಶೇಕಡಾ 37, 30 ಮತ್ತು 45ರಷ್ಟು ಆಹಾರವು (ಅನುಕ್ರಮವಾಗಿ) ಈ ಕಾಡುಗಳಿಂದಲೇ ಬರುತ್ತದೆ ಎಂಬ ಅಂಶವೂ ಒಂದು ಅಧ್ಯಯನದಿಂದ ತಿಳಿದುಬಂದಿದೆ. ಅಂದರೆ ಗುಡ್ಡಗಾಡು ಸಮುದಾಯದ ಆಹಾರ ವ್ಯವಸ್ಥೆಯಲ್ಲಿ ಹಲವು ಕಾರಣಗಳಿಂದ ಕಾಡಿನ ಆಹಾರದ ಪ್ರಮಾಣವು ಕುಸಿಯುತ್ತ ಬಂದಿದೆ ಎಂದಾಯಿತು. ಉದಾಹರಣೆಗೆ ಇತ್ತೀಚೆಗಿನ ವರ್ಷಗಳಲ್ಲಿ ಸರ್ಕಾರವು ಗುಡ್ಡಗಾಡು ಮತ್ತು ಬಡತನದ ರೇಖೆಯಿಂದ ಕೆಳಗಿರುವ (ಬಿಪಿಎಲ್) ಕುಟುಂಬಗಳು ಹಸಿವಿನಿಂದ ಪಾರಾಗಲು ಸಬ್ಸಿಡಿ ದರದಲ್ಲಿ ಅಕ್ಕಿಯನ್ನು ವಿತರಿಸುವ ಕಾರ್ಯಕ್ರಮವನ್ನು ಆರಂಭಿಸಿತು. ಇದು ಅವರ ಆಹಾರ ಪದ್ಧತಿಯಲ್ಲಿ ಬಹುಮುಖ್ಯವಾದ ಬದಲಾವಣೆಯನ್ನು ತಂದಿತು: ಆಹಾರ ವೈವಿಧ್ಯದ ಬದಲು ಸರಳೀಕೃತ ಅಕ್ಕಿ ಆಧಾರದ ಊಟ ಆರಂಭವಾಯಿತು. ಪೌಷ್ಟಿಕತೆಯ ಬಗ್ಗೆ ಅತ್ಯಂತ ಕಡಿಮೆ ಮಾಹಿತಿಯನ್ನು ಹೊಂದಿರುವ ಈ ಗುಡ್ಡಗಾಡು ಜನರು ಹಣ್ಣುಗಳು, ಬೇರು, ಗೆಡ್ಡೆಗಳು, ಕೀಟಗಳು, ಹಕ್ಕಿಗಳು, ಇಲಿಗಳು, ಖಾದ್ಯ

ಎಲೆಗಳು, ಅಣಬೆ, ಹುಣಿಸೆಹಣ್ಣು ಮತ್ತು ಬಿದಿರಿನ ಬೇರುಗಳನ್ನು (ಕಳಲೆ) ಉಪ್ಪು, ಎಣ್ಣೆ ಮತ್ತು ಇತರೆ ಗೃಹಬಳಕೆ ವಸ್ತುಗಳಿಗಾಗಿ ಅತ್ಯಂತ ಅಗ್ಗದ ಬೆಲೆಗೆ ಮಧ್ಯವರ್ತಿಗಳಿಗೆ ಮಾರುತ್ತಿದ್ದರು.

## ಐಸಿರಿ

'ನಮ್ಮ ಮಕ್ಕಳು ನಮ್ಮ ಕಾಲದಲ್ಲಿ ನಾವಿದ್ದ ಹಾಗೆ ಬಲವಾಗಿ ಇಲ್ಲ' ಎಂದು ಸಮುದಾಯದ ಹಿರಿಯರಲ್ಲಿ ಒಬ್ಬರಾದ ರಾವಟೆ ಪಹಾಡಿಯಾ ಗೊಣಗುತ್ತಾರೆ. ಇದನ್ನೇ ಗಮನದಲ್ಲಿ ಇಟ್ಟುಕೊಂಡ ನಮಗೆ ಕಾಡು ಆಹಾರಗಳ ಋತುಮಾನ ಆಧಾರಿತ ಲಭ್ಯತೆಯನ್ನು ಹುಡುಕುವುದೇ ಮೊದಲ ಉಲ್ಲೇಖನಾರ್ಹ ಕೆಲಸವಾಯಿತು. ಈ ಆಹಾರಗಳನ್ನು ಗುರುತಿಸಿ ದಾಖಲಿಸಲು ಮಕ್ಕಳಿಗೇ ವಹಿಸಿದೆವು. ಆಧುನಿಕ ಅಭಿವೃದ್ಧಿ ಮಾದರಿಗಳೊಂದಿಗೆ ಅವರ ದೇಸಿ ಜ್ಞಾನನೆಲೆಯು ಕುಸಿದುಹೋಗುತ್ತಿದೆ ಎಂಬುದಂತೂ ಖಚಿತವಾಗಿತ್ತು. ಯುವ ಪೀಳಿಗೆಯು ತಮ್ಮ ಪರಂಪರೆ ಮತ್ತು ಸಿರಿವಂತ ಜೀವವೈವಿಧ್ಯದ ಬಗ್ಗೆ ಯಾವುದೇ ಅರಿವನ್ನು ಹೊಂದಿರಲಿಲ್ಲ. ಅವರು ತಮ್ಮ ಆಹಾರ ಮತ್ತು ಔಷಧಗಳಿಗೆ ಬಾಹ್ಯ ಮೂಲಗಳನ್ನೇ ಅವಲಂಬಿಸಿದ್ದರು. ಇದರ ಪರಿಣಾಮವಾಗಿ ಅವರು ಅಪೌಷ್ಟಿಕತೆ, ಹಸಿವು ಮತ್ತು ಕಾಯಿಲೆಗಳಿಗೆ ಹೆಚ್ಚು ಪಕ್ಕಾಗುತ್ತಿದ್ದರು.

ಈ ಸಮುದಾಯಗಳು ಈ ಹಿಂದೆ ಸಂಗ್ರಹಿಸುತ್ತಿದ್ದ ಸಾಗುವಳಿ ಮಾಡದ ಆಹಾರಗಳಾದ ಕಾಡು ಖಾದ್ಯ ಸೊಪ್ಪುಗಳು, ಹೂವುಗಳು, ಹಣ್ಣುಗಳು, ಪ್ರಾಣಿಗಳು, ಹಕ್ಕಿಗಳು, ಅಣಬೆ, ಮೀನು, ಏಡಿಗಳು, ಸಿಗಡಿ, ಜೇನು ಮುಂತಾದವುಗಳನ್ನು ನೆನಪಿಸಿಕೊಳ್ಳುತ್ತಿದ್ದವು. ಈ ಸಾಗುವಳಿ ಮಾಡದೆ ಸಂಗ್ರಹಿಸುವ ಆಹಾರಗಳು ಹೇಗೆ ತಮ್ಮ ಕಠಿಣ ಸನ್ನಿವೇಶಗಳಲ್ಲಿ, ಅದರಲ್ಲೂ ಬೇಸಗೆ ಮತ್ತು ಮಳೆಗಾಲಗಳಲ್ಲಿ ಸಹಜ ವಿಮೆಯಂತೆ ಒದಗಿಬರುತ್ತಿದ್ದವು ಎಂಬುದನ್ನು ಅವರು ನೆನಪಿಸಿಕೊಳ್ಳುತ್ತಿದ್ದರು. 40ರ ಆಸುಪಾಸಿನಲ್ಲಿದ್ದ ರೈತರೊಬ್ಬರು ಮುಂದೆ ಬಂದು ಹೇಳಿದರು:'ನನ್ನ ಬಾಲ್ಯದಲ್ಲಿ ನಾವು ಮುಕ್ತ ಮಾರುಕಟ್ಟೆಯಿಂದ ಸೀಮೆ ಎಣ್ಣೆ ಮತ್ತು ಉಪ್ಪನ್ನು ಹೊರತುಪಡಿಸಿ ಬೇರೆ ಯಾವುದೇ ಪದಾರ್ಥವನ್ನೂ ತರುತ್ತಿರಲಿಲ್ಲ. ಈಗ ನಾವು ಬಹುತೇಕ ಎಲ್ಲ ವಸ್ತುಗಳನ್ನೂ ಮಹಾಜನ್ ವರ್ತಕರಿಂದ ಖರೀದಿಸುತ್ತೇವೆ; ಅವರು ನಮ್ಮೊಂದಿಗೆ ವ್ಯಾಪಾರ ಮಾಡುತ್ತಿರುತ್ತಾರೆ. ಈ ನಗದು ವರಮಾನವು ನಮ್ಮ ಅಸ್ತಿತ್ವದ ಬಹುದೊಡ್ಡ ಸಂಗತಿಯಾಗಿಬಿಟ್ಟಿದೆ. ಬಲವಂತದ ವಲಸೆ ಮತ್ತು ಮರಗಳ ಕಡಿದುರುಳಿಸುವಿಕೆಯು ಈ ಬದಲಾದ ಸನ್ನಿವೇಶಕ್ಕೆ ನೇರವಾದ ಕಾರಣವಾಗಿದೆ'.

ಕಾಲ ಕಳೆದಂತೆ ಈ ಸಮುದಾಯವು 10 ಬಗೆಯ ಅಣಬೆಗಳು, 8 ಬಗೆಯ ಜಲಕಳೆಗಳು, 5 ಬಗೆಯ ಜೇನು, 20 ಬಗೆಯ ಹಕ್ಕಿಗಳು, 24 ಬಗೆಯ ಹಸಿರೆಲೆ ತರಕಾರಿಗಳು, 15 ಬಗೆಯ ಹಣ್ಣುಗಳು, 6 ಬಗೆಯ ತರಕಾರಿಗಳು, 6 ಬಗೆಯ ದ್ವಿದಳ ಧಾನ್ಯಗಳು, 2 ಬಗೆಯ ಸಿರಿಧಾನ್ಯಗಳು, 3 ಬಗೆಯ ಹೂವುಗಳು, 4 ಗೆಡ್ಡೆಗಳು, 3 ಬೀಜಗಳನ್ನು ಕಾಡುಪ್ರದೇಶದಲ್ಲೇ ಗುರುತಿಸಿತು. ಇವೆಲ್ಲವನ್ನೂ ಅವುಗಳ ಸ್ಥಳೀಯ ಹೆಸರುಗಳಲ್ಲದೆ, ದ್ವಿನಾಮ ಹೆಸರುಗಳು, ವಿವರಣೆ, ಬೆಳೆಯುವ ಬಗೆ, ಆಯ್ಕೆಗಳು ಮತ್ತು ಧಾರಣಾ ಶಕ್ತಿ, ಬಳಕೆ, ಪೌಷ್ಟಿಕ ಮೌಲ್ಯ, ಋತುಮಾನ – ಈ ಎಲ್ಲ ಮಾಹಿತಿಗಳೊಂದಿಗೆ ಸಮುದಾಯದ ಸ್ವಯಂಸೇವಾ ಕಾರ್ಯಕರ್ತರು ಎಚ್ಚರಿಕೆಯಿಂದ ಸಂಗ್ರಹಿಸಿದರು. ಅಣಬೆ ಮತ್ತು ಮೀನುಗಳ ವೈಜ್ಞಾನಿಕ ಗುರುತಿಸುವಿಕೆಯು ತಜ್ಞರ ಭಾಗಿತ್ವದ ನಡುವೆಯೂ ಸಾಧ್ಯವಾಗಲಿಲ್ಲ.

## ಕ್ರಮ ತೆಗೆದುಕೊಳ್ಳುವ ಬಗೆ



ಚಿತ್ರ: ಲೇಖಕರು

**ಪಹಾಡಿಯಾ ಸಮುದಾಯದ ಹೆಣ್ಣುಮಕ್ಕಳ ಸಾಂಪ್ರದಾಯಿಕ ನೃತ್ಯ**

ಈ ದಾಖಲೀಕರಣ ಪ್ರಕ್ರಿಯೆಯು ಪ್ರಕೃತಿ, ಪರಿಸರ, ಆಹಾರ ಮತ್ತು ಸಂಬಂಧಿತ ಪಹಾಡಿಯಾ ಸಮುದಾಯದ ಸಂಸ್ಕೃತಿಯನ್ನು ಅರಿತುಕೊಳ್ಳಲು ನಮಗೆ ಸಹಕಾರಿಯಾಯಿತು; ಜೊತೆಗೇ ಪಹಾಡಿಯಾ ಸಮುದಾಯದ ಸುಧಾರಿತ ಆಹಾರ ಪದ್ಧತಿ ಮತ್ತು ವೈವಿಧ್ಯಕ್ಕೂ ಕಾರಣವಾಯಿತು. ಆರಂಭದಲ್ಲಿ ಇದು ಮೂಲತಃ ಜ್ಞಾನದ ಮಟ್ಟದಲ್ಲೇ ನಡೆಯಿತು. ಮಳೆಗಾಲದಲ್ಲಿ ಕೆಲವು ಗೆಡ್ಡೆಗಳು ಮತ್ತು ಸೊಪ್ಪುಗಳು, ಬೇಸಗೆಯಲ್ಲಿ ಕೆಲವು ಹಣ್ಣುಗಳನ್ನು ದಿನವಹಿ ಆಹಾರದಲ್ಲಿ ಸೇರಿಸಿಕೊಳ್ಳಲಾಯಿತು. ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟದಲ್ಲಿ ವಾರಕ್ಕೆ 12ರಿಂದ 14 ಸಲ ಈ ಆಹಾರದ ಸೇವನೆ ನಡೆಯಿತು. ಮಹಿಳೆಯರು ತಾವು ಮರೆತೇ ಹೋಗಿದ್ದ ಕೆಲವು ಅಡುಗೆ ಪದಾರ್ಥಗಳನ್ನು ಮಾಡುವುದನ್ನು ನೆನಪಿಸಿಕೊಂಡರು. ಹಸಿರೆಲೆಗಳ ನಿರ್ಜಲೀಕರಣ ಮಾಡಿ ಒಣಗಿಸಿ ಇಡುವುದು, ಸ್ಥಳೀಯ ಒಣ ಎಲೆಗಳಿಂದ ಮಾಡಿದ ಬೇಳೆಕಾಳುಗಳ ಬಿಲ್ಲೆ, ಹಸಿಯಾಗಿ ಬೀಸಿದ ಕಾಳುಗಳು ಮುಂತಾದ ವಿಧಾನಗಳನ್ನೂ ಅನುಸರಿಸಲಾಯಿತು. ಇವನ್ನೆಲ್ಲ ಎಲ್ಲರೂ ಸ್ವಾಗತಿಸಿದರು; ಆಹಾರ ವ್ಯವಸ್ಥೆಗೆ ಇವೆಲ್ಲವೂ ಮರಳಿದವು.

ಈ ಅನುಭವಗಳ ಆಧಾರದಲ್ಲಿ ಪೌಷ್ಟಿಕ ಶಿಕ್ಷಣವನ್ನೇ ಕೇಂದ್ರವಾಗಿಟ್ಟುಕೊಂಡ ಸಾಮರ್ಥ್ಯ ವೃದ್ಧಿ ಮಾದರಿಯೊಂದನ್ನು ಅಭಿವೃದ್ಧಿಪಡಿಸಲಾಯಿತು. ಇದರಲ್ಲಿ ಮೂಲ ಪೌಷ್ಟಿಕ ಆಹಾರ ಮತ್ತು ನೈರ್ಮಲ್ಯ ಸಂಬಂಧಿತ ಸಂಗತಿಗಳು, ಸ್ಥಳೀಯ ಅಡುಗೆಗಳನ್ನು ಮಾಡುವುದು, ಆಹಾರ ಸಂಸ್ಕರಣೆಯ ಸರಳ ತಂತ್ರಗಳು ಸೇರಿದ್ದವು. ಇದಲ್ಲದೆ ಹತ್ತು ಹಳ್ಳಿಗಳಿಂದ 25 ತಾಯಂದಿರನ್ನು ಗುರುತಿಸಿ ಈ ಕಾರ್ಯಸೂಚಿಯನ್ನು ಮುಂದುವರಿಸಲು ತರಬೇತಿ ನೀಡಲಾಯಿತು.

ಈ ಪ್ರಕ್ರಿಯೆಯು ಆಹಾರ ಮತ್ತು ಆಹಾರ ವ್ಯವಸ್ಥೆಯಾಚೆಗೂ ವಿಸ್ತರಿಸಿತು. ಸಮುದಾಯದ ನಾಯಕರು ಸಾಗುವಳಿ ಮಾಡದ ಆಹಾರ ಮತ್ತು ಪರಿಸರದ ನೈಸರ್ಗಿಕ ಸಂಪನ್ಮೂಲಗಳನ್ನು ಸಂರಕ್ಷಿಸಲು ಆರಂಭಿಸಿದರು. ಈ ಸಂರಕ್ಷಣಾ ಪ್ರಕ್ರಿಯೆಯಲ್ಲಿ ಹಲವು ಬಗೆಯ ಸವಾಲುಗಳನ್ನು ಎದುರಿಸಬೇಕಾಯಿತು. ಸ್ಥಳೀಯ

**ಈ ಸಮುದಾಯವು 10 ಬಗೆಯ ಅಣಬೆಗಳು, 8 ಬಗೆಯ ಜಲಕಳೆಗಳು, 5 ಬಗೆಯ ಜೇನು, 20 ಬಗೆಯ ಹಕ್ಕಿಗಳು, 24 ಬಗೆಯ ಹಸಿರೆಲೆ ತರಕಾರಿಗಳು, 15 ಬಗೆಯ ಹಣ್ಣುಗಳು, 6 ಬಗೆಯ ತರಕಾರಿಗಳು, 6 ಬಗೆಯ ದ್ವಿದಳ ಧಾನ್ಯಗಳು, 2 ಬಗೆಯ ಸಿರಿಧಾನ್ಯಗಳು, 3 ಬಗೆಯ ಹೂವುಗಳು, 4 ಗೆಡ್ಡೆಗಳು, 3 ಬೀಜಗಳನ್ನು ಕಾಡುಪ್ರದೇಶದಲ್ಲೇ ಗುರುತಿಸಿತು.**

ಸಸ್ಯಗಳು ಕಾಡಿನಲ್ಲಿ ಸಹಜವಾಗಿಯೇ ಬೆಳೆಯುವಂತಹ ಗುಣವನ್ನು ಹೊಂದಿದ್ದವು; ಆದರೆ ಗುಣಮಟ್ಟ ಕುಸಿದ ಕಾಡು ಪ್ರದೇಶದಲ್ಲಿ ನಾಟಿ ಮಾಡಿದರೆ ಹೆಚ್ಚುಕಡಿಮೆ ವಿಫಲವಾಗುತ್ತಿದ್ದವು. ಈ ಪಾಠವನ್ನು ಕಲಿತ ಸಮುದಾಯಗಳು ದಟ್ಟ ಅರಣ್ಯ ಪ್ರದೇಶದಲ್ಲಿ ಇರುವ ಅಂತರ ಪ್ರದೇಶಗಳಲ್ಲಿ ಸಂರಕ್ಷಣಾ ಕ್ರಮಗಳನ್ನು ಅನುಸರಿಸಲು ತೊಡಗಿದವು. ಇಂತಹ ನಾಲ್ಕು ಸ್ಥಳಗಳನ್ನು ಅಭಿವೃದ್ಧಿಪಡಿಸಲಾಯಿತು. ಇವುಗಳಲ್ಲಿ ಬುಚ್ಚೋತೋಲಾ ಮತ್ತು ಸಿಮ್ಲಾಂಗ್ ಹಳ್ಳಿಗಳಲ್ಲಿ ತಲಾ ಒಂದೊಂದು ಇದ್ದರೆ, ಕುತ್ಲೋ ಪಹಾಡ್ ಹಳ್ಳಿಯಲ್ಲಿ ಎರಡು ತಾಣಗಳಿವೆ. ಪ್ರತಿಯೊಂದೂ ಪ್ರದೇಶದಲ್ಲಿ 35ರಿಂದ 40 ಸ್ಥಳೀಯ ತಳಿಗಳನ್ನು ಆರಂಭಿಕವಾಗಿ ಸಂರಕ್ಷಿಸಲಾಯಿತು. ಈ ಕಾರ್ಯದ ಜೊತೆಗೇ ಸಾಗುವಳಿ ಮಾಡದ ಆಹಾರಗಳನ್ನು ಸಂರಕ್ಷಿಸುವ ಇತರೆ ವಿಧಾನಗಳ ಬಗ್ಗೆ ಇನ್ನೊಂದು ಸಾಮರ್ಥ್ಯ ವೃದ್ಧಿ ಮಾದರಿಯನ್ನು ಕೂಡಾ ಜೋಡಿಸಲಾಯಿತು.

ಆಹಾರದಲ್ಲಿ ಪೌಷ್ಟಿಕತೆಯ ಕಂದರವನ್ನು ತಗ್ಗಿಸಲು ಕೆಲವು ಇತರೆ ಚಟುವಟಿಕೆಗಳನ್ನೂ ಕೈಗೊಳ್ಳಲಾಯಿತು. ಸಾಮಾನ್ಯವಾಗಿ ಕಟಾವು ಮಾಡಿದ ಬಹುತೇಕ ದ್ವಿದಳ ಧಾನ್ಯಗಳನ್ನು ಸ್ಥಳೀಯ ಜನರು ಪ್ಲಾಸ್ಟಿಕ್ ಚೀಲಗಳಲ್ಲಿ ಸಂಗ್ರಹಿಸುತ್ತಿದ್ದರು. ಇದರಿಂದಾಗಿ ಕೀಟಗಳು ದಾಳಿ ಮಾಡುತ್ತಿದ್ದವು; ಅವರು ಈ ಧಾನ್ಯಗಳನ್ನು ಕಟಾವು ಮಾಡಿದ ಎರಡೇ ತಿಂಗಳುಗಳ ಒಳಗೆ ಮಾರಾಟ ಮಾಡಬೇಕಾಗಿತ್ತು. ಇದನ್ನು ಪರಿಹರಿಸಲು 70 ಮನೆಗಳಲ್ಲಿ ದ್ವಿದಳ ಧಾನ್ಯಗಳ ಸಂಗ್ರಹಕ್ಕಾಗಿ ಜಿಐ ಶೀಟ್‌ಗಳ ಡ್ರಮ್‌ಗಳನ್ನು ಪರಿಚಯಿಸಲಾಯಿತು. ಒಣ ಬೇವಿನ ಸೊಪ್ಪು, ಹೊಂಗೆ ಮತ್ತು ವಿಟೆಕ್ಸ್ ಎಲೆಗಳ ಮೂಲಕ ಧಾನ್ಯಗಳನ್ನು ಸಂರಕ್ಷಿಸಿ ಇಡುವ ವಿಧಾನಗಳ ಬಗ್ಗೆ ಸಮುದಾಯಕ್ಕೆ ತರಬೇತಿ ನೀಡಲಾಯಿತು. ಇದರಿಂದಾಗಿ ದ್ವಿದಳ ಧಾನ್ಯಗಳ ಸಂಕಷ್ಟ ವ್ಯಾಪಾರ ನಿಂತಿತು.

ಸ್ಥಳದಲ್ಲೇ ಕೃಷಿ ಮಾಡುವ ವಿಧಾನದ ಜೊತೆಗೇ ಹಲವು ಉಪಕ್ರಮಗಳನ್ನೂ ಕೈಗೊಳ್ಳಲಾಯಿತು. ಉದಾಹರಣೆಗೆ ಸ್ಥಳೀಯ ಜುಜುಬೇ, ಸೀತಾಫಲ, ಮಾವು, ಸೀಬೆ, ಹಲಸಿನ ತಳಿಗಳ ಕೃಷಿಯನ್ನೂ ಮನೆಗಳಲ್ಲಿ ಕೈಗೊಳ್ಳಲಾಯಿತು. ಸಜ್ಜೆಯ ಕೃಷಿಯನ್ನು ಆರು ಹಳ್ಳಿಗಳಲ್ಲಿ ಪುನರುಜ್ಜೀವಿಸಲಾಯಿತು; ನೀರು ಸಂಗ್ರಹದ ಮತ್ತು ನಾಲೆಗಳ ರಚನೆಯಿಂದಾಗಿ ನೀರಿನ ಲಭ್ಯತೆಯು ಎರಡು ತಿಂಗಳುಗಳ ಹೆಚ್ಚುವರಿ ಕಾಲಕ್ಕೆ ವಿಸ್ತರಣೆಯಾಯಿತು.

## ಮುನ್ನೋಟ

ಸಾಗುವಳಿ ಮಾಡದ ಆಹಾರಗಳು ಜನರ ಮನಸ್ಸಿನಲ್ಲಿ ಮತ್ತು ಆಹಾರ ಪದ್ಧತಿಯಲ್ಲಿ ಮತ್ತೆ ತಮ್ಮ ಹಳೆಯ ಸ್ಥಾನವನ್ನು ಪಡೆದುಕೊಂಡಿವೆ. ಆದರೆ ಕಾಡಿನ ಮೂಲವನ್ನು ಮರಳಿ ಪಡೆಯದೆ ಮತ್ತು ಹಿಂದಿನ ಜೀವವ್ಯವಸ್ಥೆಯನ್ನು ಮರುಸ್ಥಾಪಿಸದೆ ಸಾಗುವಳಿ ಮಾಡದ ಆಹಾರಗಳ ಬೇಡಿಕೆಯನ್ನು ಪೂರೈಸುವುದು ಆಗದ ಮಾತು ಎಂಬುದನ್ನೂ ಅರಿಯಲಾಯಿತು. ಸಾಗುವಳಿ ಮಾಡದ ಆಹಾರಗಳ ಕುರಿತ ಈ ಉಪಕ್ರಮವು ಹೆಚ್ಚಿನ ನೀರು, ಸುಧಾರಿತ ಆಹಾರ ವ್ಯವಸ್ಥೆ ಮತ್ತು ಕೃಷಿ ವೈವಿಧ್ಯತೆಯನ್ನು ಬೇಡುತ್ತದೆ.

ಕೆಲವು ರೈತರು ತಮ್ಮ ಅನುಭವಗಳನ್ನು ಹಂಚಿಕೊಳ್ಳಲು ರಾಂಚಿ ಮತ್ತು ದಿಲ್ಲಿಗೆ ಭೇಟಿ ನೀಡಿದರು; ಅವರಲ್ಲಿ ಕೆಲವರು ಬದುಕಿನಲ್ಲೇ ಮೊದಲ ಸಲ ಮೋಟಾರು ವಾಹನಗಳನ್ನು ಹತ್ತಿದ್ದರು!
ಅವರಿಗೆ ಈ ಆಹಾರಗಳೇ ಐಸಿರಿಯಾಗಿದ್ದವು; ನಮಗೆ ಮಾತ್ರ ರಾವಟೆ ಪಹಾಡಿಯಾ, ಶಂಕರಿ ಪಹಾಡಿಯಾ ಮತ್ತು ಹಲವು ರೈತರ ಕಣ್ಣುಗಳಲ್ಲಿದ್ದ ಖುಷಿ ಮತ್ತು ಆತ್ಮವಿಶ್ವಾಸವೇ ನಮ್ಮ ಐಸಿರಿಯಾಗಿದ್ದವು. ಅವರೀಗ ಕಾಡುಗಳ ನಡುವೆಯೇ ಹಲವು ಮರಗಳು, ಗಿಡಗಂಟಿಗಳು, ಬಳ್ಳಿಗಳು, ಹುಲ್ಲುಗಳು, ಗೆಡ್ಡೆಗಳು – ಇವೆಲ್ಲವನ್ನೂ ನೆಟ್ಟು ಕೃಷಿ ಮಾಡುವ ಫುಡ್ ಫಾರೆಸ್ಟ್ ರೂಪಿಸುವಲ್ಲಿ ನಿರತರಾಗಿದ್ದಾರೆ. ಹೀಗೆ ಅವರು ಕಾಡು ತಮ್ಮ ಇಂಧನ ಮತ್ತು ಆಹಾರ – ಎರಡನ್ನೂ ಕೊಡುವ ಆಹಾರ ಕಣಜವಾಗುವಂತೆ ಕ್ರಿಯಾಶೀಲರಾಗಿದ್ದಾರೆ. ನಿಜಕ್ಕೂ ನಡೆಯಬೇಕಾದ ಹಾದಿ ಇನ್ನೂ ಬಹಳಷ್ಟಿದೆ!

■ **Anshuman Das**
Programme Manager
Welthungerhilfe Country Office - INDIA
A-3, Soami Nagar
New Delhi 110 017, India.
E-mail: Anshuman.Das@welthungerhilfe.de

**ಆಂಗ್ಲ ಮೂಲ**
ಲೀಸಾ ಇಂಡಿಯಾ, ಸಂಪುಟ 18, ಸಂಚಿಕೆ 2, ಜೂನ್ 2016



ಪ್ರದರ್ಶನದಲ್ಲಿರುವ ವೈವಿಧ್ಯಮಯ ಕಾಡು ಆಹಾರಗಳು

# ಬೆಳೆ ವೈವಿಧ್ಯದ ಹೆಚ್ಚಳದಿಂದ ಕೃಷಿಗೆ ಚೇತನ

■ ಇಡಿಐ ಆಲಿವರ್ ಕಿಂಗ್, ಎಸ್ ಅಬೂಬಕರ್ ಸಿದ್ದಿಕ್, ಗಿರಿಗನ್ ಗೋಪಿ ಮತ್ತು ನಟ್ ಕವ್

**ವರಮಾನವನ್ನು ಹೆಚ್ಚಿಸಲು ಹಣದ ಬೆಳೆಗಳಿಗಾಗಿ ಏಕಬೆಳೆ ಕೃಷಿ ಮಾಡುವ ವಿಧಾನವು ಮಿಶ್ರಬೆಳೆ ವ್ಯವಸ್ಥೆಯನ್ನು ಮತ್ತು ಅದಕ್ಕೆ ಸಂಬಂಧಿಸಿದ ಸ್ಥಳೀಯ ಆಹಾರ ವೈವಿಧ್ಯವನ್ನು ಸ್ಥಳಾಂತರಿಸಿದೆ. ಭಾಗೀದಾರಿ ವೈವಿಧ್ಯದ ತಳಿ ಆಯ್ಕೆ, ಬೇಳೆಕಾಳುಗಳೊಂದಿಗೆ ಅಂತರಬೆಳೆ ಪ್ರಯೋಗಗಳು ಮತ್ತು ಸ್ಥಳೀಯ ಸಿರಿಧಾನ್ಯಗಳ, ಬೇಳೆಕಾಳುಗಳ ಉತ್ತೇಜನ, ಸಮುದಾಯ ಬೀಜ ಬ್ಯಾಂಕುಗಳ ಮೂಲಕ ಸ್ಥಳೀಯ ಸಿರಿಧಾನ್ಯ ಬೀಜ ಉತ್ಪಾದನೆ ಇವುಗಳು ಈಗ ಕೃಷಿಗೆ ಚೇತನ ನೀಡಿ, ವರಮಾನವನ್ನೂ ಹೆಚ್ಚಿಸಿವೆ.**



ಚಿತ್ರ: ಗಿರಿಗನ್ ಗೋಪಿ/ಎಂಎಸ್‌ಎಸ್‌ಆರ್‌ಎಫ್

ಭಾಗೀದಾರಿ ತಳಿ ಆಯ್ಕೆಯು ಹೆಚ್ಚಿನ ವೈವಿಧ್ಯಕ್ಕೆ ಕಾರಣವಾಯಿತು.

ಭಾರತವು ಸಸ್ಯ ಮತ್ತು ಪ್ರಾಣಿ ಸಂಕುಲದಲ್ಲಿ ಭಾರೀ ವೈವಿಧ್ಯವನ್ನು ಹೊಂದಿದ ತಾಣವಾಗಿದೆ. ಇದು ಜಗತ್ತಿನ ಅತ್ಯಂತ ಸಿರಿವಂತ ಜೀವವೈವಿಧ್ಯ ಪ್ರದೇಶಗಳಲ್ಲಿ ಒಂದು ಎಂದೇ ಹೆಸರಾಗಿದೆ. ದುರದೃಷ್ಟವಶಾತ್, ಈ ವೈವಿಧ್ಯವು ಅಪಾಯಕಾರಿ ವೇಗದಲ್ಲಿ ನಶಿಸುತ್ತಿದೆ; ಇದಕ್ಕೆ ಜೀವವೈವಿಧ್ಯದ ಪ್ರದೇಶಗಳ ನಾಶ ಮತ್ತು ಅನ್ಯ ತಳಿಗಳ ಆಕ್ರಮಣವೇ ಕಾರಣ.

ದಕ್ಷಿಣ ಭಾರತದ ಗುಡ್ಡ ಪ್ರದೇಶಗಳಲ್ಲಿ ಸ್ಥಳೀಯ ಕೃಷಿ ಜೀವವೈವಿಧ್ಯದ ಬದಲಿಗೆ ಕೃಷಿ ಉತ್ಪನ್ನ ಹೆಚ್ಚಿಸಲು ವಾಣಿಜ್ಯ ಬೆಳೆಗಳೇ ತುಂಬಿವೆ. ತಮಿಳುನಾಡಿನ ಕೊಲ್ಲಿ ಹಿಲ್ಸ್‌ನಲ್ಲಿ ಕಳೆದ ಮೂರು ದಶಕಗಳಿಂದ ಮರಗೆಣಸಿನ ಬದಲಿಗೆ ಸ್ಥಳೀಯ ಸಿರಿಧಾನ್ಯಗಳು ಬಂದಿವೆ. ಒಡಿಶಾದ ಜೆಯ್‌ಪುರದಲ್ಲಿ ಇಂಥದ್ದೇ ಬದಲಾವಣೆ ಕಂಡಿದೆ; ಅಲ್ಲಿ ಪಾರಂಪರಿಕ ಕೃಷಿ ಪ್ರದೇಶಗಳಲ್ಲಿ ನೀಲಗಿರಿ ಮರಗಳನ್ನು ಬೆಳೆಯಲಾಗಿದೆ. ಕೇರಳದ ವಯನಾಡಿನಲ್ಲಿ ಬತ್ತದ ಬದಲಿಗೆ ಬಾಳೆ ಕೃಷಿ ಮಾಡಲಾಗುತ್ತಿದೆ. ಈ ಬಗೆಯ ವಾಣಿಜ್ಯ ಬೆಳೆಗಳು ರೈತರಿಗೆ ಗಮನಾರ್ಹ ಪ್ರಮಾಣದಲ್ಲಿ ವರಮಾನವನ್ನು ತರುತ್ತವೆಯಾದರೂ, ಮಾರುಕಟ್ಟೆ ಆಧಾರಿತ ವಾಣಿಜ್ಯ ಬೆಳೆಗಳ ಏಕಬೆಳೆಕೃಷಿಯು ಬೆಳೆ ವೈವಿಧ್ಯಕ್ಕೆ ಧಕ್ಕೆ ಕೊಟ್ಟು ತನ್ಮೂಲಕ ಮಣ್ಣಿನ ಸವಕಳಿ, ಬೆಳೆ ಕಾಯಿಲೆಗಳ ಹೆಚ್ಚಳಕ್ಕೆ ಕಾರಣವಾಗಿವೆ. ಅಲ್ಲದೆ ಈ ರೈತರು ಇನ್ನುಮುಂದೆ ಹೆಚ್ಚಿನ ಪ್ರಮಾಣದಲ್ಲಿ ವಾಯುಗುಣದ ಪ್ರಭಾವಕ್ಕೆ ಒಳಗಾಗುತ್ತಾರೆ. ಈ ಬೆಳವಣಿಗೆಯು ಸ್ಥಳೀಯ ಆಹಾರ ಉತ್ಪಾದನೆಯನ್ನು ಕುಗ್ಗಿಸಿ ಜನರು ಪ್ರದೇಶದಿಂದ ಹೊರಗೆ ಬೆಳೆಯುವ ಆಹಾರದ ಮೇಲೆಯೇ ಹೆಚ್ಚು ಅವಲಂಬಿತರಾಗುವ ಹಾಗೆ, ಸಾರ್ವಜನಿಕ ಪಡಿತರ ವ್ಯವಸ್ಥೆಯ ಅಕ್ಕಿ ಮತ್ತು ಗೋಧಿಯನ್ನೇ ಬಳಸುವ ಹಾಗೆ ಮಾಡುತ್ತದೆ.

ಬೇರುಗಳು ಮತ್ತು ಗಡ್ಡೆಗಳು ಹೆಚ್ಚಾಗಿ ಕೃಷಿ ವಿಸ್ತರಣಾ ವ್ಯವಸ್ಥೆಯಲ್ಲಿ ನಿರ್ಲಕ್ಷಕ್ಕೆ ಒಳಗಾಗಿವೆ. ಆದರೆ ಇವೇ ಗ್ರಾಮೀಣ ಭಾರತದ ಸಣ್ಣ ರೈತರ ಆಹಾರ ಮತ್ತು ವರಮಾನದ ಮೂಲಗಳಾಗಿವೆ. ಹೀಗಿದ್ದೂ ಕೊಲ್ಲಿ ಹಿಲ್ಸ್ ಪ್ರದೇಶಗಳ ಶೇಕಡಾ 70ರಷ್ಟು ಬೆಳೆಯ ಪ್ರಮಾಣದಲ್ಲಿದ್ದ ಮರಗೆಣಸಿನ ಕೃಷಿಯನ್ನು ಕೇವಲ ವಾಣಿಜ್ಯಕ ಉದ್ದೇಶಗಳಿಗಾಗಿಯೇ ಮಾಡಲಾಗುತ್ತಿದೆ. ಇಲ್ಲಿ 7 ಸಾವಿರ ಹೆಕ್ಟೇರುಗಳಷ್ಟು ಭೂಮಿಯಲ್ಲಿ ಒಂದೇ ಬಗೆಯ ಖಾದ್ಯೇತರ (ಎಚ್165) ತಳಿಯನ್ನು ಬೆಳೆಸಲಾಗುತ್ತಿದೆ; ಏಕೆಂದರೆ ಇದರ ಉತ್ತಮ ಗುಣಮಟ್ಟದ ಗಂಜಿಯನ್ನು ಉದ್ಯಮವು ಇಷ್ಟಪಡುತ್ತದೆ. ಒಂದೇ ಬಗೆಯ ಮರಗೆಣಸನ್ನು ಈ ರೀತಿ ಭಾರೀ ಪ್ರಮಾಣದ ಪ್ರದೇಶದಲ್ಲಿ ಏಕಬೆಳೆಯಾಗಿ ಬೆಳೆಯುವುದರಿಂದ ರೋಗಗಳ ಪ್ರಮಾಣ ಹೆಚ್ಚಿದೆ; ಮಣ್ಣಿನ ಸವಕಳಿಯಾಗಿದೆ; ಉತ್ಪಾದಕತೆಯೂ ತಗ್ಗಿದೆ. ಇದು ಸ್ಥಳೀಯ ಬೆಳೆ ವೈವಿಧ್ಯದೊಂದಿಗೆ ಸೇರಿಕೊಂಡಿದ್ದ ಮಿಶ್ರಬೆಳೆ ವ್ಯವಸ್ಥೆಯನ್ನೂ ಬದಲಿಸಿಬಿಟ್ಟಿದೆ. ಇದರಿಂದ ಆಹಾರ ಭದ್ರತೆ ಮತ್ತು ವಾಯುಗುಣ ಸಹಿಷ್ಣುತೆಯಲ್ಲಿ ಋಣಾತ್ಮಕ ಪರಿಣಾಮಗಳು ಉಂಟಾಗುತ್ತಿವೆ. ಇದಕ್ಕೆ ಪ್ರತಿಕ್ರಿಯಾತ್ಮಕವಾಗಿ ಎಂಎಸ್ ಸ್ವಾಮಿನಾಥನ್ ಸಂಶೋಧನಾ ಪ್ರತಿಷ್ಠಾನವು (ಎಂಎಸ್‌ಎಸ್‌ಆರ್‌ಎಫ್) ಅಲ್ಬರ್ಟಾ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಕೃಷಿಜೀವವೈವಿಧ್ಯ ಸೂಕ್ಷ್ಮ ಪ್ರದೇಶಗಳಲ್ಲಿ ಬಡತನ ಮತ್ತು ಅಪೌಷ್ಟಿಕತೆ ನಿವಾರಣೆ (ಅಲ್ಲೆವೇಟಿಂಗ್ ಪಾವರ್ಟಿ ಎಂಡ್ ಮಾಲ್‌ನ್ಯೂಟ್ರಿಶನ್ ಇನ್ ಆಗ್ರೋಬಯೋಡೈವರ್ಸಿಟಿ ಹಾಟ್‌ಸ್ಪಾಟ್ಸ್ – ಎಪಿಎಂ) ಯೋಜನೆಯ ಉಪಕ್ರಮವಾಗಿ ಮರಗೆಣಸಿನ ವಿವಿಧ ತಳಿಗಳನ್ನು ಪ್ರೋತ್ಸಾಹಿಸುವ ಭಾಗೀದಾರಿ ವೈವಿಧ್ಯತಳಿ ಆಯ್ಕೆ (ಪಿವಿಎಸ್) ಪ್ರಕ್ರಿಯೆಯನ್ನು ಕೈಗೊಂಡಿತು; ಅಲ್ಲದೆ ಬೇಳೆಕಾಳುಗಳು ಮತ್ತು ಸಿರಿಧಾನ್ಯಗಳ ಮಿಶ್ರಬೆಳೆಯನ್ನು ಕೈಗೊಳ್ಳುವ ಹಾಗೂ ಸಮುದಾಯ ಬೀಜ ಬ್ಯಾಂಕುಗಳ ಮೂಲಕ ಅತ್ಯುತ್ತಮ ಗುಣಮಟ್ಟದ ಸಿರಿಧಾನ್ಯ ಬೀಜಗಳ ಉತ್ಪಾದನೆಯನ್ನು ಸಂಘಟಿಸಿತು.

ಮರಗೆಣಸು ಮತ್ತು ಸುವರ್ಣಗೆಡ್ಡೆ ಬಗ್ಗೆ ಕೊಲ್ಲಿ ಹಿಲ್ಸ್ ಮತ್ತು ವಯನಾಡಿನಲ್ಲಿ ಭಾಗೀದಾರಿ ಸಂಶೋಧನೆಯನ್ನು ಕೈಗೊಂಡ ಪರಿಣಾಮವಾಗಿ ಅಲ್ಲಿ ರೈತರು ತಮ್ಮ ಅಗತ್ಯಗಳಿಗೆ ತಕ್ಕಂತೆ, ಹೆಚ್ಚು ಇಳುವರಿ ಕೊಡುವಂತಹ ಹೆಚ್ಚಿನ ಪ್ರಮಾಣದಲ್ಲಿ ಗಂಜಿಯನ್ನು

ಹೊಂದಿರುವ, ಹೆಚ್ಚು ಬರನಿರೋಧಕ ಶಕ್ತಿ ಇರುವ ಮತ್ತು ಸ್ಥಳೀಯ ಸನ್ನಿವೇಶಗಳಿಗೆ ಸೂಕ್ತವಾಗಿ ಹೊಂದಿಕೊಳ್ಳುವ ಉತ್ತಮ ತಳಿಗಳನ್ನು ಹುಡುಕಲು ಸಾಧ್ಯವಾಯಿತು. ಅಂತರ ಬೆಳೆಗಳ ಮೂಲಕ ಅವರು ಕಡಿಮೆ ಕಾಲಾವಧಿಯ ವೈವಿಧ್ಯಮಯ ಬೆಳೆಗಳನ್ನು ಮುಖ್ಯಬೆಳೆಯ ಜೊತೆಗೇ ಬೆಳೆಯಲೂ ಸಾಧ್ಯವಾಯಿತು. ಇದರಿಂದಾಗಿ ಮನೆಗಳ ಆಹಾರ ಪದ್ಧತಿಯಲ್ಲಿನ ಪೌಷ್ಟಿಕತಾ ಪ್ರಮಾಣವೂ ಹೆಚ್ಚಿತು; ಹೆಚ್ಚಿನ ವರಮಾನವೂ ಬಂತು. ಹೀಗೆ ಈ ಪ್ರಕ್ರಿಯೆಯು ಬರದಂತಹ ಆಘಾತಗಳನ್ನು ಸಹಿಸಿಕೊಳ್ಳುವ ಕೃಷಿ ವ್ಯವಸ್ಥೆಯ ಮೂಲಕ ಶಕ್ತಿಯನ್ನೂ ತಂದುಕೊಟ್ಟಿತು.



ರೈತರು ಉತ್ತಮ ಗುಣಮಟ್ಟದ ಸುವರ್ಣಗೆಡ್ಡೆ ತಳಿಯನ್ನು ಆಯ್ಕೆ ಮಾಡಿ ಅತ್ಯುತ್ತಮ ಕೃಷಿ ವಿಧಾನಗಳನ್ನು ಅನುಸರಿಸಿದ್ದಾರೆ.

ಚಿತ್ರ: ಗಿರಿಗನ್ ಗೋಪಿ/ಎಂಎಸ್‌ಎಸ್‌ಆರ್‌ಎಫ್

## ಮೂಡುತ್ತಿರುವ ಹೊಸ ಫಲಿತಾಂಶಗಳು

### ಭಾಗೀದಾರಿ ತಳಿವೈವಿಧ್ಯ ಆಯ್ಕೆಯಿಂದಾಗಿ ಮರಗೆಣಸಿನಲ್ಲಿ ಹೆಚ್ಚಿದ ವೈವಿಧ್ಯ

ಪುರುಷ ಮತ್ತು ಮಹಿಳಾ ಕೃಷಿಕರ ಭಾಗಿತ್ವದಲ್ಲಿ ಗಂಜಿ ಪ್ರಮಾಣ, ಉತ್ಪಾದಕತೆ ಮತ್ತು ಖಾದ್ಯಶೀಲತೆ – ಈ ಹಿನ್ನೆಲೆಯಲ್ಲಿ ಆಯ್ಕೆ ಪ್ರಯೋಗಗಳನ್ನು ನಡೆಸಲಾಯಿತು. ಇದಕ್ಕಾಗಿ ಕೇರಳದ ಸೆಂಟ್ರಲ್ ಕ್ರಾಪ್ಸ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ಗೆ 11 ಬಗೆಯ ಮರಗೆಣಸಿನ ತಳಿಗಳನ್ನು ತರಲಾಯಿತು. ರೈತರು ಇವುಗಳಲ್ಲಿ ಎಚ್165ಗೆ ಹೋಲಿಸಬಹುದಾದ ಮೂರು ಮರಗೆಣಸಿನ ತಳಿಗಳನ್ನು ಗುರುತಿಸಿದರು (ಸಿಎಂಆರ್1, ಸಿಎಂಆರ್ 73 ಮತ್ತು ಶ್ರೀರೇಖಾ). ಇದರಲ್ಲಿ ಶ್ರೀರೇಖಾ ತಳಿಯು ಖಾದ್ಯ ಮರಗೆಣಸೂ ಆಗಿತ್ತು. ಈ ಮೂರೂ ತಳಿಗಳನ್ನು ಈಗ ರೈತ ಕುಟುಂಬಗಳಿಗೆ ಒದಗಿಸಲಾಗುತ್ತಿದೆ. ಇವುಗಳು ಈ ಪ್ರದೇಶದ ಮರಗೆಣಸು ವೈವಿಧ್ಯಕ್ಕೆ ತಮ್ಮದೇ ಕೊಡುಗೆ ನೀಡಲಿವೆ.

### ಅಂತರಬೆಳೆಯಿಂದ ವರಮಾನ ಹೆಚ್ಚಳ

ಇನ್ನೊಂದು ಭಾಗೀದಾರಿ ಪ್ರಯೋಗದಲ್ಲಿ ಕೊಲ್ಲಿ ಹಿಲ್ಸ್ ರೈತರು ಮರಗೆಣಸಿನ ನಡುವೆ ರಾಗಿ, ಕಪ್ಪು ಅವರೆ ಮತ್ತು ಈರುಳ್ಳಿಯನ್ನೂ ಬೆಳೆಸಿ ತಮ್ಮ ಬೆಳೆ ಉತ್ಪಾದನೆಯ ವೈವಿಧ್ಯವನ್ನು ಹೆಚ್ಚಿಸಿದರು. ಸಿರಿಧಾನ್ಯಗಳಿಂದ ಕೂಡಿದ ಮರಗೆಣಸಿನ ಹೊಲಗಳಲ್ಲಿ ರೈತರು ಎಕರೆಗೆ 170 ಕಿಲೋ ಸಿರಿಧಾನ್ಯ ಪಡೆದರು. ಇದು ಕೃಷಿ ವರಮಾನವನ್ನು ಶೇಕಡಾ 12ರಷ್ಟು ಹೆಚ್ಚಿಸಿತು. ಮರಗೆಣಸಿನ ನಡುವೆ ಕಪ್ಪು ಅವರೆಯನ್ನು ಬೆಳೆದಿದ್ದರಿಂದ ಕೃಷಿ ವರಮಾನದಲ್ಲಿ ಶೇಕಡಾ 23ರಷ್ಟು ಹೆಚ್ಚಳವಾಯ್ತು; ಇಲ್ಲಿ ಎಕರೆಗೆ 140 ಕಿಲೋ ಅವರೆ ಉತ್ಪಾದನೆಯಾಯಿತು. ಹಾಗೆಯೇ ಮರಗೆಣಸಿನ ನಡುವೆಯೇ ಸಿರಿಧಾನ್ಯ ಮತ್ತು ಕಾಳನ್ನು ಬೆಳೆದಿದ್ದರಿಂದ ಎಕರೆಗೆ ತಲಾ 110 ಕಿಲೋಗ್ರಾಂ ಮತ್ತು 80 ಕಿಲೋಗ್ರಾಂ ಉತ್ಪಾದನೆಯಾಯಿತು. ಇದರಿಂದ ಮರಗೆಣಸೊಂದನ್ನೇ ಬೆಳೆದಿದ್ದರೆ ಸಿಗುತ್ತಿದ್ದ ಆದಾಯಕ್ಕಿಂತ ಶೇಕಡಾ 21.5ರಷ್ಟು ಹೆಚ್ಚಿನ ಆದಾಯ ಬಂದಿತು.

ಇಲ್ಲಿ ಈರುಳ್ಳಿಯನ್ನು ಮರಗೆಣಸಿನ ನಡುವೆಯೇ ಬೆಳೆದಿದ್ದರಿಂದ ಎಕರೆಗೆ 300 ಕಿಲೋ ಈರುಳ್ಳಿ ಸಿಕ್ಕಿ ಕುಟುಂಬದ ವರಮಾನವು ಶೇಕಡಾ 60ರಷ್ಟು ಹೆಚ್ಚಿತು. ಈ ಬಗೆಯ ಅಂತರಬೆಳೆಯು ಮರಗೆಣಸಿನ ಫಸಲಿನ ಮೇಲೆ ಯಾವದೇ ಪರಿಣಾಮವನ್ನೂ ಬೀರಲಿಲ್ಲ. ಅಲ್ಲದೆ ಸಿರಿಧಾನ್ಯದ, ಬೇಳೆಕಾಳುಗಳ ಮತ್ತು ಈರುಳ್ಳಿ ಫಸಲನ್ನು ಮರಗೆಣಸಿನ ಕಟಾವಿಗೆ ಮುನ್ನವೇ ತೆಗೆಯಲಾಗುತ್ತಿತ್ತು. ಇದಲ್ಲದೆ ದ್ವಿದಳ ಧಾನ್ಯದ ಬೆಳೆಯಿಂದಾಗಿ ಮಣ್ಣಿನ ಆರೋಗ್ಯವೂ ಸುಧಾರಿಸಿತು. ಈ ಬಗೆಯ ಅಂತರ ಬೆಳೆಯಿಂದ ಮಹಿಳೆಯರು ಮತ್ತು ಮಕ್ಕಳಿಗೆ ತುಂಬಾ ಪ್ರಯೋಜನವಾಯಿತು; ಸಿರಿಧಾನ್ಯಗಳು ಮತ್ತು ಬೇಳೆ ಕಾಳುಗಳು ಆಹಾರದಲ್ಲಿ ಬಳಕೆಯಾಗುವ ಪ್ರಮಾಣ ಹೆಚ್ಚಿತು.

**ಭಾಗೀದಾರಿ ಸಂಶೋಧನೆಯ ಮೂಲಕ ರೈತರು ಹೆಚ್ಚಿನ ಇಳುವರಿ ತರುವ ಮತ್ತು ವರಮಾನವನ್ನೂ ಹೆಚ್ಚಿಸುವ ಮರಗೆಣಸು ಮತ್ತು ಸುವರ್ಣಗೆಡ್ಡೆಯ ತಳಿಗಳನ್ನು ಗುರುತಿಸಿದರು. ಅವರು ಅಂತರಬೆಳೆಯ ತಂತ್ರಗಳನ್ನೂ ಕಲಿತರು; ಇದರಿಂದಾಗಿ ಅವರ ಆಹಾರಬುಟ್ಟಿಯ ಪೌಷ್ಟಿಕತೆಯ ಮೌಲ್ಯವೂ ಹೆಚ್ಚಿತು.**

ನಾವು ಹೆಚ್ಚಿನ ವರಮಾನವನ್ನು ಗಳಿಸುವುದಕ್ಕಾಗಿ ಹಲವು ವರ್ಷಗಳಿಂದ ಮರಗೆಣಸಿನ ಏಕಬೆಳೆ ಕೃಷಿಯನ್ನೇ ಮಾಡಿಕೊಂಡು ಬಂದಿದ್ದೆವು. ಈಗ ನಾವು ಬಳಸಿದ ಹೊಸ ಅಂತರಬೆಳೆ ಪದ್ಧತಿಯು ನಮಗೆ ರಾಗಿ ಮತ್ತು ಕಪ್ಪು ಅವರೆಯನ್ನು ಮರಗೆಣಸಿನ ಫಸಲಿನ ಪ್ರಮಾಣದಲ್ಲಿ ಯಾವುದೇ ಬದಲಾವಣೆ ಇಲ್ಲದೆಯೇ ಪಡೆಯಲು ಸಹಕಾರಿಯಾಯಿತು. ನಮ್ಮ ಕುಟುಂಬಕ್ಕೆ ಇದು ಹೆಚ್ಚಿನ ಆಹಾರವನ್ನು ಒದಗಿಸಿದೆ. ಆಹಾರವನ್ನು ಖರೀದಿಸಲು ಕೇವಲ ಮರಗೆಣಸೊಂದನ್ನೇ ಅವಲಂಬಿಸಿರಬೇಕಾದ ಪರಿಸ್ಥಿತಿ ತಪ್ಪಿದೆ ಎಂದು ತಮರಕುಳಂನ 28ರ ಹರೆಯದ ಮಹಿಳಾ ಕೃಷಿಕರಾದ ಕಲೈಸೆಲ್ವಿ ಹೇಳುತ್ತಾರೆ.

### ಸಮುದಾಯ ಬೀಜ ಬ್ಯಾಂಕುಗಳಿಂದ ಹೆಚ್ಚಿದ ಸಹಿಷ್ಣುತೆ

ಭಾರತದ ಸಣ್ಣ ಮತ್ತು ಮಧ್ಯಮವರ್ಗದ ಸಮುದಾಯಗಳು ಸದಾ ಗುಣಮಟ್ಟದ ಬೀಜ ಪಡೆಯಲು ಸಾಕಷ್ಟು ಅವಕಾಶಗಳನ್ನು ಹೊಂದಿರುವುದಿಲ್ಲ. ಇದಕ್ಕೆ ದುರ್ಬಲವಾದ ಸಾಂಪ್ರದಾಯಿಕ ಬೀಜ ವ್ಯವಸ್ಥೆ ಮತ್ತು ಸರ್ಕಾರಗಳು ಮತ್ತು ವಾಣಿಜ್ಯ ಮಾರುಕಟ್ಟೆಯಲ್ಲಿ ಮಾತ್ರವೇ ಖರೀದಿಸಬೇಕಾದ ಅವಲಂಬನೆ ಹೆಚ್ಚಿರುವುದೂ ಕಾರಣ. ಎಪಿಎಂ ಯೋಜನೆಯು ಬೀಜ ಬ್ಯಾಂಕುಗಳ ಸ್ಥಾಪನೆಯನ್ನು ಬೆಂಬಲಿಸಿತು; ಇದರ ಮೂಲಕ ಗುಣಮಟ್ಟದ ಸ್ಥಳೀಯ, ಹೆಚ್ಚಿನ ಫಸಲನ್ನು ನೀಡುವ, ಅಪೇಕ್ಷಣೀಯ ಖಾದ್ಯ ಗುಣಗಳನ್ನು ಹೊಂದಿದ ಬತ್ತ ಮತ್ತು ರಾಗಿಯ ಬೀಜಗಳನ್ನು ನೀಡಿತು. ಈ ಬೀಜ ಬ್ಯಾಂಕುಗಳನ್ನು ರೈತರ ಕ್ಲಬ್‌ಗಳು ಅಥವಾ ಮಹಿಳೆಯರ ಸ್ವಸಹಾಯ ಗುಂಪುಗಳು ನಿರ್ವಹಿಸುತ್ತವೆ. ಬೀಜಗಳನ್ನು ಪಡೆಯಬಯಸುವವರು ಫಸಲಿನ ನಂತರ ಪಡೆದ ಬೀಜದ ಇಮ್ಮಡಿ ಪ್ರಮಾಣದಲ್ಲಿ ಬಿತ್ತನೆ ಬೀಜಗಳನ್ನು ಮರಳಿಸಬೇಕು. ಹೀಗೆ ಬೀಜ ಬ್ಯಾಂಕು ಸುಸ್ಥಿರವಾಗುತ್ತದೆ. ಸಮುದಾಯದ ಸದಸ್ಯರು ಗುಣಮಟ್ಟದ ಮತ್ತು ಉತ್ಕೃಷ್ಟ ಬೀಜಗಳನ್ನು ಗುರುತಿಸುವ ಕಲೆಯನ್ನೂ ಕರಗತ ಮಾಡಿಕೊಂಡರು. ಬೀಜ ಬ್ಯಾಂಕುಗಳ ಸ್ಥಾಪನೆಯಿಂದ ಸಕಾಲಿಕವಾಗಿ ಬಿತ್ತನೆ ಬೀಜಗಳು ಸಿಗುವಂತಾಯಿತು; ಬೀಜಗಳನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವೂ ರೈತರಿಗೆ ಸಿಕ್ಕಿತು; ಬೆಳೆನಷ್ಟದ ತಾಪತ್ರಯವನ್ನು ತಗ್ಗಿಸುವುದಕ್ಕೂ ನೆರವಾಯಿತು; ಬೆಳೆ ಉತ್ಪನ್ನವೂ ಹೆಚ್ಚಿತು. ಹೊಸ ಮತ್ತು ಸುಧಾರಿತ ತಳಿಗಳೂ ಈ

ಪ್ರದೇಶದ ವೈವಿಧ್ಯವನ್ನು ಹೆಚ್ಚಿಸುವಲ್ಲಿ ಸಹಕಾರಿಯಾದವು. ಹೀಗೆ ಕೃಷಿಜೀವವೈವಿಧ್ಯವನ್ನು ಹೆಚ್ಚಿಸುವ ಮೂಲಕ ಮತ್ತು ಮಾನವ ಸಾಮರ್ಥ್ಯವನ್ನು ವೃದ್ಧಿಸುವ ಮೂಲಕ ಬೀಜ ಬ್ಯಾಂಕುಗಳ ಈ ಸಮುದಾಯಗಳ ದೂರಗಾಮಿ ಸಹಿಷ್ಣುತೆ ಮತ್ತು ಆಹಾರ ಭದ್ರತೆಗೆ ಕೊಡುಗೆಯನ್ನು ನೀಡುತ್ತಿವೆ.

## ಸುವರ್ಣಗೆಡ್ಡೆ : ವಿಧಾಯಕ ಹೆಜ್ಜೆಗಳು

ಕೇರಳದ ವಯನಾಡ್ ಜಿಲ್ಲೆಯಲ್ಲಿ ರೈತರು ಸಾಂಪ್ರದಾಯಿಕವಾಗಿ ತಮ್ಮ ಬತ್ತದ ಹೊಲಗಳಲ್ಲಿ ಬತ್ತ ಬೆಳೆದ ನಂತರದ ದಿನಗಳಲ್ಲಿ ಸುವರ್ಣಗೆಡ್ಡೆಯನ್ನು ಬೆಳೆಸುತ್ತ ಬಂದಿದ್ದಾರೆ. ಆದರೆ ಅವರೆಲ್ಲರೂ ಒಂದೇ ಬಗೆಯ ಸುವರ್ಣಗೆಡ್ಡೆಯ ಮೇಲೆ ಅವಲಂಬಿತರಾಗಿದ್ದಾರೆ; ಆದ್ದರಿಂದ ಅವರು ಹೆಚ್ಚಿನ ಉತ್ಪಾದನಾ ವೆಚ್ಚವನ್ನೂ ಅನುಭವಿಸುತ್ತಿದ್ದಾರೆ. ಭಾಗೀದಾರಿ ಸಂಶೋಧನೆಗಳ ಮೂಲಕ ರೈತರು ಈಗ ಅತ್ಯುತ್ತಮ ಮತ್ತು ಕಡಿಮೆ ಕೃಷಿ ವೆಚ್ಚವನ್ನು ಬೇಡುವ ಕಡಿಮೆ ಬೆಲೆಯ ಬೀಜಗಳಿರುವ ಬಹುಬೇಗ ಮೊಳಕೆಯೊಡೆಯುವ ತಳಿಗಳನ್ನು ಗುರುತಿಸಿದ್ದಾರೆ. ಗಜೇಂದ್ರ ಮತ್ತು ವಯನಾಡ್ ಲೋಕಲ್ ತಳಿಗಳು ಅವುಗಳ ಫಸಲು ಪ್ರಮಾಣ, ಕಾಯಿಲೆ ನಿರೋಧಕ ಶಕ್ತಿ, ಬರ ನಿರೋಧಕತೆ ಮತ್ತು ಮೊಳಕೆಯೊಡೆಯುವ ಕಾಲಾವಧಿ – ಇವುಗಳ ಆಧಾರದಲ್ಲಿ ರೈತರಿಂದ ಆಯ್ಕೆಯಾಗಿದೆ. ಸುಧಾರಿತ ಕೃಷಿ ವಿಧಾನಗಳೂ ಹೆಚ್ಚಿನ ಫಸಲಿಗೆ ಕಾರಣವಾಗಿವೆ; ಸಾಂಪ್ರದಾಯಿಕ ವಿಧಾನಕ್ಕಿಂತ ಗಜೇಂದ್ರ ಮತ್ತು ವಯನಾಡ್ ಸುವರ್ಣಗೆಡ್ಡೆಗಳು ಅನುಕ್ರಮವಾಗಿ ಶೇಕಡಾ 24 ಮತ್ತು 30ರಷ್ಟು ಹೆಚ್ಚಿನ ಫಸಲನ್ನು ನೀಡುತ್ತವೆ.

ಕೇರಳದಲ್ಲಿ ಭೂಒಡೆತನ ಇರುವ ಕುಟುಂಬಗಳು ಭೂರಹಿತ ಮಹಿಳೆಯರು ಮತ್ತು ಮಧ್ಯಮ ಪ್ರಮಾಣದ ರೈತರಿಗೆ ತಮ್ಮ ಹೊಲಗಳನ್ನು ಬತ್ತದ ಕಟಾವಾದ ನಂತರದ ಕಾಲಾವಧಿಯಲ್ಲಿ (ಡಿಸೆಂಬರಿನಿಂದ ಜೂನ್) ಸುವರ್ಣಗೆಡ್ಡೆ ಅಥವಾ ಇನ್ನಾವುದೇ ಕಿರು ಕಾಲಾವಧಿಯ ಬೆಳೆಯನ್ನು ಯಾವುದೇ ಶುಲ್ಕವಿಲ್ಲದೆ ಬೆಳೆಯಲು ಅವಕಾಶ ಮಾಡಿಕೊಡುತ್ತಾರೆ. ಇದರಿಂದಾಗಿ ಹೊಲಗಳಲ್ಲಿ ಉಳಿದುಕೊಳ್ಳುವ ಬೆಳೆ ತ್ಯಾಜ್ಯಗಳು ಮತ್ತು ರಸಗೊಬ್ಬರಗಳು ಭೂಮಿಯ ಒಡೆತನ ಹೊಂದಿದ ರೈತರಿಗೆ ಲಾಭದಾಯಕವಾಗಿ ಪರಿಣಮಿಸುತ್ತದೆ. ಅಲ್ಲದೆ ಭೂಮಿಯನ್ನು ಇನ್ನೊಂದು ಅವಧಿಯಲ್ಲೂ ಉಳುಮೆ ಮಾಡುವುದರಿಂದ ಮಣ್ಣು ಹೊರಳಿ ಬತ್ತದ ಬೆಳೆಗೂ ಅನುಕೂಲವಾಗುತ್ತದೆ. ಇದರಿಂದ ಮುಂದಿನ ಬತ್ತದ ಬೆಳೆಯೂ ಹೆಚ್ಚಾಗುತ್ತದೆ. ಈ ಯೋಜನೆಯ ಫಲವಾಗಿ ಮಹಿಳೆಯರು ಇಲ್ಲಿ ಉತ್ತಮ ಮಟ್ಟದ ಬೀಜದ ಮರಗೆಣಸನ್ನು ಬೆಳೆದು ಆರು ತಿಂಗಳುಗಳಲ್ಲಿ ಏನಿಲ್ಲವೆಂದರೂ 3ರಿಂದ 13 ಸಾವಿರ ರೂ.ಗಳನ್ನು ಪಡೆಯುತ್ತಾರೆ. ಇದಲ್ಲದೆ ಬತ್ತದ ಬಂಜರು ಹೊಲಗಳಲ್ಲಿ ಅವರು ಅಲಸಂದೆ, ಸೇವಂತಿಗೆ, ಬೆಂಡೆಕಾಯಿ,



ಚಿತ್ರ: ಗಿರಿಗನ್ ಗೋಪಿ/ಎಂಎಸ್ಎಸ್ಆರ್ಎಫ್



ಈರುಳ್ಳಿಯೊಂದಿಗೆ ಮರಗೆಣಸನ್ನೂ ಸೇರಿಸಿ ಬೆಳೆದಿರುವುದರಿಂದ ಕುಟುಂಬದ ವರಮಾನದಲ್ಲಿ ಶೇಕಡಾ 60ರಷ್ಟು ಹೆಚ್ಚಳವಾಯಿತು.

ಚಿತ್ರ: ಎಸ್ ಅಬೂಬಕರ್ ಸಿದ್ದಿಕಿ/ಎಂಎಸ್ಎಸ್ಆರ್ಎಫ್

ಮೆಕ್ಕೆಜೋಳ, ಸಿಹಿಗುಂಬಳ ಮತ್ತು ಸೌತೆಕಾಯಿ ಮುಂತಾದ ವೈವಿಧ್ಯಮಯ ತರಕಾರಿಗಳನ್ನು ಬೆಳೆಸಿರುವುದೂ ಇದೆ. ಇದನ್ನು ಅವರು ತಮ್ಮ ಸ್ವಂತ ಬಳಕೆಗಾಗಿ ಬೆಳೆಯುತ್ತಾರೆ.

## ಸಮಾರೋಪ

ಭಾಗೀದಾರಿ ಸಂಶೋಧನೆಯ ಮೂಲಕ ರೈತರು ಹೆಚ್ಚಿನ ಇಳುವರಿ ತರುವ ಮತ್ತು ವರಮಾನವನ್ನೂ ಹೆಚ್ಚಿಸುವ ಮರಗೆಣಸು ಮತ್ತು ಸುವರ್ಣಗೆಡ್ಡೆಯ ತಳಿಗಳನ್ನು ಗುರುತಿಸಿದರು. ಅವರು ಅಂತರಬೆಳೆಯ ತಂತ್ರಗಳನ್ನೂ ಕಲಿತರು; ಇದರಿಂದಾಗಿ ಅವರ ಆಹಾರಬುಟ್ಟಿಯ ಪೌಷ್ಟಿಕತೆಯ ಮೌಲ್ಯವೂ ಹೆಚ್ಚಿತು. ರೈತರ ಕ್ಲಬ್‌ಗಳ ಮತ್ತು ಮಹಿಳಾ ಸ್ವಸಹಾಯ ಗುಂಪುಗಳ ಬೀಜ ಬ್ಯಾಂಕುಗಳು ಕೃಷಿಜೀವವೈವಿಧ್ಯವನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಿದವು. ಇದರಿಂದ ಸಣ್ಣ ಮತ್ತು ಅತಿಸಣ್ಣ ಕೃಷಿ ಕುಟುಂಬಗಳ ಬರಗಾಲದ ಸಮಸ್ಯೆಗಳು ಕಡಿಮೆಯಾದವು. ಮಹಿಳಾ ರೈತರು ಮತ್ತು ಭೂರಹಿತ ಸಮುದಾಯಗಳು ಸುಧಾರಿತ ಕೃಷಿ ವಿಧಾನಗಳಿಂದ ಮತ್ತು ಗುಣಮಟ್ಟದ ಬೀಜ ಲಭ್ಯತೆಯಿಂದಾಗಿ ಲಾಭ ಪಡೆದರು. ಇದರಿಂದ ಅವರಿಗೆ ಹೊಸ ಮತ್ತು ವೈವಿಧ್ಯಮಯ ಜೀವನೋಪಾಯದ ಮಾರ್ಗಗಳೂ ಹೊಳೆದವು.

## ಕೃತಜ್ಞತೆಗಳು

ಕೊಲ್ಲಿ ಹಿಲ್ಸ್‌ನ ಎಂಎಸ್ಎಸ್ಆರ್‌ಎಫ್‌ನ ಜೆ ಜೆಯಕುಮಾರ್, ಜಿ ವೆಂಕಟೇಶನ್, ಪಿ ಯುವರಾಜ್, ವಿ ಚೇಲದುರೈ ವಯನಾಡಿನ ಎಂಎಸ್ಎಸ್ಆರ್‌ಎಫ್‌ನ ರಾಜೇಸ್ ಪಿಸಿ, ಅರುಣ್ ರಾಜ್, ಸುಬಿನ್ ಮತ್ತು ಪಿ ಅಸಿಯಾ, ಸ್ಟಾರ್ ಫಾರ್ಮರ್ಸ್ ಕ್ಲಬ್, ಕೀಲ್ ಸೆಂಗಾದು, ಕೊಲ್ಲಿ ಹಿಲ್ಸ್, ಮತ್ತು ಎಪಿಎಂ – ಮರಗೆಣಸು ಕೃಷಿ ಸಂಶೋಧನಾ ಗುಂಪು , ಕೊಲ್ಲಿ ಹಿಲ್ಸ್.

ಈ ಲೇಖನವು Integrated agriculture enhances farm productivity and livelihoods in agro-biodiversity hotspots ಎಂಬ ಮೂಲ ಲೇಖನದ ಸಂಪಾದಿತ ಆವೃತ್ತಿಯಾಗಿದೆ. ಇದನ್ನು ಸ್ಟೋರೀಸ್ ಆಫ್ ಚೇಂಜ್ ಎಂಬ ಸರಣಿ ಲೇಖನಗಳಲ್ಲಿ ಒಂದು ಕಥೆಯಾಗಿ ಲೇಖಕರು ಪ್ರಕಟಿಸಿದ್ದಾರೆ. ಸಂಶೋಧನೆಗಳ ಮೇಲಿನ ಈ ಸರಣಿ ವರದಿಗಳನ್ನು ಕೆನಡಿಯನ್ ಇಂಟರ್‌ನ್ಯಾಶನಲ್ ಫುಡ್ ಸೆಕ್ಯುರಿಟಿ ರಿಸರ್ಚ್ ಫಂಡ್ (ಸಿಐಎಫ್ಎಸ್ಆರ್‌ಎಫ್) ಎಂಬ ಕೆನಡಾದ ಇಂಟರ್‌ನ್ಯಾಶನಲ್ ಡೆವಲಪ್‌ಮೆಂಟ್ ರಿಸರ್ಚ್ ಸೆಂಟರ್ (ಐಡಿಆರ್‌ಸಿ)ನ ಕಾರ್ಯಕ್ರಮವು ಬೆಂಬಲಿಸಿದೆ. ಈ ಕಾರ್ಯಕ್ರಮವನ್ನು ಗ್ಲೋಬಲ್ ಅಫೇರ್ಸ್ ಕೆನಡಾ (ಜಿಎಸಿ) ಮೂಲಕ ಕೆನಡಾ ಸರ್ಕಾರವು ನೀಡಿದ ಹಣಕಾಸು ಸಹಾಯದೊಂದಿಗೆ ನಡೆಸಿ 2014ರ ಏಪ್ರಿಲ್‌ನಲ್ಲಿ WREN ಮೀಡಿಯಾಗಾಗಿ ನಿರ್ಮಿಸಲಾಗಿದೆ.

■ **EDI Oliver King**
M S Swaminathan Research Foundation
3rd Cross Street, Institutional Area, Taramani
Chennai 600 113, India
E-mail: ediok151173@gmail.com

## ಆಂಗ್ಲ ಮೂಲ

ಲೀಸಾ ಇಂಡಿಯಾ, ಸಂಪುಟ 18, ಸಂಚಿಕೆ 2, ಜೂನ್ 2016

# ಸಣ್ಣ ರೈತರ ಬಹುಬೇಡಿಕೆಗಳ ಪೂರೈಕೆ

■ ಎಂ ಎನ್ ಕುಲಕರ್ಣಿ ಮತ್ತು ಎಸ್ ಎಂ ಹಿರೇಮಠ



ಟಿಬಿಎಫ್‌ಎಸ್‌ನೊಂದಿಗೆ ಕುಟುಂಬ ಕೃಷಿ

**ಕೃಷಿಪರಿಸರ ವಿಜ್ಞಾನವನ್ನು ಉತ್ತೇಜಿಸುವಲ್ಲಿ ಸರ್ಕಾರೇತರ ಸ್ವಯಂಸೇವಾ ಸಂಸ್ಥೆಗಳು ಮುಂಚೂಣಿಯಲ್ಲಿವೆ. ರೈತರನ್ನೇ ಅಭ್ಯುದಯದ ಭಾಗೀದಾರರನ್ನಾಗಿ ಮಾಡಿದ ಬೈಫ್ ಕರ್ನಾಟಕದ 505 ಹಳ್ಳಿಗಳಲ್ಲಿನ 21 ಸಾವಿರ ರೈತರ ಜೀವನೋಪಾಯದ ಭದ್ರತೆಯನ್ನು ಹೆಚ್ಚಿಸಿದೆ. ಬೀಜಗಳು, ನಾಟಿಗೆ ಬೇಕಾದ ವಸ್ತುಗಳು, ಜ್ಞಾನ ಮತ್ತು ಉತ್ತೇಜನ ಇದ್ದರೆ ಈಗಿನ ಅಸ್ಥಿರ ಕೃಷಿಯನ್ನು ಸುಸ್ಥಿರ ಕೃಷಿಯೆಡೆಗೆ ಕರೆದೊಯ್ಯಬಹುದು ಎಂಬುದನ್ನು ಇದು ಸಾಬೀತುಪಡಿಸಿದೆ.**

ಸಣ್ಣ ಮತ್ತು ಅತಿಸಣ್ಣ ರೈತರನ್ನು ಹಣ್ಣಿನ ಮರಗಳು, ಕಾಡುಮರಗಳು (ಪಶು ಆಹಾರದ ಮರಗಳು, ಬಯೋಮಾಸ್ ತಳಿಗಳು, ನಾಟ ಮತ್ತು ಇಂಧನದ ಮರ ತಳಿಗಳು), ಬದುಗಳ ಮೇಲೆ ಪಶು ಆಹಾರ ಬೆಳೆ, ಮಣ್ಣು ಮತ್ತು ನೀರಿನ ನಿರ್ವಹಣೆ (ಮರ ಆಧಾರಿತ ಕೃಷಿ ವ್ಯವಸ್ಥೆ, TBFS) ಇವುಗಳೊಂದಿಗಿನ ಬೈಫ್ (BAIF)ನ ಈ ಪ್ರಯೋಗವು 1985ರಲ್ಲೇ ಆರಂಭವಾಯಿತು. ಟಿಬಿಎಫ್‌ಎಸ್‌ನ್ನು ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನ ಆಯ್ದ ಹಳ್ಳಿಗಳಲ್ಲಿ 1985ರಿಂದ 1990ರವರೆಗೆ ಪ್ರಯೋಗಾತ್ಮಕವಾಗಿ ಜಾರಿಗೊಳಿಸಲಾಯಿತು.

## ಮರ ಆಧಾರಿತ ಕೃಷಿ ವ್ಯವಸ್ಥೆ ಎಂದರೇನು?

ಟಿಬಿಎಫ್‌ಎಸ್ ಕಾರ್ಯಕ್ರಮವು ವಾಡಿ (WADI)ಎಂದೂ ಜನಪ್ರಿಯವಾಗಿದೆ. ಅಂದರೆ ಗುಜರಾತಿ ಭಾಷೆಯಲ್ಲಿ ಅಲಂಕಾರಿಕ ಗಿಡ (ಆರ್ಕಿಡ್) ಎಂದರ್ಥ. ಟಿಬಿಎಫ್‌ಎಸ್‌ನಲ್ಲಿ ಕಡಿಮೆ ಖರ್ಚಿನಲ್ಲಿ, ಪರಿಸರ ಸ್ನೇಹಿಯಾದ ತೋಟಗಾರಿಕೆ ಮರಗಳನ್ನು, ಅರಣ್ಯೀಕರಣದ ಮರಗಳನ್ನು, ಪಶು ಆಹಾರದ ಮರಗಳನ್ನು, ಪಶು ಆಹಾರದ ಹುಲ್ಲುಗಳನ್ನು ಬೆಳೆಸುವುದು, ಶಕ್ತಿವರ್ಧನೆ ಮಾಡುವ ಕಂಪೋಸ್ಟಿಂಗ್ ವಿಧಾನಗಳನ್ನು ಅಳವಡಿಸಿಕೊಳ್ಳುವುದು, ಕಾಯಿಲೆ ಮತ್ತು ಕೀಟ ನಿರ್ವಹಣೆಗೆ ನೈಸರ್ಗಿಕ ವಿಧಾನಗಳನ್ನು ಅನುಸರಿಸುವುದು, ಹೈನುಗಾರಿಕೆ, ಮಣ್ಣು ಮತ್ತು ನೀರಿನ ಸಂರಕ್ಷಣೆ – ಇವೆಲ್ಲವೂ ಸೇರಿವೆ. ಈ ವಿಧಾನದಲ್ಲಿ ರೈತರು ಎಕರೆಯೊಂದರಲ್ಲಿ 35ರಿಂದ 40 ಹಣ್ಣಿನ ಮರಗಳನ್ನು (ಮಾವು, ಹುಣಿಸೆ, ಗೇರು, ಸೀಬೆ ಇತ್ಯಾದಿ) ಮತ್ತು 8–10 ಅರಣ್ಯೀಕರಣದಲ್ಲಿ ಬಳಸುವ ಮರಗಳನ್ನು ಬೆಳೆಸುವುದಕ್ಕೆ ಉತ್ತೇಜನ ನೀಡಲಾಗುತ್ತದೆ. ಹಣ್ಣಿನ ಮರಗಳನ್ನು ಬೆಳೆ ಬೆಳೆಯುವ ಪ್ರದೇಶದಲ್ಲಿ ನೆಡಬಹುದು ಅಥವಾ ಅವುಗಳನ್ನು ಒಳಬದುಗಳು ಮತ್ತು ಗಡಿಬದುಗಳ ಗುಂಟವೂ ನೆಡಬಹುದು. ಹಣ್ಣಿನ ಮರಗಳನ್ನು ನೆಟ್ಟ 5ನೆಯ ವರ್ಷಕ್ಕೆ ಫಲ ನೀಡಲು ಆರಂಭಿಸುತ್ತವೆ. ಇದರಿಂದ ರೈತರಿಗೆ ವರಮಾನ ಸಿಗುತ್ತದೆ.

ಅರಣ್ಯೀಕರಣದ ಗಿಡಗಳನ್ನು ಹೊಲಗಳ ಬದುವಿನ ಗುಂಟವೂ ನೆಡಬಹುದಾಗಿದೆ. ಇದರಲ್ಲಿ ಅಕೇಶಿಯಾ, ಕಾಸಿಯಾ, ಗ್ಲೀರ್‌ಸೀಡಿಯಾ, ತೇಗ, ಸಿಲ್ವರ್ ಓಕ್, ಮೆಲಿಯಾ ದುಬಿಯಾ, ದಾಲ್‌ಬರ್ಗಿಯಾ ಮುಂತಾದ ನಾಟದ ಮರಗಳನ್ನು ಬೆಳೆಯಬಹುದು. ಸೆಸ್‌ಬೇನಿಯಾ, ಎರಿಥ್ರಿನಾ, ಸುಬಾಬುಲ್, ಮೊರಿಂಗ ಸಸ್ಯಗಳು ಒಳ್ಳೆಯ ಪಶು ಆಹಾರವನ್ನು ನೀಡುತ್ತವೆ; ಇದರಿಂದ ಹೈನು ಚಟುವಟಿಕೆಗಳು ಸುಸ್ಥಿರವಾಗುತ್ತವೆ. ಅರಣ್ಯೀಕರಣದ ಮರಗಳನ್ನು ನೆಟ್ಟ 4ನೆಯ ವರ್ಷಕ್ಕೆ ಬಯೋಮಾಸ್ ಮತ್ತು ಇಂಧನಕ್ಕೆ ಬೇಕಾದ ಉರುವಲನ್ನು ನೀಡುತ್ತವೆ. ಅರಣ್ಯೀಕರಣದ ಸಸ್ಯಗಳಿಂದ ಸಿಗುವ ಬಯೋಮಾಸ್‌ನ್ನು ವರ್ಮಿಕಂಪೋಸ್ಟ್ ತಯಾರಿಸಲು ಬಳಸಬಹುದು. ಇದು ರಾಸಾಯನಿಕ ಗೊಬ್ಬರಗಳ ಬಳಕೆಯನ್ನು ತಗ್ಗಿಸುತ್ತದೆ; ತನ್ಮೂಲಕ ನೈಟ್ರಸ್ ಆಕ್ಸೈಡ್ ಅನಿಲವು ವಾತಾವರಣಕ್ಕೆ ಸೇರುವ ಪ್ರಮಾಣವು ಕಡಿಮೆಯಾಗುತ್ತದೆ. 5ನೆಯ ವರ್ಷದ ಹೊತ್ತಿಗೆ ಸಾಕಷ್ಟು ಉರುವಲೂ ಸಿಗುತ್ತದೆ. ಇದು ಕುಟುಂಬದ ಉರುವಲು ಬೇಡಿಕೆಯನ್ನು ಪೂರೈಸುತ್ತದೆ; ಇದರಿಂದಾಗಿ ಕಾಡುಗಳ ಮೇಲಿನ ಒತ್ತಡ ಕಡಿಮೆಯಾಗುತ್ತದೆ. ಹೀಗೆ ಐದಾರು ವರ್ಷಗಳಲ್ಲಿ ಟಿಬಿಎಫ್‌ಎಸ್ ಅಡಿಯಲ್ಲಿರುವ ಒಣ ಭೂಪ್ರದೇಶಗಳು ವೈವಿಧ್ಯಮಯ ಹೊಲಗಳಾಗಿ ಆಹಾರ ಭದ್ರತೆಯನ್ನು ಹೆಚ್ಚಿಸುತ್ತವೆ; ಪಶು ಆಹಾರದ ಲಭ್ಯತೆಯನ್ನು ಹೆಚ್ಚಿಸುತ್ತವೆ; ವಾಯುಗುಣ ವೈಪರೀತ್ಯದ ಪರಿಣಾಮಗಳಿಂದ ರಕ್ಷಿಸಿಕೊಳ್ಳುವ ಸಹಿಷ್ಣುತೆಯನ್ನು ಬೆಳೆಸುತ್ತವೆ.

ಟಿಬಿಎಫ್‌ಎಸ್ ಅಡಿಯಲ್ಲಿರುವ ಅಥವಾ ಸಾವಯವ ಕೃಷಿಯಲ್ಲಿರುವ ಭೂಮಿಯು ಹೆಕ್ಟೇರಿಗೆ ಪ್ರತಿ ವರ್ಷವೂ 733–3000 ಕಿಲೋಗ್ರಾಂಗಳಷ್ಟು ಹೆಚ್ಚು ಇಂಗಾಲವನ್ನು ಹೀರಿಕೊಳ್ಳುತ್ತವೆ. ಹೀಗೆ ಇಂಗಾಲವನ್ನು ಹಿಡಿದಿಟ್ಟುಕೊಳ್ಳುವುದು ಹೆಚ್ಚುವುದು ವಾಯುಗುಣ ವೈಪರೀತ್ಯವನ್ನು ತಗ್ಗಿಸಲು ತುಂಬಾ ಮುಖ್ಯವಾಗಿದೆ. ಇಂಗಾಲದ ಹೀರಿಕೆಯ ಪ್ರಮಾಣವನ್ನು ಹೆಚ್ಚಿಸುವ ಮೂಲಕ ಟಿಬಿಎಫ್‌ಎಸ್ ಆಧುನಿಕ ಕೃಷಿಗಿಂತ ಕಡಿಮೆ ಪ್ರಮಾಣದಲ್ಲಿ ವಾಯುಗುಣದ ಮೇಲೆ ಪರಿಣಾಮ ಬೀರುತ್ತದೆ.

## ಹೊಸ ಪರಿಹಾರವೊಂದರ ಏಕೀಕರಣ

ಕೃಷಿ ವ್ಯವಸ್ಥೆಯಲ್ಲಿ ಮರಗಳನ್ನು ಜೋಡಿಸಿರುವುದರಿಂದ ಬೆಳೆನಷ್ಟದ ವಿರುದ್ಧ ವಿಮೆ ಪಡೆದಂತಾಗುತ್ತದೆ; ಪರಿಸರವನ್ನೂ ರಕ್ಷಿಸಬಹುದು. ಹೀಗೆ ಮರ ಆಧಾರಿತ ಕೃಷಿ ವ್ಯವಸ್ಥೆಯು (ಟಿಬಿಎಫ್‌ಎಸ್) ಕೃಷಿ

## ಟಿಬಿಎಫ್‌ಎಸ್‌ನಲ್ಲಿ  ಭವಿಷ್ಯ ಕಂಡುಕೊಂಡ ಇರ್ಫಾನ್

ಹಾವೇರಿ ತಾಲೂಕಿನ ಹಿರೇಬೆಂಡಿಗೇರಿಯಲ್ಲಿ ಇರ್ಫಾನ್ ಕಮಡೊಳ್ಳಿಯವರು ತಮ್ಮ ಕುಟುಂಬದೊಂದಿಗೆ ವಾಸಿಸಿದ್ದಾರೆ. ಅವರ ಬಳಿ ಮಳೆಯಾಧಾರಿತ ಮೂರು ಎಕರೆ ಹೊಲ ಇದೆ. ಈ ಮೊದಲು ಇರ್ಫಾನ್ ಗೋವಾದಲ್ಲಿ ನಿರ್ಮಾಣ ಕಾಮಗಾರಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಎಂಟು ವರ್ಷಗಳ ಹಿಂದೆ ಅವರು ತಮ್ಮ ಹಳ್ಳಿಗೆ ಹಿಂದಿರುಗಿದರು; ಕೃಷಿಗೆ ಬೇಕಾದ ನೀರಿನ ಬಗ್ಗೆ ಯಾವುದೇ ಖಾತ್ರಿ ಇಲ್ಲದೆ ಅವರು ತಮ್ಮ ಜೀವನೋಪಾಯದ ಬಗ್ಗೆಯೇ ಗೊಂದಲ ಹೊಂದಿದ್ದರು. ಅವರು ತಮ್ಮ ಮೂರು ಎಕರೆಯಲ್ಲಿ ವರ್ಷಕ್ಕೆ ಒಟ್ಟು 30 ಸಾವಿರ ರೂ. ಆದಾಯ ಬರುವ ಜೋಳ, ಸಾಮೆ ಮತ್ತು ನೆಲಗಡಲೆಯನ್ನು ಬೆಳೆಯುತ್ತಿದ್ದರು. ಅವರಲ್ಲಿ ಒಂದು ಜೊತೆ ಎತ್ತು, ಎರಡು ದನಗಳಿವೆ. ಬೆಳೆ ಬೆಳೆದ ನಂತರ ಸಿಗುವ ಮೇವನ್ನೇ ಅವರು ರಾಸುಗಳಿಗೆ ನೀಡುತ್ತಿದ್ದರು. ಅಲ್ಲದೆ ಅದನ್ನೇ ಅವರು ಗೊಬ್ಬರವಾಗಿಯೂ ಬಳಸುತ್ತಿದ್ದರು.  ವರ್ಷದ ಆರು ತಿಂಗಳುಗಳ ಕಾಲ ತನ್ನ ಹೊಲದಲ್ಲಿ ಕೃಷಿ ಮಾಡುತ್ತಿದ್ದ ಅವರು ಇನ್ನುಳಿದ ಆರು ತಿಂಗಳುಗಳ ಕಾಲ ಕಾರ್ಮಿಕನಾಗಿ ದುಡಿಯುತ್ತಿದ್ದರು.

ಮೊದಲು ಅವರು ಟಿಬಿಎಫ್‌ನ್ನು ಅಳವಡಿಸಿಕೊಳ್ಳಲು ಹಿಂಜರಿದಿದ್ದರು; 'ನಮಗೆ ಮರಗಳನ್ನು ವರ್ಷಪೂರ್ತಿ ನೋಡಿಕೊಳ್ಳಲು ಆಗುವುದಿಲ್ಲ; ಏಕೆಂಧರೆ ನಾವು ವರ್ಷದ ಆರು ತಿಂಗಳುಗಳ ಕಾಲ ಮಾತ್ರವೇ ನಮ್ಮ ಹೊಲಕ್ಕೆ ಬರುತ್ತಿರುತ್ತೇವೆ; ಉಳಿದ ಆರು ತಿಂಗಳು ನಾವು ಬೇರೆ ಕಡೆಗೆ ಕೂಲಿ ಮಾಡಲು ಹೋಗುತ್ತೇವೆ' ಎಂಬುದು ಅವರು ನೀಡಿದ ಕಾರಣವಾಗಿತ್ತು. ಆದರೂ 2010ರಲ್ಲಿ ಅವರು ಈ ಯೋಜನೆಯನ್ನು ಸೇರಲು ನಿರ್ಧರಿಸಿದರು. ಯೋಜನೆಯು ಅವರಿಗೆ ಮಾವಿನ ಕಸಿ ಸಸಿಗಳು, ಅರಣ್ಯ ಮರಗಳ ಬೀಜಗಳು ಮತ್ತು ಮೇವಿನ ಸಸ್ಯಗಳ ಬೀಜಗಳನ್ನು ನೀಡಿ ಸಹಕರಿಸಿತು. ಇವುಗಳನ್ನೆಲ್ಲ ನೆಟ್ಟ ಇರ್ಫಾನ್ ತುಂಬಾ ಕಾಳಜಿಯಿಂದ ಅವುಗಳನ್ನು ನೋಡಿಕೊಂಡರು. 120 ಮಾವಿನ ಗಿಡಗಳನ್ನು ನೋಡಿಕೊಳ್ಳಲು ಅವರು ಸಿಬ್ಬಂದಿ ನೀಡಿದ ತಾಂತ್ರಿಕ ಸಲಹೆ ಸೂಚನೆಗಳನ್ನೆಲ್ಲ ಅನುಕರಿಸಿದರು. ಹಳ್ಳಿಯಿಂದ ಮಡಕೆಗಳಲ್ಲಿ ನೀರನ್ನು ತಂದು ಹಾಕಿದ ಅವರು ಬೇಸಗೆಯಲ್ಲಿ ರಕ್ಷಣಾ ನೀರಾವರಿ ಮಾಡಲೆಂದು ನೀರಿನ ಟ್ಯಾಂಕರ್‌ಗಳನ್ನೂ ಬಾಡಿಗೆಗೆ ಪಡೆದರು.

ಅವರ ಕಠಿಣ ಪರಿಶ್ರಮವು ಫಲ ನೀಡಲಾರಂಭಿಸಿತು. 2014ರಲ್ಲಿ ಅವರು ಮಾವಿನ ಹಣ್ಣುಗಳನ್ನು ಮಾರುಕಟ್ಟೆಯಲ್ಲಿ ಮಾರಿದರು. ಹಣ್ಣುಗಳ ಮಾರಾಟದಿಂದ ಅವರು ಈಗ ವರ್ಷಕ್ಕೆ ಸರಾಸರಿ 30 ಸಾವಿರ ರೂ. ಗಳಿಸುತ್ತಿದ್ದಾರೆ. ಅಲ್ಲದೆ ಅವರು ಅಂತರಬೆಳೆಯಾಗಿ ಮೆಕ್ಕೆಜೋಳ ಮತ್ತು ತರಕಾರಿಗಳನ್ನೂ ಬೆಳೆಯುತ್ತಿದ್ದಾರೆ.

ಈಗ ಟಿಬಿಎಫ್ ಅವರ ಭವಿಷ್ಯದ ನಿರೀಕ್ಷೆಗಳನ್ನು ಚಿಗುರಿಸಿದೆ. ಅವರೀಗ ಪ್ರತಿದಿನವೂ ಹೊಲಕ್ಕೆ ಹೋಗುತ್ತಾರೆ. 'ಅಲ್ಲಿ ಪ್ರತಿದಿನವೂ ಮಾಡಬೇಕಾದ ಏನಾದರೂ ಒಂದು ಕೆಲಸ ಇದ್ದೇ ಇರುತ್ತದೆ. ನನ್ನ ಹೊಲದಲ್ಲಿ ಹಸಿರನ್ನು ನೋಡಲು ನನಗೆ ತುಂಬಾ ಖುಷಿಯಾಗುತ್ತದೆ' ಎಂದು ಅವರು ಹೇಳುತ್ತಾರೆ.

ಸಮುದಾಯದ ಮತ್ತು ಪರಿಸರದ ಹಿತದೃಷ್ಟಿಯಿಂದ ಒಳ್ಳೆಯದು. ಹೀಗಿದ್ದೂ ರೈತರು ಇದನ್ನು ಹೀಗೆ ಪರಿಗಣಿಸುವುದಿಲ್ಲ. ಏಕೆಂದರೆ ಅವರು ಮರಗಳು ಫಸಲು ಬರುವವರೆಗೆ ಕಾಯಬೇಕಾಗುತ್ತದೆ. ಆದ್ದರಿಂದ ಇಲ್ಲಿ ಟಿಬಿಎಫ್‌ಎಸ್‌ನ್ನು ಅನುಸರಿಸಬೇಕೆಂದು ರೈತರನ್ನು ಉತ್ತೇಜಿಸಲು, ಇದನ್ನು ಜಾರಿಗೊಳಿಸುವ ಸಂಸ್ಥೆಯ ಪಾತ್ರವು ತುಂಬಾ ಮುಖ್ಯವಾಗುತ್ತದೆ.

ಗ್ರಾಮಸಭೆಗಳು, ವೈಯಕ್ತಿಕ ಸಂಪರ್ಕಗಳು, ಕೇಂದ್ರ ಗಮನ ಗುಂಪು ಚರ್ಚೆಗಳು, – ಇವೆಲ್ಲವನ್ನೂ ಕಾರ್ಯಕ್ರಮದ ಆರ್ಥಿಕ ಮತ್ತು ಪಾರಿಸರಿಕ ಲಾಭಗಳನ್ನು ವಿವರಿಸುವುದಕ್ಕಾಗಿ ನಡೆಸಲಾಯಿತು.

**ಮರ, ಮೇವು ಮತ್ತು ಬೆಳೆಗಳನ್ನು ಹೊಂದಿರುವ ಟಿಬಿಎಫ್‌ಎಸ್**



ಚಿತ್ರ: ಲೇಖಕರು

ಟಿಬಿಎಫ್‌ಸಿಯು ಯಶಸ್ವಿಯಾದ ಹಳ್ಳಿಗಳಿಗೆ ನೀಡಿದ ಭೇಟಿ ಮತ್ತು ರೈತರೊಂದಿಗೆ ನಡೆದ ವಿಚಾರ ವಿನಿಮಯಗಳು ಕಲಿಕೆ ಮತ್ತು ಮಾಹಿತಿ ಹಂಚಿಕೆಗೆ ಉಪಯುಕ್ತವಾದವು. ಗುಂಡಿಗಳನ್ನು ತೆಗೆಯುವುದು, ತುಂಬುವುದು, ನಾಟಿಯ ವಿಧಾನ, ನೆಲದ ಸಿದ್ಧತೆ, ನೆರಳು, ಹಸಿಗೊಬ್ಬರ ಮಿಶ್ರಣ ಮುಂತಾದ ಮಾಹಿತಿಗಳನ್ನೂ ಪ್ರಾತ್ಯಕ್ಷಿಕೆಯ ಮೂಲಕ ನೀಡಲಾಯಿತು. ಸಕಾಲಿಕ ನಾಟಿಗಾಗಿ ಗುಣಮಟ್ಟದ ಸಸ್ಯಗಳನ್ನು ನೀಡಲಾಯಿತು. ನಾಟಿ ಮಾಡಿದ ಪ್ರದೇಶಗಳನ್ನು ವಿದ್ಯುತ್ ಸಂಪರ್ಕಿತ ಬೇಲಿಯ ಮೂಲಕ ರಕ್ಷಿಸಬೇಕಾಗುತ್ತದೆ; ಇಲ್ಲವಾದರೆ ದನಗಳು ಇವನ್ನು ತಿಂದುಬಿಡುವ ಸಾಧ್ಯತೆ ಇದೆ. ಗ್ರಾಮ ಮಟ್ಟದ ತರಬೇತಿಗಳು ಮತ್ತು ನಿರಂತರ ಅನುವರ್ತನಗಳಿಂದಾಗಿ ಕಾಯಿಲೆ ಮತ್ತು ಕೀಟ ನಿರ್ವಹಣೆಯೂ ಖಾತ್ರಿಯಾಯಿತು. ಇದಲ್ಲದೆ ಇತರೆ ಸವಲತ್ತುಗಳನ್ನು ಪಡೆಯಲು ಸರ್ಕಾರದ ಇಲಾಖೆಗಳೊಂದಿಗೆ ಮಾರುಕಟ್ಟೆ ಜಾಲದ ಸೌಲಭ್ಯವನ್ನೂ ಒದಗಿಸಲಾಯಿತು.

### ಪರಿಣಾಮಗಳು

ಟಿಬಿಎಫ್‌ಎಸ್ ಹೊಲಗಳಲ್ಲಿ ಗಮನಾರ್ಹವಾಗಿ ಮಣ್ಣಿನ ಉತ್ಪಾದಕತೆಯು ಹೆಚ್ಚಿದೆ. ಈ ಯೋಜನೆಯನ್ನು ಜಾರಿಗೊಳಿಸಿದ ಹಳ್ಳಿಗಳಲ್ಲಿ ಮರಗಳ ಪ್ರಮಾಣ ಹೆಚ್ಚಾಗಿ ಸ್ಥಳೀಯ ವಾಯುಗುಣವು ಸುಧಾರಿಸಿದೆ. ಟಿಬಿಎಫ್‌ಎಸ್ ಅಲ್ಲದ ಪ್ರದೇಶಗಳಿಗೆ ಹೋಲಿಸಿದರೆ ಇಲ್ಲಿ ಯಾರಾದರೂ ತಣ್ಣೆಯ ಹವೆಯನ್ನು ಅನುಭವಿಸಬಹುದಾಗಿದೆ. ಟಿಬಿಎಫ್‌ಎಸ್‌ನಿಂಧಾಗಿ ಮಣ್ಣು ಮತ್ತು ನೀರಿನ ಸಂರಕ್ಷಣೆ, ಸಾವಯವ ಕೃಷಿ, ಜಾನುವಾರುಗಳು, ಕುಟುಂಬದ ವರಮಾನ ಎಲ್ಲವೂ ಗಮನಾರ್ಹವಾಗಿ ಹೆಚ್ಚಿವೆ. ಸರಾಸರಿಯಾಗಿ ರೈತರು

ಈ ಹೊಲಗಳಿಂದ 5ನೆಯ ವರ್ಷಕ್ಕೆ 10ರಿಂದ 12 ಸಾವಿರ ರೂ. ವರಮಾನ ಗಳಿಸುತ್ತಾರೆ. ಇದು ಅವರು ಅದೇ ನೆಲದಲ್ಲಿ ಬೆಳೆಯುವ ಇತರೆ ಅಂತರ ಬೆಳೆಗಳನ್ನು ಹೊರತುಪಡಿಸಿದ ಆದಾಯವಾಗಿದೆ.

ರಾಸು ಆಹಾರ ಮರಗಳು, ಮಟ್ಟಿಗಳು ಮತ್ತು ಹುಲ್ಲುಗಳನ್ನೂ ಬದುಗಳ ಮೇಲೆ ಮತ್ತು ಬಂಜರು ಪ್ರದೇಶದಲ್ಲಿ ಬೆಳೆಯಲಾಗಿದೆ; ಇದರಿಂದ ರಾಸು ಆಹಾರದ ಲಭ್ಯತೆ ಹೆಚ್ಚಿದೆ. ಹೀಗಾಗಿ ರೈತರು ಮೇಕೆ ಅಥವಾ ಕುರಿಗಳಂತಹ ಪ್ರಾಣಿಗಳನ್ನು, ಹೆಚ್ಚುವರಿಯಾಗಿ ಇನ್ನೊಂದೆರಡು ಹೈನು ಪ್ರಾಣಿಗಳನ್ನು ಸಾಕುವುದಕ್ಕೆ ಉತ್ತೇಜನ ಸಿಕ್ಕಿದೆ.

ಟಿಬಿಎಫ್‌ಎಸ್ ಅಳವಡಿಸಿಕೊಂಡ ಕುಟುಂಬಗಳು ತಮ್ಮದೇ ಹೊಲದಿಂದ ಉರುವಲು ಸೌದೆಯನ್ನು ಪಡೆಯಲೂ ಸಾಧ್ಯವಾಗಿದೆ. ಇದರಿಂದಾಗಿ ಮಹಿಳೆಯರು ಉರುವಲಿಗಾಗಿ ದೂರದ ಕಾಡುಗಳಿಗೆ ಮತ್ತು ಹಳ್ಳಿಗಳ ಗೋಮಾಳಗಳಿಗೆ ನಡೆದುಹೋಗಿ ಸಂಗ್ರಹ ಮಾಡಿಕೊಂಡು ಬರಬೇಕಾಗಿದ್ದ ಶ್ರಮ ಕಡಿಮೆಯಾಗಿದೆ. ಇದಲ್ಲದೆ ಕಾಡುಗಳ ಮೇಲಿನ ಒತ್ತಡವೂ ಕಡಿಮೆಯಾಗಿದೆ.

### ಭಾಗೀದಾರಿಯಾಗಿ ರೈತ: ವಿಸ್ತೃತಗೊಂಡ ಪಾತ್ರ

ಬೈಫ್ ಸಂಸ್ಥೆಯು ಟಿಬಿಎಫ್‌ಎಸ್‌ನ್ನು ಡ್ಯಾನಿಡ, ಕಪಾರ್ಟ್, ಭಾರತ ಸರ್ಕಾರ, ಕರ್ನಾಟಕ ಸರ್ಕಾರ, ನಬಾರ್ಡ್, ದೇಶಪಾಂಡೆ ಪ್ರತಿಷ್ಠಾನ ಮುಂತಾದ ಸಂಸ್ಥೆಗಳ ಹಣಕಾಸು ನೆರವಿನೊಂದಿಗೆ ಜಾರಿ ಮಾಡಿದೆ. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಹಣಕಾಸು ನೆರವು ನೀಡಿದ ಸಂಸ್ಥೆಗಳು, ಜಾರಿಗೊಳಿಸುವ ಸಂಸ್ಥೆಗಳು ಮತ್ತು ರೈತರು – ಎಲ್ಲರೂ ಪರಸ್ಪರ ತಾಳಮೇಳದಿಂದ ಕಾರ್ಯ ನಿರ್ವಹಿಸಿದ್ದಾರೆ. ಮುಂದಿನ ಹಲವು ವರ್ಷಗಳಲ್ಲಿ ಈ ಕಾರ್ಯಕ್ರಮಗಳ ಯೋಜನೆ ಮತ್ತು ಜಾರಿಯಲ್ಲಿ ರೈತರ ಪಾತ್ರವು ಹೆಚ್ಚಾಗುವುದನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ.

ಪ್ರಯೋಗ ಕಾಲದಲ್ಲಿ ರೈತರನ್ನು ಬೆಂಬಲಿಸಿ ಪ್ರತಿಯೊಂದೂ ಹೊಸ ವಿಚಾರವನ್ನು ಅಳವಡಿಸಲು ಪರಿಹಾರವನ್ನೂ ನೀಡಬೇಕಿತ್ತು. ಗುಂಡಿ ತೆಗೆಯುವುದು, ನಾಟಿ ಮಾಡುವುದು, ನಂತರದ ನಿಗಾ, ಕೃಷಿ ಬದುಗಳ ನಿರ್ಮಾಣ, ರಕ್ಷಣೆ, ಬೇಲಿ ಮತ್ತು ಬೇಸಗೆಯಲ್ಲಿ ನೀರು ಹಾಯಿಸುವುದು – ಎಲ್ಲದಕ್ಕೂ ರೈತರಿಗೆ ಹಲವು ಬಗೆಯ ನಗದು ಉತ್ತೇಜನವನ್ನು ನೀಡಲಾಗುತ್ತಿತ್ತು. ಇದಲ್ಲದೆ ಕ್ಷೇತ್ರಭೇಟಿ, ತರಬೇತಿ, ಕ್ಷೇತ್ರ ಪ್ರಾತ್ಯಕ್ಷಿಕೆಗಳ ಮುಂತಾದ ಖರ್ಚುಗಳೂ ಇರುತ್ತಿದ್ದವು. ಪ್ರತಿಯೊಂದೂ ಎಕರೆಗೆ ಈ ಪ್ರಯೋಗಕಾಲದಲ್ಲಿ 30 ಸಾವಿರ ರೂ. ಗಳಿಗೂ ಹೆಚ್ಚಿನ ಖರ್ಚಾಯಿತು.

ಕಾರ್ಯಕ್ರಮದಲ್ಲಿ ರೈತರ ಭಾಗಿತ್ವವನ್ನು ಹೆಚ್ಚಿಸಲು ಬೈಫ್ ಸಂಸ್ಥೆಯು ಕಾಲಕಾಲಕ್ಕೆ ತನ್ನ ಕಾರ್ಯತಂತ್ರವನ್ನು ಬದಲಿಸಿಕೊಳ್ಳಬೇಕಾಯಿತು. 1995ರ ನಂತರ ನಗದು ಉತ್ತೇಜಕಗಳನ್ನು ಕನಿಷ್ಠ ಪ್ರಮಾಣಕ್ಕೆ ಇಳಿಸಲಾಯಿತು. 1995ರ ನಂತರ ಹಣ ಮತ್ತು ವಸ್ತುಗಳ ರೂಪದಲ್ಲಿ ಖರ್ಚುಗಳನ್ನು ಹಂಚಿಕೊಳ್ಳುವ ಪರಿಕಲ್ಪನೆಯನ್ನು ಜಾರಿಗೊಳಿಸಲಾಯಿತು. ಕ್ರಮೇಣವಾಗಿ ರೈತರು ಗುಂಡಿ ತೋಡುವುದು, ನಾಟಿ, ನಾಟಿನಂತರದ ನಿಗಾ ಇತ್ಯಾದಿಗಳಲ್ಲಿ ಕೊಡುಗೆ ನೀಡಲು ಆರಂಭಿಸಿದರು. ಕೆಲವು ಕಾರ್ಯಕ್ರಮಗಳಲ್ಲಿ ಅವರು ದುಡಿಮೆಯ ರೂಪದಲ್ಲಿ ಎಕರೆಗೆ 500 ರೂ.ಗಳಷ್ಟು ಕೊಡುಗೆಯನ್ನೂ ನೀಡಿದರು. ಈಗ ಟಿಬಿಎಫ್‌ಎಸ್ ಅಳವಡಿಕೆಯ ಖರ್ಚು ಎಕರೆಗೆ 7 ಸಾವಿರ ರೂ.ಗಳಿಗೆ ಇಳಿದಿದೆ. ಇದರಲ್ಲಿ ಮಾನವ ಸಂಪನ್ಮೂಲ ಮತ್ತು ಆಡಳಿತ ವೆಚ್ಚಗಳೂ ಸೇರಿವೆ.

ಟಿಬಿಎಫ್‌ಎಸ್‌ನ್ನು ಸಬ್ಸಿಡಿ ದರದಲ್ಲಿ ಉತ್ತಮ ಗುಣಮಟ್ಟದ ನಾಟಿ ವಸ್ತುಗಳ ಒಳಸುರಿ, ಉತ್ತೇಜನ ಮತ್ತು ಕ್ಷೇತ್ರ ಭೇಟಿಯ ಮೂಲಕ ಇನ್ನಷ್ಟು ವಿಸ್ತರಿಸಬಹುದು ಎಂಬ ಹಂತಕ್ಕೆ ನಾವು ಬಂದಿದ್ದೇವೆ. ಈ ಪ್ರಯೋಗವನ್ನು ಯಶಸ್ವಿಯಾಗಿ ಮಾಡಿ ತೋರಿಸಲಾಗಿದೆ ಮತ್ತು ಕರ್ನಾಟಕದಾದ್ಯಂತ ರೈತರು ಇದನ್ನು ಅಂಗೀಕರಿಸಿದ್ದಾರೆ. ನಬಾರ್ಡ್ ಸಂಸ್ಥೆಯು ಈ ಕಾರ್ಯಕ್ರಮವನ್ನು ಗುಡ್ಡಗಾಡು ಅಭಿವೃದ್ಧಿ ನಿಧಿಯ ಮೂಲಕ ದೇಶದಾದ್ಯಂತ ಜಾರಿ ಮಾಡಲಿದೆ. ಭಾರತ ಸರ್ಕಾರದ ಗುಡ್ಡಗಾಡು ವ್ಯವಹಾರಗಳ ಇಲಾಖೆಯು ಬೈಫ್ ಸಂಸ್ಥೆಯನ್ನು ಭಾರತದ ಗುಡ್ಡಗಾಡು ಪ್ರದೇಶಗಳಲ್ಲಿ ವಾಡಿ ಹೆಸರಿನ ಇದೇ ಯೋಜನೆಯನ್ನು ಜಾರಿಗೊಳಿಸಲು ಸಂಪನ್ಮೂಲ ಸಂಘಟನೆಯಾಗಿ ಮಾನ್ಯತೆ ನೀಡಿದೆ.

### ಮಿಶ್ರಬೆಳೆಯ ಲಾಭಗಳು

**ಹಾವೇರಿ ಜಿಲ್ಲೆಯ ಸವಣೂರು ತಾಲೂಕಿನ ಮಾದಾಪುರ ಗ್ರಾಮದ ಶ್ರೀ ಗಂಗಯ್ಯ ವಿಭೂತಿಮಠರವರು ಅಲ್ಲಿನ ಅತಿಸಣ್ಣ ರೈತರು. ಅವರಿಗೆ ಒಂದೂವರೆ ಎಕರೆ ಒಣ ಹೊಲವಿದೆ. 2008ಕ್ಕಿಂತ ಮುನ್ನ ಅವರು ಅಲ್ಲಿ ಜೋಳ, ಮೆಕ್ಕೆಜೋಳ, ಮೆಣಸಿನಕಾಯಿ, ಬೇಳೆಕಾಳುಗಳು ಇಂತಹ ವಾರ್ಷಿಕ ಬೆಳೆಗಳನ್ನು ಮಾತ್ರ ಮಳೆಯ ಆಧಾರದಲ್ಲಿ ಬೆಳೆಯುತ್ತಿದ್ದರು. 2008ರಲ್ಲಿ ಅವರು ಮಿಶ್ರಬೆಳೆ ಪದ್ಧತಿಯನ್ನು ಅನುಸರಿಸಿ ಕೃಷಿಯಲ್ಲಿ ವೈವಿಧ್ಯ ತಂದರು; ಸಪೋಟ, ಮಾವು, ಲಿಂಬೆ, ಸೀಬೆ ಮತ್ತು ಕರಿಬೇವನ್ನು ಅವರು ಬೆಳೆಯಲು ಆರಂಭಿಸಿದರು. ಅವರಿಗೆ ದೇಶಪಾಂಡೆ ಪ್ರತಿಷ್ಠಾನದ ಬೆಂಬಲವಿರುವ ಸಮೃದ್ಧಿ ಯೋಜನೆಯ ಮೂಲಕ ನಾಟಿ ಮಾಡುವ ಸಸಿಗಳು ದೊರೆತವು. ಬೇಸಗೆಯಲ್ಲಿ ಅವರು ಸಂರಕ್ಷಣಾ ನೀರಾವರಿಯನ್ನು ಕೈಗೊಂಡು ಮರಗಳ ರಕ್ಷಣೆ ಮಾಡಿದರು. ಈಗ ಅವರ ಹೊಲವು 41 ಸಪೋಟ, 70 ಕರಿಬೇವಿನ ಮರಗಳು, 8 ಮಾವಿನ ಮರಗಳು ಮತ್ತು ಆರು ಲಿಂಬೆ ಗಿಡಗಳನ್ನು ಹೊಂದಿದೆ. ಅವರೀಗ ಸೀಮೆ ಸೇವಂತಿಗೆ, ಕನಕಾಂಬರದಂತಹ ಹೂವುಗಳನ್ನೂ ಬೆಳೆಯುತ್ತಿದ್ದಾರೆ; ಅಲ್ಲದೆ ಮೇವಿನ ಬೆಳೆಗಳು ಮತ್ತು ವಾರ್ಷಿಕ ಬೆಳೆಗಳನ್ನೂ ಅಂತರಬೆಳೆಯಾಗಿ ಬೆಳೆಯುತ್ತಿದ್ದಾರೆ. 2013ರಿಂದ ತೋಟಗಾರಿಕಾ ಮರಗಳಿಂದ ವರಮಾನ ಬರಲಾರಂಭಿಸಿದೆ. 2015ರಲ್ಲಿ ಅವರು ಸಪೋಟ ಮತ್ತು ಸೀಬೆ ಹಣ್ಣುಗಳನ್ನು ಮಾರಿ 10 ಸಾವಿರ ರೂ.ಗಳಿಸಿದರು. ಅವರು ಹೂವುಗಳನ್ನು ಮಾರಿ ಪ್ರತಿ ತಿಂಗಳೂ 20 ಸಾವಿರ ರೂ. ಗಳಿಸುತ್ತಿದ್ದಾರೆ. ಅವರು ಮಾದಾಪುರದಿಂದ ಹತ್ತು ಕಿಮೀ ದೂರದಲ್ಲಿರುವ ಸವಣೂರಿನಲ್ಲಿ ಹೂವುಗಳನ್ನು ಮಾರುತ್ತಾರೆ. ಎಲ್ಲಾ ಸೇರಿ ಅವರು ವರ್ಷಕ್ಕೆ 1.80 ಲಕ್ಷ ರೂ. ಗಳಿಸುತ್ತಾರೆ. ಇದು ಮನೆ ಬಳಕೆಗಾಗಿ ಬೆಳೆದ ವಾರ್ಷಿಕ ಬೆಳೆಗಳ ಉತ್ಪನ್ನದಿಂದ ಹೊರತಾದ ವರಮಾನ.'ಮಿಶ್ರ ಬೆಳೆಯ ವ್ಯವಸ್ಥೆಯು ನಾನು ಒಳ್ಳೆಯ ವರಮಾನವನ್ನು ಪಡೆಯಲು ಸಹಕಾರಿಯಾಗಿದೆ. ನನ್ನ ಹೆಣ್ಣುಮಕ್ಕಳ ಮದುವೆಯ ಖರ್ಚುಗಳನ್ನು ಪೂರೈಸಿದೆ'ಎಂದು ಗಂಗಯ್ಯ ನಗುತ್ತ ತಿಳಿಸುತ್ತಾರೆ.**

■ **M N Kulkarni and S M Hiremath**
BAIF
Kusumanagar,
Dharwad, Karnataka.

**ಆಂಗ್ಲ ಮೂಲ**
ಲೀಸಾ ಇಂಡಿಯಾ, ಸಂಪುಟ 18, ಸಂಚಿಕೆ 4, ಡಿಸೆಂಬರ್ 2016




**ಪಿಜಿಎಸ್ ಸಭೆ ನಡೆಯುತ್ತಿರುವುದು**

# ಸಹಭಾಗಿತ್ವದ ಖಾತರಿ ಪದ್ಧತಿಗಳು

## ಜ್ಞಾನ ವಿನಿಮಯಕ್ಕೆ ಒಂದು ವೇದಿಕೆ

**ಕೃಷಿ ವಿಧಾನಗಳನ್ನು ಅಭಿವೃದ್ಧಿಗೊಳಿಸುವಲ್ಲಿ ಸ್ಥಳೀಯ ರೈತರ ಜ್ಞಾನದ ಮೌಲ್ಯ ದಿನದಿಂದ ದಿನಕ್ಕೆ ಹೆಚ್ಚು ಮನ್ನಣೆ ಪಡೆಯುತ್ತಿದೆ. ಸಹಭಾಗಿತ್ವದ ಖಾತರಿ ಪದ್ಧತಿಗಳು ಅಪಾರ ಸಾಮರ್ಥ್ಯ ಹೊಂದಿದ್ದು, ರೈತರಲ್ಲಿ ಪರಸ್ಪರ ಜ್ಞಾನ ವಿನಿಮಯಕ್ಕೆ ಪ್ರೋತ್ಸಾಹ ನೀಡಿ, ಆ ಮೂಲಕ ರೈತರ ಜ್ಞಾನ ವಿಕಾಸಕ್ಕೆ ಕೊಡುಗೆ ನೀಡುತ್ತಿದೆ.**

■ **ಕಾರ್ನೇಲಿಯಾ ಕಿಶ್ನರ್**

ಸ್ಥಳೀಯ ಮತ್ತು ಸಾಂಪ್ರದಾಯಿಕ ಜ್ಞಾನಕ್ಕೆ ದೀರ್ಘಕಾಲದಿಂದ, ಕನಿಷ್ಠ ಪಕ್ಷ ಪಾಶ್ಚಿಮಾತ್ಯ ಪ್ರಪಂಚದಲ್ಲಿ ಯುಕ್ತ ಸ್ಥಾನ ದೊರೆತಿರಲಿಲ್ಲ. 1990ರವರೆಗೆ ಕೇವಲ ಸಂಶೋಧಕರು ಪ್ರಕಟಿಸಿದ ಜ್ಞಾನವನ್ನು ಮಾತ್ರ ಪರಿಗಣಿಸಲಾಗುತ್ತಿತ್ತು. ಈ ರೀತಿಯ ಜ್ಞಾನವನ್ನು ಕೇವಲ ಮೇಲಿನಿಂದ ಕೆಳಕ್ಕೆ, ಏಕಮುಖವಾಗಿ, ಸಂಶೋಧಕ ಶಿಕ್ಷಕರಿಂದ ಕಲಿಯುವ ರೈತರಿಗೆ ವರ್ಗಾಯಿಸಲಾಗುತ್ತಿತ್ತು.

ಇಂದು ಸ್ಥಳೀಯ ಮತ್ತು ಸಾಂಪ್ರದಾಯಿಕ ಜ್ಞಾನಕ್ಕೆ ವಿಶಾಲ ಮನ್ನಣೆ ದೊರೆತಿದೆ. ರೈತರನ್ನು ಈಗ ವಿನಮ್ರದಿಂದ ಮಾಹಿತಿಯನ್ನು ಸ್ವೀಕಾರ ಮಾಡುವವರಂತೆ ನೋಡಲಾಗುತ್ತಿಲ್ಲ. ಬದಲಾಗಿ ಅವರ ಪ್ರಾಯೋಗಿಕ ಅನುಭವ ಮತ್ತು ಜ್ಞಾನವನ್ನು ಮೌಲ್ಯಯುತ ಮಾಹಿತಿಯ ಮೂಲ ಮತ್ತು ಅನ್ವೇಷಣೆಯ ಸಾಧನವನ್ನಾಗಿ ಪರಿಗಣಿಸಲಾಗುತ್ತಿದೆ. ಕೇವಲ ಸಾವಯವ ವಿಭಾಗದಲ್ಲಿ ಮಾತ್ರವಲ್ಲ, ಒಟ್ಟಾರೆ ಕೃಷಿ ಕ್ಷೇತ್ರದಲ್ಲಿ ವಿವಿಧ ಭಾಗೀದಾರರು ಸಹಭಾಗಿತ್ವದ ವಿಧಾನದಲ್ಲಿ ಒಳಗೊಳ್ಳುವ ಪ್ರಕ್ರಿಯೆಗಳಾದ ರೈತ–ರೈತರ ನಡುವಿನ ಸಂವಾದ, ಮಾಹಿತಿ ಪ್ರಸಾರಕ್ಕೆ ಹೆಚ್ಚು ಉಪಯುಕ್ತವಾಗಿದೆ ಎಂದು ಗುರುತಿಸಲಾಗಿದೆ. ರೈತ–ರೈತರ ನಡುವಿನ ಸಂವಾದ ಕಡಿಮೆ ಉದ್ಯಮೀಕರಣಗೊಂಡಿರುವ, ರೈತರು ಕಡಿಮೆ ಸವಲತ್ತುಗಳನ್ನು ಹೊಂದಿರುವ ಸನ್ನಿವೇಶಗಳಲ್ಲಿ ವಿಶೇಷವಾಗಿ ಪ್ರಯೋಜನಕರವಾಗಿದೆ.

ಸಾವಯವ ಕೃಷಿ ಜ್ಞಾನ ಭಂಡಾರವಾಗಿದ್ದು, ಬಡತನ, ಹವಾಮಾನ ಬದಲಾವಣೆ ಅಥವಾ ಜೈವಿಕ ವೈವಿಧ್ಯ ನಷ್ಟ ಮುಂತಾದ ಹಲವಾರು ಸವಾಲುಗಳಿಗೆ ಪರಿಹಾರ ನೀಡುತ್ತದೆ. ಸತತ ಕಲಿಕೆ ಮತ್ತು ಜ್ಞಾನದ ಪ್ರಸಾರ ಹೊಸತನ್ನು ಅನುಷ್ಠಾನಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಮತ್ತು ಹೊಸ ಸವಾಲು ಮತ್ತು ಸಂದರ್ಭಗಳನ್ನು ಎದುರಿಸಲು ಶಕ್ತವಾಗಿದೆ. ಇಂದು ಸಾವಯವ ಕೃಷಿ, ಸ್ಥಳೀಯ ಮತ್ತು ವೈಜ್ಞಾನಿಕ ಜ್ಞಾನವನ್ನು ಬಳಸಿಕೊಳ್ಳುತ್ತಿದ್ದು,

ಅದಕ್ಕೆ ವೈವಿಧ್ಯಮಯ ಜ್ಞಾನ ಪದ್ಧತಿಗಳ ಅವಶ್ಯಕತೆ ಇದೆ. ಸುಸ್ಥಿರ ಕೃಷಿ ಮತ್ತು ಪರಿಸರ ನಿರ್ವಹಣೆಯನ್ನು ಸೂಕ್ತವಾಗಿ ಮಾಡಲು, ರೈತರು ಅವರ ಸಹಭಾಗಿಗಳ ನಡುವೆ ಜ್ಞಾನವನ್ನು ವಿನಿಮಯ ಮಾಡಿಕೊಳ್ಳುವ ಪರಿಣಾಮಕಾರಿ ವಿಧಾನಗಳನ್ನು ಗುರುತಿಸಬೇಕಾಗಿದೆ.

## ಪಿಜಿಎಸ್ ಜ್ಞಾನ ವಿನಿಮಯದ ವೇದಿಕೆ

ಜ್ಞಾನ ವಿನಿಮಯಕ್ಕೆ ಅನುಕೂಲ ಕಲ್ಪಿಸಿಕೊಡುವುದು ಒಂದು ಸವಾಲಿನ ಕೆಲಸ. ಇದನ್ನು ಸಾಧ್ಯವಾಗಿಸಲು ಅನೇಕ ಪೂರ್ವಾಪೇಕ್ಷೆಗಳನ್ನು ಹೊಂದಿರಬೇಕಾಗುತ್ತದೆ. ಅದರಲ್ಲಿ ವಿಶ್ವಾಸ ಎನ್ನುವುದು ಅತ್ಯಂತ ಮೂಲಭೂತ ಅಂಶ. ರೈತರು ಪರಸ್ಪರ ವಿಶ್ವಾಸ ಇಟ್ಟಲ್ಲಿ ಮಾತ್ರ ತಮ್ಮ ಅನುಭವ ಮತ್ತು ವಿಚಾರಗಳನ್ನು ಹಂಚಿಕೊಳ್ಳಬಲ್ಲರು. ಮುಖ್ಯವಾಗಿ, ಸೇರಲು ಮತ್ತು ತಮಗೆ ಗೊತ್ತಿರುವುದನ್ನು ಹಂಚಿಕೊಳ್ಳಲು ಸಾಧನಗಳು ಮತ್ತು ಅವಕಾಶಗಳ ಲಭ್ಯತೆ. ಜ್ಞಾನವನ್ನು ಅಳವಡಿಸಿಕೊಳ್ಳಬೇಕಾದಲ್ಲಿ, ರೈತರು ವಿವಿಧ ಮನೋಭಾವ, ಸಾಮರ್ಥ್ಯ ಮತ್ತು ಅವಶ್ಯಕತೆಗಳನ್ನು ಹೊಂದಿರುತ್ತಾರೆ ಎನ್ನುವುದು ಗೊತ್ತಿರಬೇಕಾದ ಮಹತ್ವದ ಅಂಶ. ಜ್ಞಾನ ಹಂಚಿಕೊಳ್ಳಲು ಮತ್ತು ಪ್ರಸಾರ ಮಾಡುವ ವಿಧಾನ ಸಂದರ್ಭಕ್ಕೆ ಅನುಕೂಲವಾಗಿದ್ದು ಮತ್ತು ರೈತರ ಅವಶ್ಯಕತೆಗಳನ್ನು ಪೂರೈಸುವಂತಿರಬೇಕು.

ಸಹಭಾಗಿತ್ವದ ಖಾತರಿ ಪದ್ಧತಿಗಳ (ಪಿಜಿಎಸ್) ವ್ಯಾಖ್ಯಾನವೇನೆಂದರೆ, ಉನ್ನತ ಮಟ್ಟದ ಸಹಯೋಗಗಳ ಮೇಲೆ ನಿರ್ಮಾಣಗೊಂಡ, ಅದರಲ್ಲಿ ಒಳಗೊಂಡ ವ್ಯಕ್ತಿಗಳ ನಡುವೆ ಮಾಹಿತಿ ವಿನಿಮಯದಿಂದ ಕೂಡಿದ ಪದ್ಧತಿಗಳು. ಜ್ಞಾನ ವಿನಿಮಯದ ಸೂಕ್ತ ವಾತಾವರಣ ನಿರ್ಮಿಸಲು ಕೊಡುಗೆ ನೀಡಬಲ್ಲ ಪೂರಕ ಅಂಶಗಳನ್ನು ಅದು ಒಳಗೊಂಡಿರುತ್ತದೆ. ಪಾಲುದಾರರು ಪರಸ್ಪರ ಸ್ಪರ್ಧಾಳೆಂದು ಭಾವಿಸುವ ಬದಲು, ಪರಸ್ಪರ ನೆರವು ನೀಡುವವರೆನ್ನುವ ಮನೋಧರ್ಮ ಕಲ್ಪಿಸುವ ಪಿಜಿಎಸ್‌ನ  ಮೂಲಾಂಶಗಳು ಪರಸ್ಪರ ವಿಶ್ವಾಸ, ಪರಸ್ಪರ ಸಮಾನ ಮಟ್ಟ, ದೃಷ್ಟಿಕೋನಗಳ ಹಂಚಿಕೆ ಮತ್ತು ಪಾರದರ್ಶಕತೆ. ಉನ್ನತ ಮಟ್ಟದ ಸಂವಾದ, ಜ್ಞಾನ ಹಂಚಿಕೆ ಮತ್ತು ನಿರಂತರ ಕಲಿಯುವ ಗುಣ ಇವು ಪಿಜಿಎಸ್‌ನ ಗುಣಗಳು.

ಪಿಜಿಎಸ್ ಮೂಲಾಂಶಗಳು ಮತ್ತು ಗುಣಗಳು ಎಂದು ವಿವರಿಸಿರುವ ಆದರ್ಶಗಳು ನಿಜಕ್ಕೂ ವಾಸ್ತವದಲ್ಲಿ ಮೂಡಿಬಂದಿದೆಯೇ ಎನ್ನುವುದು ಈ ವರದಿಯ ಹಿಂದಿನ ಮುಖ್ಯ ಪ್ರಶ್ನೆ. ಪಿಜಿಎಸ್‌ನಿಂದ ರೈತರ ನಡುವೆ ಜ್ಞಾನ ವಿನಿಮಯ ಹೆಚ್ಚಾಗಿದೆಯೇ? ವಿವಿಧ ಪಿಜಿಎಸ್ ಉಪಕ್ರಮಗಳಲ್ಲಿ  ಯಾವ ಸಾಧನಗಳನ್ನು ಬಳಸಲಾಯಿತು ಮತ್ತು  ಯಾವ ರೀತಿಯ ಜ್ಞಾನ ಹಂಚಿಕೆಯಾಯಿತು ಮತ್ತು ಅದರಲ್ಲಿ ಒಳಗೊಂಡಿದ್ದ ರೈತರ ಮೇಲೆ ಯಾವ ರೀತಿ ಪರಿಣಾಮ ಬೀರಿತು ಎನ್ನುವುದನ್ನು ಈ ವರದಿಯು ವಿಮರ್ಶಿಸುತ್ತದೆ.

ಈ ವರದಿ, ಐಎಫ್‌ಒಎಎಂ– ಪಿಜಿಎಸ್ ಎಲ್ಲ ಖಂಡಗಳಲ್ಲಿ ಉಪಕ್ರಮಗೊಳಿಸಿದ ಆರ್ಗಾನಿಕ್ಸ್ ಇಂಟರ್‌ನ್ಯಾಶನಲ್ ಸಂಗ್ರಹಿಸಿರುವ ಗುಣಾತ್ಮಕ ಮತ್ತು ಪರಿಮಾಣಾತ್ಮಕ ಮಾಹಿತಿಗಳನ್ನು ಆಧರಿಸಿದೆ. ಪರಿಮಾಣಾತ್ಮಕ ಮಾಹಿತಿಯನ್ನು ವಾರ್ಷಿಕ ಜಾಗತಿಕ ಪಿಜಿಎಸ್ ಸಮೀಕ್ಷೆ– 2013ರ ಸಂದರ್ಭದಲ್ಲಿ, ಐಎಫ್‌ಒಎಎಂ– ಆರ್ಗಾನಿಕ್ಸ್ ಇಂಟರ್‌ನ್ಯಾಶನಲ್‌ಗೆ ಮಾಹಿತಿಯಿರುವ ಎಲ್ಲ ಉಪಕ್ರಮಗಳಿಂದ ಸಂಗ್ರಹಿಸಲಾಗಿದೆ.

ಐಎಫ್‌ಒಎಎಂ– ಆರ್ಗಾನಿಕ್ಸ್ ಇಂಟರ್‌ನ್ಯಾಶನಲ್ ನಡುವೆ 2011ರಿಂದ 2014ರವರೆಗೆ ನಡೆಸಿದ ಸಾಂಪ್ರದಾಯಿಕ ಸಾಮಾಜಿಕ ಪ್ರಕ್ರಿಯೆಗಳು ಮತ್ತು ಸಹಭಾಗಿತ್ವದ ಖಾತರಿ ಪದ್ಧತಿಗಳು (ಪಿಜಿಎಸ್) ನಡುವಿನ ಜಾಗತಿಕ ತುಲನಾತ್ಮಕ ಅನ್ಯೋನ್ಯ ಪರಿಣಾಮ ಹಾಗೂ ಏಳು ದೇಶಗಳ ಒಂಬತ್ತು ಪಿಜಿಎಸ್ ಉಪಕ್ರಮಗಳ ಪೈಕಿ ನಾಲ್ಕು ದೇಶಗಳ ಗುಣಾತ್ಮಕ ಮಾಹಿತಿಯನ್ನು ಪಡೆದುಕೊಳ್ಳಲಾಯಿತು. ಇದಕ್ಕೆ ಪೂರಕವಾಗಿ, ಐಎಫ್‌ಒಎಎಂ– ಆರ್ಗಾನಿಕ್ಸ್ ಇಂಟರ್‌ನ್ಯಾಶನಲ್ ಅನುಷ್ಠಾನಗೊಳಿಸಿರುವ ಪಿಜಿಎಸ್ ಯೋಜನೆಗಳ ಸಾಹಿತ್ಯ ಒಳಗೊಂಡ ಪರಾಮರ್ಶೆ ಸಹ ಕೂಡಿತ್ತು.

## ನಿರ್ದಿಷ್ಟವಾಗಿ ಸ್ಥಳೀಯ ಜ್ಞಾನ ಪ್ರಸ್ತುತ

ಪಿಜಿಎಸ್  ಉಪಕ್ರಮಗಳು ವಿವಿಧ ಗಾತ್ರ ಮತ್ತು ಸನ್ನಿವೇಶಗಳಲ್ಲಿ ಅಸ್ತಿತ್ವದಲ್ಲಿವೆ. ಸಣ್ಣ ಪ್ರದೇಶದಲ್ಲಿ ಕಾರ್ಯಾಚರಿಸುವ 12 ರೈತರಿಗಿಂತ ಕಡಿಮೆ ಸಂಖ್ಯೆಯ ರೈತರಿಂದ ಹಿಡಿದು ರಾಷ್ಟ್ರೀಯ ಮಟ್ಟದಲ್ಲಿ ಸಾವಿರಾರು ರೈತರನ್ನು ಒಳಗೊಂಡಂತೆ ವಿವಿಧ ಗಾತ್ರದಲ್ಲಿ ಪಿಜಿಎಸ್ ಕಾರ್ಯತತ್ಪರವಾಗಿದೆ. ಸಾವಯವ ನಿಬಂಧನೆಗಳು ಮತ್ತು ಒಂದು ದೇಶದಲ್ಲಿ ಸಾವಯವ ಕೃಷಿಗೆ ನೆರವು ನೀಡುವ ಯೋಜನೆ ಹಾಗೂ ಸಾವಯವ ವಿಭಾಗದ ಅಭಿವೃದ್ಧಿಯ ಹಂತ ಪಿಜಿಎಸ್ ಅನುಷ್ಠಾನದ ಮೇಲೆ ಪ್ರಭಾವ ಬೀರಿದೆ.  ಪಿಜಿಎಸ್‌ನ ರೈತರು ಸ್ವತಃ ತಾವೇ ನಿರ್ವಹಿಸಬಹುದು, ಸ್ಥಳೀಯ ಸ್ವಯಂಸೇವಾ ಸಂಘಟನೆ ಅಥವಾ ವಿಶಾಲ ವ್ಯಾಪ್ತಿಯಲ್ಲಿನ ಪಾಲುದಾರರು ನಿಭಾಯಿಸಬಹುದು. ಪಿಜಿಎಸ್ ಉಪಕ್ರಮಗಳಲ್ಲಿ ಜ್ಞಾನ ಹಂಚಿಕೆಗಾಗಿ ಅಳವಡಿಸಿಕೊಂಡಿರುವ ಪ್ರಕ್ರಿಯೆಗಳಿಗೂ ಈ ವೈವಿಧ್ಯತೆ ಅನ್ವಯವಾಗುತ್ತದೆ.

ವಾರ್ಷಿಕ ಸಮೀಕ್ಷೆ ಅಥವಾ ಪಿಜಿಎಸ್‌ನ ತುಲನಾತ್ಮಕ ಅಧ್ಯಯನದಲ್ಲಿ ಭಾಗವಹಿಸಿದ ಎಲ್ಲ ಪಿಜಿಎಸ್ ಉಪಕ್ರಮಗಳು, ಪಿಜಿಎಸ್ ಅನುಷ್ಠಾನಗೊಂಡ ಬಳಿಕ ರೈತರ ನಡುವೆ ಜ್ಞಾನ ವಿನಿಮಯ ತೀವ್ರಗೊಂಡಿರುವುದಾಗಿ ತಿಳಿಸಿದವು. ಕೆಲವು ಪಿಜಿಎಸ್ ಉಪಕ್ರಮಗಳು, ಪಿಜಿಎಸ್‌ನಿಂದಾದ ಮುಖ್ಯ ಲಾಭವಾಗಿ ಸಹಕಾರಿ ಕಲಿಕೆ ಮತ್ತು ಜ್ಞಾನ ವಿನಿಮಯವನ್ನು ಉತ್ತೇಜಿಸಿತು (ಉದಾ: ಆಸ್ಟ್ರೇಲಿಯಾದ ಸಫೈರ್ ಕೋಸ್ಟ್ ಪಿಜಿಎಸ್, ಬ್ರೆಜಿಲ್‌ನ ಸಿಸ್ಟೆಮ ಎಬಿಐಒ). ಅತ್ಯಂತ ಹಳೆಯ ಪಿಜಿಎಸ್ ಎನ್ನಲಾಗುವ, 1964ರಲ್ಲಿ ಸ್ಥಾಪನೆಗೊಂಡ ಫ್ರಾನ್ಸ್‌ನ ನೇಚರ್ ಅಂಡ್ ಪ್ರೋಗ್ರೆಸ್ ನಿಂದ ನಾವು ತಿಳಿದಿದ್ದೇನೆಂದರೆ, ಜ್ಞಾನ ಹಂಚಿಕೆಯಲ್ಲಿ ಪಾಲ್ಗೊಳ್ಳಬೇಕೆಂಬ ಹಂಬಲಿಕೆಯೇ ರೈತರು ಪಿಜಿಎಸ್‌ಗೆ ಸೇರಲು ಪ್ರೇರಣೆ. ನೇಚರ್ ಅಂಡ್ ಪ್ರೋಗ್ರೆಸ್ ಬಗ್ಗೆ ಮುಖ್ಯವಾಗಿ ಉಲ್ಲೇಖಿಸಬೇಕಾದ್ದೇನೆಂದರೆ, ಸಂಘಟನೆಯ ರಚನೆಯ ಮುಖ್ಯವಾದ ಉದ್ದೇಶವೇನೆಂದರೆ, ಉತ್ಪಾದನಾ ತಂತ್ರಗಳ ಜ್ಞಾನ ವಿನಿಮಯಕ್ಕೆ ವೇದಿಕೆ ಕಲ್ಪಿಸುವುದು.

ಸಾಂಪ್ರದಾಯಿಕ ಹಾಗೂ ಹೊಸ ಆನ್ವೇಷಣೆಯ ಮಾಹಿತಿಗಳನ್ನೊಳಗೊಂಡಂತೆ, ಸಾವಯವ ಕೃಷಿ ತಂತ್ರಗಳು ಮತ್ತು ವಿಧಾನಗಳು ಜೊತೆಗೆ ಪ್ರೇರಣೆ, ಪಿಜಿಎಸ್‌ನಲ್ಲಿ ರೈತರ ನಡುವೆ ಅತಿ ಹೆಚ್ಚು ವಿನಿಮಯಗೊಂಡ ಹೆಚ್ಚು ಸಾಮಾನ್ಯ ರೀತಿಯ ಜ್ಞಾನ. ಮಣ್ಣಿನ ಗುಣ, ಹವಾಮಾನ ಪರಿಸ್ಥಿತಿ ಮತ್ತು ಮಾರುಕಟ್ಟೆ ಕುರಿತ ಸ್ಥಳೀಯ ರೈತರ ಅನುಭವ, ತಿಳುವಳಿಕೆ ಹೆಚ್ಚು ಪ್ರಸ್ತುತವಾಗಿದ್ದು, ರೈತರಿಗೆ ಉಪಯುಕ್ತವಾಗಿತ್ತು. ಕೆಲವು ಪಿಜಿಎಸ್ ಉಪಕ್ರಮಗಳು (ಉದಾ: ಭಾರತದ ಕೀಸ್ಟೋನ್, ಫಿಲಿಪ್ಪೈನ್ಸ್‌ನ ಎಂಎಎಸ್ಐಪಿಎಜಿ) ಸಾಂಪ್ರದಾಯಿಕ ಪದ್ಧತಿಗಳನ್ನು ಉಳಿಸಿಕೊಳ್ಳುವಲ್ಲಿ ಹಾಗೂ ಮರೆತುಹೋದ ಕೆಲವು ಪದ್ಧತಿಗಳನ್ನು ಮತ್ತೆ ಚಾಲ್ತಿಗೆ ತರುವಲ್ಲಿ ಪಿಜಿಎಸ್ ಮುಖ್ಯ ಸಾಧನವಾಯಿತು ಎಂದು ಉಲ್ಲೇಖಿಸಿವೆ.

ರೈತರು ತಾಂತ್ರಿಕ ಕೃಷಿ ಜ್ಞಾನವನ್ನು ಹಂಚಿಕೊಳ್ಳುವುದರ ಜೊತೆಗೆ,

**ಪಿಜಿಎಸ್ ಜಾಲದಲ್ಲಿ ರೈತರು ಹಲವು ವಿಷಯಗಳ ಕುರಿತು ಜೊತೆಯಾಗಿ ಕೆಲಸ ಮಾಡುತ್ತ ಮತ್ತು ಕಲಿಯುತ್ತ ತಮ್ಮ ಜ್ಞಾನವನ್ನು ಹೆಚ್ಚಿಸಿಕೊಂಡರು.**

ಅನೇಕ ಪಿಜಿಎಸ್‌ಗಳಲ್ಲಿ ಜಂಟಿ ಚಟುವಟಿಕೆಯಾಗಿದ್ದರೂ, ಇತರ ಕಾರ್ಯೋಪಯೋಗಿ ವಿಷಯಗಳಾದ ಮಾರ್ಕೆಟಿಂಗ್ ಮತ್ತು ಆಹಾರ ಸಂಸ್ಕರಣೆ ಬಗೆಗಿನ ತಮ್ಮ ಕೌಶಲ್ಯ ಹಾಗೂ ತಿಳುವಳಿಕೆಯನ್ನೂ ಹಂಚಿಕೊಂಡರು. ಸಹಭಾಗಿ ಕಾರ್ಯಾಗಾರದ ಮೂಲಕ ಅಥವಾ ವಿವಿಧ ವಿಷಯಗಳ ಕುರಿತಾಗಿ ಒಟ್ಟಾಗಿ ಕೆಲಸ ಮಾಡುವ ಮೂಲಕ, ಪಿಜಿಎಸ್ ಜಾಲದಲ್ಲಿನ ರೈತರು ಒಟ್ಟಾಗಿ ಕಲಿತು, ಜ್ಞಾನವನ್ನು ಹೆಚ್ಚಿಸಿಕೊಂಡರು. ಇತರ ಕಾರ್ಯೋಪಯೋಗಿ ಮಾಹಿತಿಗಳಾದ ಕೃಷಿ ಪೂರಕಗಳನ್ನು ಅಥವಾ ಔಷಧಗಳನ್ನು ಪೂರೈಸುವವರ ಕುರಿತಾಗಿಯೂ ಅವರು ತಮ್ಮ ತಿಳಿವಳಿಕೆಯನ್ನು ಸಮಾನವಾಗಿ ಹಂಚಿಕೊಂಡರು. ಪಿಜಿಎಸ್ ಮೂಲಕ ಪದೇ ಪದೇ ವಿನಿಮಯಗೊಂಡ ಮತ್ತೊಂದು ರೀತಿಯ ಜ್ಞಾನ, ಉಳಿದ ಜ್ಞಾನಗಳಿಗೆ ಅಗತ್ಯವಾದುದನ್ನು ಪೂರೈಸಬಲ್ಲದಾದ, ವಿಶೇಷ ಅಥವಾ ತಜ್ಞತೆಯ ಜ್ಞಾನ. ಅದನ್ನು ಅನುಭವೀ ರೈತರು ಅಥವಾ ಅನೇಕ ಪಿಜಿಎಸ್‌ಗಳಲ್ಲಿ ಪಾಲ್ಗೊಳ್ಳುವ ತಜ್ಞರ (ಉದಾ: ವಿಜ್ಞಾನಿಗಳು, ತಂತ್ರಜ್ಞಾನಿಗಳು) ಮೂಲಕ ಒದಗಿಸಲಾಯಿತು.

## ಜ್ಞಾನ ವಿನಿಮಯಕ್ಕೆ ಮೌಲ್ಯಯುತ ಸಾಧನ, ಸಹಭಾಗಿಗಳಿಂದ ಪರಾಮರ್ಶೆ

ಜ್ಞಾನ ವಿನಿಮಯಕ್ಕೆ ರೈತರಿಗೆ ಅವಕಾಶಗಳನ್ನು ಸೃಷ್ಟಿ ಮಾಡುವುದು ಪಿಜಿಎಸ್‌ನ ಮೂಲ ಶಕ್ತಿ. ಮಾಹಿತಿ ಸಂಗ್ರಹ ಮಾಡಿದ ಉಪಕ್ರಮದ ಉದ್ದಕ್ಕೂ, ಉತ್ತಮ ರೈತರಿಂದ ನಿಯಮಿತ ತೋಟದ ವೀಕ್ಷಣೆ, ಪಿಜಿಎಸ್ ಮೂಲಕ ಜ್ಞಾನ ವಿನಿಮಯದ ಮೌಲ್ಯಯುತ ಸಾಧನವಾಗಿತ್ತು ಎಂದು ಉಲ್ಲೇಖಿಸಲಾಗಿದೆ. ಸಹಭಾಗಿಗಳಿಂದ ನಡೆದ ಪರಾಮರ್ಶೆಗಳ ಸಂದರ್ಭದಲ್ಲಿ, ರೈತರು ಸಮಸ್ಯೆ ಮತ್ತು ಸವಾಲುಗಳ ಬಗ್ಗೆ ಚರ್ಚಿಸಿ, ಪರಸ್ಪರ ಪರಿಹಾರ ನೀಡಿದ್ದಾರೆ. ಭೇಟಿ ಸಂದರ್ಭದಲ್ಲಿ ತೋಟದಲ್ಲಿದ್ದು, ಆನ್ವಯಿಕ ತಂತ್ರಗಳ ಬಗ್ಗೆ ಗಮನ ಹರಿಸಿ, ಉತ್ತಮ ಪದ್ಧತಿಗಳು ಹಾಗೂ ದೋಷಗಳು, ಅವುಗಳನ್ನು ಗುಣಪಡಿಸುವ ಸಾಧ್ಯತೆಗಳ ಕುರಿತು ಗಮನಹರಿಸಲಾಯಿತು. ವೀಕ್ಷಣೆಯ ಸಂದರ್ಭದಲ್ಲಿ ಉತ್ತಮವಾಗಿ ತಯಾರಾದ ಸಹಭಾಗಿಗಳಿಂದ ತಯಾರಿಸಲ್ಪಟ್ಟ ಮೌಲ್ಯಮಾಪನ ಪತ್ರಿಕೆ ಆ ರೀತಿಯ ಚರ್ಚೆಗಳನ್ನು ಪ್ರೋತ್ಸಾಹಿಸಲು ಉಪಯುಕ್ತ ಎಂದು ಉಲ್ಲೇಖಿಸಲಾಗಿದೆ.

ಅನೇಕ ಪಿಜಿಎಸ್‌ಗಳಲ್ಲಿ ರೈತರು ಕೇವಲ ತೋಟಗಳಿಗೆ ಭೇಟಿ ನೀಡುವುದು ಮಾತ್ರವಲ್ಲ, ಸ್ಥಳೀಯ ಗುಂಪುಗಳೊಂದಿಗೆ ನಿಯಮಿತವಾಗಿ ಸಭೆಯನ್ನೂ ನಡೆಸುತ್ತಾರೆ. ಇವು ಪಿಜಿಎಸ್ ಮಂಡಳಿಗಳಿಗೆ ಪ್ರತಿನಿಧಿಗಳ ಚುನಾವಣೆ, ಮಾರ್ಕೆಟಿಂಗ್ ವಿಧಾನ ಅಭಿವೃದ್ಧಿ ಅಥವಾ ಅನೌಪಚಾರಿಕವಾಗಿ ಬೆರೆತು ಜ್ಞಾನದ ಹಂಚಿಕೆ ಇಂತಹ ನಿಶ್ಚಿತ ಚಟುವಟಿಕೆಗಳಿಗಾಗಿ ನಡೆಯುತ್ತವೆ. ಪಿಜಿಎಸ್ ಉಪಕ್ರಮಗಳಲ್ಲಿ ವಾಡಿಕೆಗಳು ಭಿನ್ನಭಿನ್ನವಾಗಿರುತ್ತವೆ. ಕೆಲವು ಪಿಜಿಎಸ್ ಗುಂಪುಗಳಲ್ಲಿ ರೈತರು ಇಂತಹ ಸಭೆಗಳಿಗೆ ಬರುವುದೇ ಇಲ್ಲ, ಕೆಲವುದರಲ್ಲಿ ಸಣ್ಣ ಗುಂಪುಗಳಲ್ಲಿ ರೈತರ ನಿಯಮಿತ ಸಭೆಗಳು ನಡೆಯುತ್ತವೆ. ಕನಿಷ್ಠವೆಂದರೆ, ಬಹಳಷ್ಟು ಉಪಕ್ರಮಗಳಲ್ಲಿ ವಾರ್ಷಿಕ ಸಭೆಗಳನ್ನು ರೂಪಿಸಿರಲಾಗುತ್ತದೆ. ರೈತರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಜಂಟಿ ಮಾರ್ಕೆಟಿಂಗ್ ವಿಧಾನಗಳನ್ನು ಅನುಸರಿಸುವ ಕೆಲವು ಪಿಜಿಎಸ್ ಗುಂಪುಗಳಲ್ಲಿ, ಆಗಾಗ್ಗೆ ಸಂವಾದ ನಡೆಯುತ್ತಿರುತ್ತದೆ. ರೈತರು ಸಮೀಪದಲ್ಲೇ ವಾಸ ಮಾಡುವ ಇನ್ನು ಕೆಲವು ಪಿಜಿಎಸ್‌ಗಳಲ್ಲಿ, ನಿಯತವಾಗಿ ದಿನನಿತ್ಯದ ತೋಟದ ಕೆಲಸಗಳಲ್ಲಿ ಒಬ್ಬರಿಗೊಬ್ಬರು ಸಹಾಯ ಮಾಡಲೂಬಹುದು. ಉದಾಹರಣೆಗೆ ತಾಂಜಾನಿಯಾದ ಮೇನ್ಡೆಲೋ ಕೃಷಿಕರ ಗುಂಪಿನಲ್ಲಿ, ಒಂದೇ ಹಳ್ಳಿಯಲ್ಲಿ ವಾಸಿಸುವ ರೈತರು ಮನೆ ನಿರ್ಮಾಣ ಮಾಡಿಕೊಳ್ಳುವಲ್ಲಿ ಒಬ್ಬರಿಗೊಬ್ಬರು ನೆರವು ನೀಡುತ್ತಾರೆ.

**1995ರಲ್ಲಿ ಕೀಸ್ಟೋನ್ ಫೌಂಡೇಶನ್, ನೀಲಗಿರಿ ಬಯೋಸ್ಫಿಯರ್ ರಿಸರ್ವ್ ನ ಸ್ಥಳೀಯ ಸಮುದಾಯದೊಂದಿಗೆ ಕೆಲಸ ಮಾಡಲು ಪ್ರಾರಂಭಿಸಿತು. ಸ್ಥಳೀಯ ಸಮುದಾಯಗಳ ಜೀವನೋಪಾಯ ಹೆಚ್ಚಿಸುವ ಮತ್ತು ಪರಿಸರ ಸಂರಕ್ಷಣೆ ಉದ್ದೇಶವಿರಿಸಿಕೊಂಡ ಇದರ ಪ್ರಾಥಮಿಕ ಕಾಳಜಿಗಳಲ್ಲಿ ಒಂದೆಂದರೆ, ಸಾವಯವ ಉತ್ಪನ್ನಗಳಿಗೆ ಮಾರುಕಟ್ಟೆ ಬೆಂಬಲ ಒದಗಿಸುವುದು.**

**ಸ್ಥಳೀಯ ಸಮುದಾಯಗಳಲ್ಲಿ ಜಂಟಿ ಮಾರ್ಕೆಟಿಂಗ್, ಬೀಜ ನಿರ್ವಹಣೆ ಮತ್ತು ಸಂರಕ್ಷಣೆ, ಮಾಹಿತಿ ಹಂಚಿಕೊಳ್ಳುವುದು, ಸಾಂಪ್ರದಾಯಿಕ ಜ್ಞಾನದ ತಂತ್ರಗಳು ಮತ್ತು ಅವುಗಳ ಬಳಕೆ ಹಾಗೂ ಸಣ್ಣ ಉಳಿತಾಯದಂತಹ ವಿವಿಧ ಸಾಮಾಜಿಕ ಪ್ರಕ್ರಿಯೆಗಳನ್ನು ಸ್ಥಾಪಿಸಲಾಯಿತು. ಗುಂಪುಗಳು ಯುವಕರು ಮತ್ತು ವೃದ್ಧರು ಇಬ್ಬರನ್ನೂ ಒಳಗೊಂಡಿದ್ದು, ಪರಸ್ಪರ ಕಲಿಕೆ ಮತ್ತು ಗೌರವಗಳಿಗೆ ಸಾಕಷ್ಟು ಅವಕಾಶ ಒದಗಿಸಿತು. ಕೃಷಿಯ ವಿವಿಧ ಅಂಶಗಳಾದ ಜಲ ಸಂರಕ್ಷಣೆ ಸೇರಿದಂತೆ ಮಣ್ಣು ಮತ್ತು ತೇವಾಂಶ ಸಂರಕ್ಷಣೆ ತಂತ್ರಗಳ ಬಗ್ಗೆ ಜ್ಞಾನ ಹಂಚಿಕೆ ಹಾಗೂ ವಿನಿಮಯಕ್ಕೆ ಪಿಜಿಎಸ್ ವೇದಿಕೆ ಕಲ್ಪಿಸಿತು.**

**ಸಮೀಕ್ಷೆಯಲ್ಲಿ ಪ್ರತಿಸ್ಪಂದಿಸಿದವರು, ಪಿಜಿಎಸ್ ಆಂತರಿಕ ಸಂವಾದವನ್ನು ಹೆಚ್ಚಿಸಿದೆ ಹಾಗೂ ಮಾರ್ಗದರ್ಶನ ಮತ್ತು ಆರ್ಥಿಕ ನೆರವಿಗೆ ಸಮಯ ಮತ್ತು ಅವಕಾಶ ಹೆಚ್ಚಿಸಿದೆ ಎಂದು ಪ್ರತಿಕ್ರಿಯಿಸಿದರು. ಕೀಸ್ಟೋನ್ ಪಿಜಿಎಸ್‌ನಲ್ಲಿ ಭಾಗವಹಿಸಿದ್ದ ಒಬ್ಬ ರೈತ, 'ಪೀಳಿಗೆಯಿಂದ ಪೀಳಿಗೆಗೆ ಸಾಂಪ್ರದಾಯಿಕ ಜ್ಞಾನ ಹರಿದುಬರಬೇಕು ಮತ್ತು ಜ್ಞಾನ ಹರಿಯುವಿಕೆಯಲ್ಲಿ ಪಿಜಿಎಸ್ ಒಂದು ಪ್ರಮುಖ ಪಾತ್ರ ವಹಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ' ಎಂದರು.**

ನಿಯಮಿತ ಗುಂಪು ಸಭೆಗಳ ಹೊರತಾಗಿ ಅನೇಕ ಪಿಜಿಎಸ್‌ಗಳು ತರಬೇತಿ ಕಾರ್ಯಾಗಾರಗಳನ್ನು ನಡೆಸಿದವು. ಹೊಸ ಸದಸ್ಯರನ್ನು ತರಬೇತು ಮಾಡುವುದರ ಜೊತೆಗೆ ಪಿಜಿಎಸ್ ಪದ್ಧತಿಗಳು ಮತ್ತು ಸಾವಯವ ವಿಧಾನಗಳ ಬಗ್ಗೆ ತಿಳಿವಳಿಕೆ ನೀಡುವ ಸಲುವಾಗಿ ಇವನ್ನು ಸಂಘಟಿಸಲಾಗಿತ್ತು. ಸಾಮಾನ್ಯ ಸಮಸ್ಯೆಗಳು ಹಾಗೂ ಸವಾಲುಗಳಿಗೆ ಪರಿಹಾರ ಕಂಡುಕೊಳ್ಳಲು ಎಲ್ಲ ರೈತರಿಗೆ ತರಬೇತಿ ನಡೆಸುವುದೂ ಸಾಮಾನ್ಯವಾಗಿತ್ತು. ಕೆಲವು ಪಿಜಿಎಸ್‌ಗಳು ರೈತರ ಕ್ಷೇತ್ರ ಶಾಲೆಗಳನ್ನೂ ಸ್ಥಾಪಿಸಿದವು (ಉದಾ: ತಾಂಜಾನಿಯಾ ಮತ್ತು ಭಾರತ). ಜ್ಞಾನ ಹಂಚಿಕೆಯನ್ನು ಉತ್ತೇಜಿಸಲು ಕೆಲವು ಉಪಕ್ರಮಗಳು ಉಲ್ಲೇಖಿಸಿದ ಇತರ ಸಾಧನಗಳೆಂದರೆ, ಆನ್‌ಲೈನ್/ಡಿಜಿಟಲ್ ವೇದಿಕೆಗಳು ಮತ್ತು ಪಿಜಿಎಸ್ ಕೈಪಿಡಿಗಳು. ಕೆಲವು ಪಿಜಿಎಸ್‌ಗಳು ಆನ್‌ಲೈನ್‌ನಲ್ಲಿ ಸಕ್ರಿಯವಾಗಿದ್ದು, ನ್ಯೂಸ್ ಲೆಟರ್ ಅಥವಾ ಆನ್‌ಲೈನ್ ವೇದಿಕೆಗಳನ್ನು ಜ್ಞಾನ ಹಂಚಿಕೆಯ ಸಾಧನಗಳನ್ನಾಗಿ ಬಳಸಿಕೊಂಡವು (ಉದಾ: ಅಮೇರಿಕದ ಸರ್ಟಿಫೈಡ್ ನ್ಯಾಚುರಲಿ ಗ್ರೋನ್ ಅಥವಾ ಆಸ್ಟ್ರೇಲಿಯಾದ ಸಫೈರ್ ಕೋಸ್ಟ್ ಪಿಜಿಎಸ್). ತೋಟಗಳು ಮತ್ತು ವೈಯಕ್ತಿಕ ಭೇಟಿಯ ಸ್ಥಳ ಹೆಚ್ಚಿರುವ ಸ್ಥಳಗಳಲ್ಲಿ ಇದು ವಿಶೇಷವಾಗಿ ಮಹತ್ವದ್ದು. ಪಿಜಿಎಸ್ ಕೈಪಿಡಿಗಳು ಮತ್ತು ಪ್ರಕ್ರಿಯೆಗಳನ್ನು ರೈತರಿಗೆ ಮಾರ್ಗದರ್ಶನ ನೀಡಲು ಮತ್ತು ಸಮರ್ಥ ಪಿಜಿಎಸ್ ಅನುಷ್ಠಾನದ ಕುರಿತು ವಿಷಯ ಹಂಚಿಕೆಯ ಸಂದರ್ಭದಲ್ಲಿ ಉಪಯುಕ್ತ ಸಾಧನ ಎಂದು ಉಲ್ಲೇಖಿಸಲಾಗಿದೆ.

## ಹೆಚ್ಚು ಉಪಯುಕ್ತ

ಸ್ಥಳೀಯ ಪಿಜಿಎಸ್ ಗಣಗಳಲ್ಲಿ ಜ್ಞಾನ ಹಂಚಿಕೆ ಸರ್ವೇಸಾಮಾನ್ಯ ಮತ್ತು ಪದೇಪದೇ ನಡೆಯುತ್ತವೆ. ಅನೇಕ ಪಿಜಿಎಸ್ ಉಪಕ್ರಮಗಳ ವರದಿ ಪ್ರಕಾರ, ಜ್ಞಾನವನ್ನು ಕೇವಲ ಗಣದೊಳಗಿನ ರೈತರೊಂದಿಗೆ ಮಾತ್ರ ಹಂಚಿಕೊಳ್ಳುತ್ತಿಲ್ಲ ಬದಲಾಗಿ ಪಿಜಿಎಸ್‌ನಲ್ಲಿ ಪಾಲ್ಗೊಳ್ಳದಿರುವ ಉಳಿದ ಸಾವಯವ ಕೃಷಿಕರು ಹಾಗೂ ಸಮೀಪದಲ್ಲೇ ಇರುವ ಸಾಂಪ್ರದಾಯಿಕ ಕೃಷಿಕರೊಂದಿಗೂ ಹಂಚಿಕೊಳ್ಳಲಾಗುತ್ತದೆ. ಆದ್ದರಿಂದ ಜ್ಞಾನ ಹೆಚ್ಚಿಸುವ ಮತ್ತು ಸಾವಯವ ಪದ್ಧತಿಗಳ ಬಗ್ಗೆ ಆ ಪ್ರದೇಶದಲ್ಲಿ ಅರಿವು ಮೂಡಿಸುವ ಮುಖ್ಯವಾದ ಕಾರ್ಯವನ್ನು ಪಿಜಿಎಸ್ ಕೈಗೆತ್ತಿಕೊಳ್ಳಬಹುದು. ಪಿಜಿಎಸ್‌ನಲ್ಲಿ ತೊಡಗಿಕೊಂಡಿರುವ ಇತರೆ ಭಾಗೀದಾರರ ಪೈಕಿ, ವಿವಿಧ ಪಾತ್ರ ವಹಿಸುವ ಮೂಲಕ ಜ್ಞಾನ ಹಂಚಿಕೆಯಲ್ಲಿ ಪಾಲ್ಗೊಳ್ಳುವವರು ಗ್ರಾಹಕರು, ಸ್ವಯಂಸೇವಾ ಸಂಘಟನೆಯ ಸಿಬ್ಬಂದಿ, ವ್ಯಾಪಾರಸ್ಥರು, ಸರ್ಕಾರಿ ಅಧಿಕಾರಿಗಳು, ವಿದ್ಯಾರ್ಥಿಗಳು ಮತ್ತು ಮಾಧ್ಯಮ ಪ್ರತಿನಿಧಿಗಳು. ಈ ವಿವಿಧ ಭಾಗೀದಾರರು ತೊಡಗಿಕೊಳ್ಳುವ ರೀತಿ ಮತ್ತು ಆವರ್ತನಗಳು ಪಿಜಿಎಸ್ ಹೇಗೆ ವ್ಯವಸ್ಥೆಗೊಳಿಸಲಾಗಿದೆ, ವೀಕ್ಷಣಾ ಭೇಟಿಯನ್ನು ನಡೆಸುವವರು ಯಾರು, ಸಭೆಗಳನ್ನು ಹೇಗೆ ನಡೆಸಲಾಗುತ್ತದೆ ಮತ್ತು ಯಾವ ಮಾರ್ಕೆಟಿಂಗ್ ವಿಧಾನವನ್ನು ಅನುಸರಿಸಲಾಗಿದೆ ಎನ್ನುವುದರ ಆಧಾರದ ಮೇಲೆ ಉಪಕ್ರಮದಿಂದ ಉಪಕ್ರಮಕ್ಕೆ ವ್ಯತ್ಯಾಸ ಕಂಡುಬರುತ್ತದೆ.

## ರೈತ ಸಶಕ್ತೀಕರಣ ಮತ್ತು ಅಭಿವೃದ್ಧಿಗೊಂಡ ಸಾವಯವ ತಂತ್ರಗಳು

ಸಾಂಪ್ರದಾಯಿಕ ಸಾಮಾಜಿಕ ಪ್ರಕ್ರಿಯೆ ಮತ್ತು ಸಹಭಾಗಿತ್ವದ ಖಾತರಿ ಪದ್ಧತಿಗಳು ಪರಸ್ಪರ ಬೆರೆಯುವ ಕುರಿತು ಜಾಗತಿಕ ತುಲನಾತ್ಮಕ ಅಧ್ಯಯನ, ರೈತರ ಸಶಕ್ತೀಕರಣ ಒಂದು ಪಿಜಿಎಸ್‌ನಲ್ಲಿ ದಾಖಲಿಸಬಹುದಾದ ಲಾಭ ಎಂದು ತೋರಿಸುತ್ತದೆ. ಈ ಸಶಕ್ತೀಕರಣ, ವೈಯಕ್ತಿಕ ಬೆಳವಣಿಗೆ, ವ್ಯಕ್ತಿಗತ ಆತ್ಮವಿಶ್ವಾಸವನ್ನು ಬಲಪಡಿಸುವುದು ಮತ್ತು ಜ್ಞಾನ ಮತ್ತು ಕೌಶಲ್ಯದಲ್ಲಿ ಹೆಚ್ಚಳ – ಇವುಗಳನ್ನು ಒಳಗೊಂಡಿದೆ. ಸಮಾನವಾದ ತರಬೇತಿ ಮತ್ತು ತಾಂತ್ರಿಕ ನೆರವು ಸಿಗುವುದರಿಂದ, ನಿರ್ದಿಷ್ಟವಾಗಿ ಮಹಿಳೆಯರಿಗೆ ಈ ಲಾಭ ಆಗಿದೆ. ರೈತರ ನಡುವೆ ಜ್ಞಾನ ಹಂಚಿಕೆ ಅವರ ಸಶಕ್ತೀಕರಣದ ಒಂದು ಮೂಲ ಅಂಶ.

ಇದಲ್ಲದೆ ರೈತರಿಂದ ರೈತರಿಗೆ ಜ್ಞಾನ ವಿನಿಮಯ ಮಾಡುತ್ತಾ, ಪಿಜಿಎಸ್ ಉಪಕ್ರಮಗಳು ಸಾವಯವ ವಿಧಾನಗಳ ಅಭಿವೃದ್ಧಿಗೆ ಅನುವು ಮಾಡಿಕೊಟ್ಟಿದೆ. ಅದೇ ಸಮಯದಲ್ಲಿ, ಸಾಂಪ್ರದಾಯಿಕ ಜ್ಞಾನ ನಿರ್ವಹಣೆ ಮತ್ತು ಪ್ರಸಾರಕ್ಕೂ ಪಿಜಿಎಸ್ ಕೊಡುಗೆ ನೀಡಿ, ಸ್ಥಳೀಯ ಲಭ್ಯವಿರುವ ಆದಾನ ಮತ್ತು ತಳಿಗಳನ್ನು ಬಳಸಿಕೊಂಡು, ಸಮುದಾಯದಲ್ಲಿ ನೈಸರ್ಗಿಕ ಸಂಪನ್ಮೂಲ ನಿರ್ವಹಣೆ ಅಭಿವೃದ್ಧಿಪಡಿಸಲು ಕೊಡುಗೆ ನೀಡಿದೆ. ಪಿಜಿಎಸ್ ಸೇರ್ಪಡೆಯಿಂದಾಗಿ ಬಹಳಷ್ಟು ಸಾವಯವ ಕೃಷಿ ಪದ್ಧತಿಗಳನ್ನು ಹೆಚ್ಚು ಅಳವಡಿಕೆ ಮಾಡಿಕೊಳ್ಳುವಲ್ಲಿ ಕೊಡುಗೆ ನೀಡಿದ್ದು, ಅದರ ಫಲಿತಾಂಶವಾಗಿ ಸಂಬಂಧಿತ ಪ್ರದೇಶ ಮತ್ತು ಸಮುದಾಯಗಳಲ್ಲಿ ನೈಸರ್ಗಿಕ ಸಂಪನ್ಮೂಲ ನಿರ್ವಹಣೆ ಸುಧಾರಿಸಿದೆ. ಸಾಂಪ್ರದಾಯಿಕ ಬೀಜಗಳ ಬಳಕೆ ಮತ್ತು ಸ್ಥಳೀಯ ತಳಿಗಳ ಪೋಷಣೆ, ಸಾವಯವ ಆದಾನ ಉತ್ಪಾದನೆ ಮತ್ತು ಬಳಕೆ, ಸಸಿ ನೆಡುವುದು ಮತ್ತು ಸುಸ್ಥಿರ ಕೃಷಿ ಅರಣ್ಯ, ವಿವಿಧ ತಳಿಗಳನ್ನು ಬೆಳೆಸುವುದನ್ನು ಅಳವಡಿಸಿಕೊಂಡು ಜೈವಿಕ ವೈವಿಧ್ಯತೆ ಹೆಚ್ಚಿಸುವುದು, ಪರೋಪಜೀವಿಗಳ ಉತ್ಪಾದನೆ, ಮಣ್ಣಿನ ಸವಕಳಿ ತಡೆಗಟ್ಟಲು ಗಡಿಯಂಚಿನುದ್ದಕ್ಕೂ ಮತ್ತು ಇಳಿಜಾರು ಪ್ರದೇಶದಲ್ಲಿ ಗಿಡಗಳನ್ನು ನೆಡುವುದು, ಜೊತೆಗೆ ಬೆಳೆ ಆವರ್ತನ ಇತ್ಯಾದಿಗಳು ಈ ಕ್ರಿಯೆಗಳಲ್ಲಿ ಸೇರಿದ್ದವು.

## ಸವಾಲುಗಳು ಮತ್ತು ಮಿತಿಗಳು

ಮೇಲಿಂದ ಕೆಳಕ್ಕೆ ವೈಜ್ಞಾನಿಕ ಜ್ಞಾನದ ಪ್ರಸಾರ, ಕೇವಲ ಉತ್ತಮ ಶಿಕ್ಷಣ ಪಡೆದ ರೈತರಿಗೆ ಮಾತ್ರ ತಲುಪುತ್ತಿದೆ ಎಂದು ಟೀಕಿಸಲಾಗುತ್ತಿದೆ. ಆದರೆ ರೈತರ ನಡುವೆ ಜ್ಞಾನ ವಿನಿಮಯಕ್ಕೆ ಅವಕಾಶ ಕಲ್ಪಿಸುವಲ್ಲಿ ಪಿಜಿಎಸ್ ಮಹತ್ವದ ಪಾತ್ರ ವಹಿಸುತ್ತದೆ. ಮತ್ತು ಕೆಲವು ಉಪಕ್ರಮಗಳು ವಿಶೇಷವಾಗಿ ಕಡಿಮೆ ಸೌಲಭ್ಯಗಳುಳ್ಳ ರೈತರನ್ನು ತಲುಪಿವೆ ಎಂದು ಸ್ಪಷ್ಟವಾಗಿ ಕಾಣಬಹುದು. ಆದಾಗ್ಯೂ, ವಿವಿಧ ಪಿಜಿಎಸ್ ಉಪಕ್ರಮಗಳಲ್ಲಿ ಮಾಹಿತಿ ತಲುಪಲು ಕೆಲವು ಮಿತಿಗಳು ಕೂಡ ಇವೆ. ಕೆಲವು ಪಿಜಿಎಸ್‌ಗಳು ತಮ್ಮ ಜಾಲದಲ್ಲಿ ಜ್ಞಾನದ ಅಸಮಾನ ಹಂಚಿಕೆಯಾಗಿದೆ ಎಂದೂ ವರದಿ ಹೇಳಿವೆ. ಉದಾಹರಣೆಗೆ, ದಕ್ಷಿಣ ಆಫ್ರಿಕಾದಲ್ಲಿ, ಅನೇಕ ಗ್ರಾಮೀಣ ಮತ್ತು ಕಡಿಮೆ ಶಿಕ್ಷಿತ ರೈತರು ತಮ್ಮ ತೋಟಗಳ ವೀಕ್ಷಣಾ ಸಂದರ್ಭದಲ್ಲಿ ಮಾತ್ರ ಪಾಲ್ಗೊಂಡಿದ್ದು, ಜ್ಞಾನ ಹಂಚಿಕೆಯ ಪ್ರಕ್ರಿಯೆಯಲ್ಲಿ ಕಡಿಮೆ ತೊಡಗಿಸಿಕೊಂಡಿದ್ದರು ಎಂದು ವರದಿಯಾಗಿದೆ. ಪಿಜಿಎಸ್‌ನ ತಲುಪುವಿಕೆಗೆ ಮಿತಿಯಿದ್ದು, ಯಾವಾಗಲೂ ಎಲ್ಲ ರೈತರನ್ನೂ ಸಮಾನವಾಗಿ ತಲುಪಿ, ಉಪಯುಕ್ತವಾಗುವುದಿಲ್ಲ ಎಂದು ಈ ಉದಾಹರಣೆ ತೋರಿಸುತ್ತದೆ.

ಜೊತೆಗೆ, ಗಮನದಲ್ಲಿರಿಸಿಕೊಳ್ಳಬೇಕಾಗಿರುವ ಅಂಶವೆಂದರೆ, ಸಂಗ್ರಹಿಸಲಾದ ಎಲ್ಲ ಮಾಹಿತಿಗಳೂ, ಕಾರ್ಯಸಿದ್ಧ ಪಿಜಿಎಸ್ ಉಪಕ್ರಮಗಳಿಂದ ಉತ್ಪತ್ತಿಯಾದವುಗಳು. ಅಂದರೆ ಯಶಸ್ವಿಯಾಗದ ಪಿಜಿಎಸ್, ಗಮನಕ್ಕೆ ಬಾರದ ಅಥವಾ ಹೆಚ್ಚು ಸೂಕ್ತವಲ್ಲದ ಪಿಜಿಎಸ್ ಮಾದರಿಗಳನ್ನು ಅಧ್ಯಯನಕ್ಕೆ ಯೋಗ್ಯವಲ್ಲ ಎಂದು ಪರಿಗಣಿಸಲಾಗಿದೆ. ಹೀಗಾಗಿ ರೈತರ ನಡುವೆ ಜ್ಞಾನ ಹಂಚಿಕೆಗೆ ಪಿಜಿಎಸ್ ಅವಕಾಶ ಕಲ್ಪಿಸುವಲ್ಲಿ ಮಿತಿಯಿದೆ. ಉದಾಹರಣೆಗೆ ರೈತರ ನಡುವೆ ಹೆಚ್ಚು ಸ್ಪರ್ಧೆ ಇರುವ ಮತ್ತು ವಿಷಯ ಹಂಚಿಕೊಳ್ಳುವ ಮನೋಭಾವ ಕಡಿಮೆ ಇರುವ ಪ್ರದೇಶಗಳಲ್ಲಿ ಇದು ಇರಬಹುದು. ಇದೇ ರೀತಿಯ ಇನ್ನೊಂದು ಸನ್ನಿವೇಶವೆಂದರೆ ಸಾಂಸ್ಕೃತಿಕ ಹಿನ್ನೆಲೆ, ಅದು ಪರಸ್ಪರ ರೈತರಲ್ಲಿ ಅಥವಾ ಭಾಗೀದಾರರ ನಡುವೆ ವಿಶ್ವಾಸ ಮೂಡಿಸಲು ಸಾಧ್ಯವಾಗದಿರುವುದು. ಅದೇನೇ ಇರಲಿ, ಈ ಅಧ್ಯಯನ ಫಲಿತಾಂಶ ನಿಚ್ಚಳ: ಪಿಜಿಎಸ್, ಜಾಗತಿಕ ಮಾದರಿ ಅಲ್ಲದೇ ಹೋದರೂ ಎಲ್ಲ ಸನ್ನಿವೇಶಗಳಲ್ಲಿ ರೈತರಿಗೆ ಉಪಯುಕ್ತ ಸಾಧನ ನೀಡಬಲ್ಲದು ಮತ್ತು ರೈತರಿಗೆ ಮತ್ತು ಇತರ ಭಾಗೀದಾರರಿಗೆ ಉಪಯುಕ್ತವೆಂದು ಪ್ರಪಂಚದ ಅನೇಕ ಭಾಗಗಳಲ್ಲಿ ತೋರಿಸಿದೆ.

## ಮೂಲ ಸಂದೇಶ ಮತ್ತು ಉಪಸಂಹಾರ

ವಿಶೇಷವಾಗಿ ಸಾವಯವ ಕ್ಷೇತ್ರದಲ್ಲಿ, ಹೊಸತನ್ನು ಅನುಷ್ಠಾನಗೊಳಿಸಲು ಮತ್ತು ಹೊಸ ಸವಾಲುಗಳನ್ನು ಎದುರಿಸಲು ರೈತರಲ್ಲಿ ಜ್ಞಾನ ಪ್ರಸಾರ ತುಂಬ ಅಗತ್ಯವಾದುದು. ಜ್ಞಾನ ಹಂಚಿಕೆ ಪರಸ್ಪರ ತಿಳಿದುಕೊಳ್ಳಲು ಮತ್ತು ಹಳೆಯ ಅನುಭವಗಳಿಂದ ಕಲಿತುಕೊಳ್ಳಲು ರೈತರಿಗೆ ಸಾಧ್ಯ ಮಾಡಿಕೊಡುತ್ತದೆ. ಹೆಚ್ಚು ಜ್ಞಾನ, ಮಾಹಿತಿ, ತರಬೇತಿ ಪಡೆದುಕೊಳ್ಳುವಲ್ಲಿ ರೈತರ ಬೇಡಿಕೆಗಳನ್ನು ಪೂರೈಸಲಾಗುತ್ತಿಲ್ಲ. ತಜ್ಞತೆ ಜ್ಞಾನ ಹಾಗೂ ಸ್ಥಳೀಯ ಮತ್ತು ಸಾಂಪ್ರದಾಯಿಕ ಜ್ಞಾನ ಎರಡಕ್ಕೂ ಇದು ಅನ್ವಯಿಸುತ್ತದೆ. ರೈತರು, ಕೃಷಿ ವಿಧಾನಗಳು, ಬೆಳವಣಿಗೆ ಪರಿಸ್ಥಿತಿಗಳು ಮತ್ತು ಸಾಂಸ್ಕೃತಿಕ ಹಿನ್ನೆಲೆಗಳು ವೈವಿಧ್ಯಮಯವಾಗಿದ್ದು, ಅದೇ ರೀತಿ ಮಾಹಿತಿಯ ಅವಶ್ಯಕತೆಗಳೂ, ಮಾಹಿತಿಯ ವಿಧಾನಗಳು, ಮಾಹಿತಿ ಹಂಚಿಕೆ ಮತ್ತು ರೈತರಲ್ಲಿ ವಿತರಣೆ ಕೂಡ ಅಷ್ಟೇ ವಿಧವಿಧವಾಗಿವೆ.

ಮೌಲ್ಯಯುತ ಕೊಡುಗೆ ನೀಡಲು ಪಿಜಿಎಸ್ ಒಂದು ಸಾಧನ. ಸ್ಥಳೀಯ ಸನ್ನಿವೇಶಗಳಿಗೆ ಸುಲಭವಾಗಿ ಹೊಂದಿಕೆಯಾಗಿ, ಮಾಹಿತಿ ವಿನಿಮಯಕ್ಕೆ ಒಂದಷ್ಟು ಸಾಧನಗಳನ್ನು ಒದಗಿಸಬಲ್ಲದು. ಪಿಜಿಎಸ್ ರೈತರಿಂದ ಸ್ಥಳೀಯ ತಾಂತ್ರಿಕ ಜ್ಞಾನ ಹೆಚ್ಚಾಗಿ ವಿತರಣೆಯಾದರೂ, ಈ ವ್ಯವಸ್ಥೆ ಇತರೆ ಅನೇಕ ಮಾಹಿತಿಗಳನ್ನು ಹಂಚಿಕೊಳ್ಳಲೂ ಬಳಸಬಹುದು. ಸ್ಥಳೀಯ ಗಣಗಳ ನಡುವೆ ಮಾಹಿತಿ ವಿನಿಮಯ ಪದೇ ಪದೇ ನಡೆಯುತ್ತಿದೆಯಾದರೂ, ಗ್ರಾಹಕರು ಮತ್ತು ಇತರ ರೈತರಲ್ಲಿ ಸಾವಯವ ವಿಧಾನಗಳ ಬಗ್ಗೆ ಜಾಗೃತಿ ಮೂಡಿಸಲು, ವಿಶಾಲ ವ್ಯಾಪ್ತಿಯ ಭಾಗೀದಾರರನ್ನು ಏಕೀಕರಿಸುವ ಪ್ರಕ್ರಿಯೆಯಲ್ಲಿ ಪಿಜಿಎಸ್‌ಗೆ ಅಪಾರ ಸಾಮರ್ಥ್ಯ ಇದ್ದು, ಆ ದಿಕ್ಕಿನಲ್ಲಿ ಕೊಡುಗೆ ನೀಡಬಹುದಾಗಿದೆ. ಇಡೀ ಪ್ರಪಂಚದಲ್ಲಿ ರೈತರಲ್ಲಿ ಮಾಹಿತಿ ವಿನಿಮಯಕ್ಕೆ ಸಹಭಾಗಿಗಳ ಪರಾಮರ್ಶೆ ಒಂದು ಪ್ರಮುಖ ಸಾಧನವಾಗಿ ಕಂಡುಬಂದಿತು. ಬಹಳಷ್ಟು ಪಿಜಿಎಸ್ ಉಪಕ್ರಮಗಳು ಭಾಗೀದಾರರ ಬಳಕೆಗೆ ವಿಶಾಲ ವ್ಯಾಪ್ತಿಯ ಸಾಧನಗಳನ್ನು ಒದಗಿಸಿ ಅನುಷ್ಠಾನಗೊಳಿಸುತ್ತಿವೆ.

ಪಿಜಿಎಸ್‌ನ ಜ್ಞಾನ ಹಂಚಿಕೆ ವಿಧಾನಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಲ್ಲಿ, ಸಾವಯವ ವಿಭಾಗಕ್ಕೆ ಅದು ಹೆಚ್ಚು ಉಪಯುಕ್ತವಾಗಿದೆ. ಅದರಲ್ಲೂ ನಿರ್ದಿಷ್ಟವಾಗಿ ಎರಡು ವಿಷಯಗಳಲ್ಲಿ: ಮೊದಲನೆಯದಾಗಿ, ಅದು ಇನ್ನೂ ಅಭಿವೃದ್ಧಿಗೊಳ್ಳದ ಉಪಕ್ರಮಗಳು ಸೇರಿದಂತೆ, ಪಿಜಿಎಸ್ ಉಪಕ್ರಮಗಳಿಗೆ ಪ್ರೋತ್ಸಾಹ ಮತ್ತು ಪ್ರೇರಣೆ ನೀಡುತ್ತದೆ; ಎರಡನೆಯದಾಗಿ, ಬಹಳಷ್ಟು ಸಾಧನಗಳು ಕೇವಲ ಪಿಜಿಎಸ್‌ಗೆ ಮಾತ್ರ ಪರಿಮಿತಿಗೊಂಡಿಲ್ಲ, ಉಳಿದ ಸನ್ನಿವೇಶಗಳಲ್ಲೂ ಅದನ್ನು ಅಳವಡಿಸಿಕೊಳ್ಳಬಹುದಾಗಿದೆ. ಹೀಗೆ, ಪಿಜಿಎಸ್ ರೈತರ ನಡುವೆ ಜ್ಞಾನ ಹಂಚಿಕೆಗೆ ಸಾಧನಗಳನ್ನು ಒದಗಿಸಿ ಒಂದು ಕಡೆ, ಸಾವಯವ ವಿಭಾಗ ಅಭಿವೃದ್ಧಿಗೆ ಕೊಡುಗೆ ನೀಡಿದರೆ, ಮತ್ತೊಂದೆಡೆ ಉತ್ತಮ ಕೃಷಿ ವಿಧಾನಗಳ ಪ್ರಸಾರ ಮಾಡುತ್ತದೆ.

**References**


- IFOAM, Organics International (2007): Participatory Guarantee Systems. Shared Vision, Shared Ideals, http://www.ifoam.org/sites/default/files/page/files/ifoam_pgs_web.pdf
- Ingram, Farmer-scientist knowledge exchange: an essay. Paul B. Thompson and David M. Kaplan (Eds.): 2012, Encyclopedia of Food and Agricultural Ethics,, Volume 1. Springer
- Von Munchhausen et al., Lifelong learning for farmers: enhancing competitiveness, knowledge transfer and innovation in the eastern German state of Brandenburg. 2012, Studies in Agricultural Economics, 114/2



■ **Cornelia Kirchner**
IFOAM - Organics
International Charles-de-Gaulle Strasse 5
53113 Bonn - Germany
E-mail: C.Kirchner@ifoam.bio



**ಆಂಗ್ಲ ಮೂಲ**
ಲೀಸಾ ಇಂಡಿಯಾ, ಸಂಪುಟ 18, ಸಂಚಿಕೆ 1, ಮಾರ್ಚ್ 2016




***ಪಿಜಿಎಸ್ ಸಭೆ ನಡೆಯುತ್ತಿರುವುದು***